3. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ

(ಈ ಹಂತದಲ್ಲಿ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಮಾನ್ಯ ಸದಸ್ಯರುಗಳು ಎಲ್ಲರು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

ವಿಷಯ:– ಶ್ರೀ ಡಿ.ಕೆ. ರವಿ. ಐ.ಎ.ಎಸ್ ಅಧಿಕಾರಿಯ ನಿಗೂಢ ಸಾವಿನ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅಧ್ಯಕ್ಷರೆ, ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲ, Home Minister ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):– ಎಲ್ಲರೂ ಒಟ್ಟಿಗೆ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಸಿ.ಟಿ. ರವಿ:– ಶ್ರೀ ಡಿ.ಕೆ. ರವಿಯವರ ಸಾವಿನ ಹಿಂದೆ ಕಾಣದ ಕೈಗಳು ಕೆಲಸ ಮಾಡಿವೆ.

(ಗೊಂದಲ)

ಶ್ರೀ ಸಿ.ಟಿ. ರವಿ:– ರವಿಯವರ ಸಾವಿನ ಹಿಂದೆ ಕಾಣದ ಕೈಗಳು ಕೆಲಸ ಮಾಡಿವೆ, ಇದರ ಬಗ್ಗೆ ತನಿಖೆಯಾಗಬೇಕು. ದೊಡ್ಡ ಮಾಫಿಯಾ ಇದರ ಹಿಂದೆ ಇದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಈ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಇಡೀ ರಾಜ್ಯದಲ್ಲಿ ಈ ಬಗ್ಗೆ ಚರ್ಚೆಯಾಗುತ್ತಿದೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– Home Minister ಬಂದಿದ್ದಾರೆ. ಅವರು ಹೇಳಿಕೆಯನ್ನು ಕೊಡುತ್ತಾರೆ.

(ಗೊಂದಲ)

ಅಧ್ಯಕ್ಷರು:– ಈಗ ಮಾನ್ಯ ವಿರೋಧಪಕ್ಷದ ನಾಯಕರೇ, ಒಂದು ನಿಮಿಷ, ಇದು ಸಾರ್ವಜನಿಕ ಮಹತ್ವದ ಚರ್ಚೆ ಹೌದು. ಅದಕ್ಕಾಗಿ ಇದರ ಬಗ್ಗೆ ಬೇರೆ ರೂಪದಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಈಗ ಗೃಹ ಸಚಿವರು ಬಂದಿದ್ದಾರೆ. ಅವರು ಹೇಳಿಕೆ ಕೊಡುತ್ತಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ನಮಗೆ ಮಾತನಾಡಲಿಕ್ಕೆ ಅವಕಾಶ ಕೊಡಿ. ನಾವು ಮಾತನಾಡಿದ ಮೇಲೆ ಗೃಹ ಸಚಿವರು ಉತ್ತರ ಕೊಡಲಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಸರ್, Adjournment Motion ನಲ್ಲಿ ಈ ವಿಷಯದ ಮೇಲೆ ಚರ್ಚೆ ಮಾಡಲಿಕ್ಕೆ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರೆ ಈಗ ಒಂದು ಕೆಲಸ ಮಾಡೋಣ. ಈಗ ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತೇನೆ. ಮಾನ್ಯ ಗೃಹಸಚಿವರು ಸದನದಲ್ಲಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:– ಅಧ್ಯಕ್ಷರೆ, ಈಗ ಪ್ರಶ್ನೋತ್ತರ ಉಳಿದೆಲ್ಲವನ್ನು ಬದಿಗೊತ್ತಿಬಿಡಿ, ಈಗ ನಾವು ತಂದಿರುವ ನಿಲುವಳಿ ಸೂಚನೆಯ ಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಆರ್.ವಿ. ದೇಶಪಾಂಡೆ:– ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಿ ಸರ್.

ಅಧ್ಯಕ್ಷರು:- ಈಗ ಗೃಹ ಸಚಿವರು ಸದನದಲ್ಲಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ನೀವು Question Hour ಮಧ್ಯಾಹ್ನ ತೆಗೆದುಕೊಳ್ಳಿ.

ಶ್ರೀ ಆರ್. ಅಶೋಕ್:- ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಿ ಅಧ್ಯಕ್ಷರೆ. ಕೋಲಾರ, ಕೊಪ್ಪಳ ಜಿಲ್ಲೆಗಳಲ್ಲಿ ಎಲ್ಲಾ ಕಡೆ ಜನ ಬಂದ್ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ನಾನು clear cut statement ಕೊಡಲಿಕ್ಕೆ ತಯಾರಾಗಿದ್ದೇನೆ. ನಾನು statement ಕೊಟ್ಟ ನಂತರ ಅವರು ಮಾತನಾಡಲಿ.

(ಗೊಂದಲ)

ಶ್ರೀ ಸಿ.ಟಿ. ರವಿ:- ನಿಮ್ಮ Police Commissioner ತನಿಖೆ ಮಾಡುವ ಮುಂಚೆಯೇ ರವಿಯವರ ಸಾವು ಆತ್ಮಹತ್ಯೆ ಎಂದು ಹೇಳಿಕೆ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಸಭಾಧ್ಯಕ್ಷರೆ, ಈ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಿಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಈ ಪ್ರಕರಣವನ್ನು ಮುಚ್ಚಿಹಾಕಲಿಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು:- ಬೋಪಯ್ಯನವರೇ ಎಲ್ಲರೂ ಒಂದೇ ಸಮನಾಗಿ ಒಟ್ಟಿಗೆ ಮಾತನಾಡಿದರೆ ಏನು ಹೇಳುತ್ತಿದ್ದೀರಿ ಎಂದು ಗೊತ್ತಾಗುವುದಿಲ್ಲ. ಈಗ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- Immediately, ಈ ತಕ್ಷಣ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು:- ಈಗಲೇ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆ. ನಿಯಮ 69 ರ ಪ್ರಕಾರ ಈ ವಿಷಯದ ಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ. ಚರ್ಚೆಗೆ ತಯಾರಾಗಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ,..

ಅಧ್ಯಕ್ಷರು:- ಈಗ ಒಂದು ಕೆಲಸವನ್ನು ಮಾಡೋಣ. ಮಾನ್ಯ ಗೃಹ ಸಚಿವರು ಸದನದಲ್ಲಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇಲ್ಲ ಮಾನ್ಯ ಅಧ್ಯಕ್ಷರೆ, ಮೊದಲು ನಾವು ಮಾತನಾಡುತ್ತೇವೆ. ನಂತರ ಅವರು ಉತ್ತರ ಕೊಡಲಿ.

(ಗೊಂದಲ)

ಶ್ರೀ ಸಿ.ಟಿ. ರವಿ:- ರವಿಯವರ ಸಾವಿನ ಬಗ್ಗೆ ತನಿಖೆ ನಡೆಸಲು ತಂಡ ರಚನೆ ಮಾಡಿ ಅವರಿಂದ ವರದಿ ಪಡೆಯುವ ಮೊದಲೇ ನಿನ್ನೆ ಪೊಲೀಸ್ ಕಮಿಷನರ್ ರವಿಯವರ ಸಾವನ್ನು ಆತ್ಮಹತ್ಯೆ ಎಂದು statement ಕೊಡುತ್ತಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನಾವು ಮಾತನಾಡುವಾಗ ಅದರ ಬಗ್ಗೆಯೂ ಮಾತನಾಡುತ್ತೇವೆ.

ಅಧ್ಯಕ್ಷರು:- ಆಯಿತು, ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ, ಶ್ರೀ ಡಿ.ಕೆ. ರವಿ ಎಂಬ ಐ.ಎ.ಎಸ್. ಅಧಿಕಾರಿ ನಿನ್ನೆ ಸಾಯಂಕಾಲ ನಿಗೂಢ ರೀತಿಯಲ್ಲಿ ಸಾವನ್ನಪ್ಪಿದ್ದಾರೆ. ಇಡೀ ರಾಜ್ಯದಲ್ಲಿ

ಶ್ರೀ ಡಿ.ಕೆ. ರವಿಯವರ ಸಾವಿನ ಬಗ್ಗೆ ಬಹಳ ದೊಡ್ಡ ಪ್ರಮಾಣದಲ್ಲಿ ಇವತ್ತು ಚರ್ಚೆಯಾಗುತ್ತಿದೆ. ಒಬ್ಬ ಜನಸಾಮಾನ್ಯನಿಂದ ಹಿಡಿದು ಡಿ.ಕೆ. ರವಿಯವರ ಬಗ್ಗೆ ಇರುವ ಅನುಕಂಪ ಆತನ ಪ್ರಾಮಾಣಿಕತೆ, ದಕ್ಷತೆ, ಆ ಅಧಿಕಾರಿ ಎಲ್ಲಿಯವರೆಗೆ ಅಂದರೆ ನಿನ್ನೆ ಆ ಸುದ್ದಿ ಬಂದಾಗ ಬೆಂಗಳೂರಿನ Police Commissioner ತಕ್ಷಣ ಏನು ಹೇಳುತ್ತಾರೆಂದರೆ ಇದು ಆತ್ಮಹತ್ಯೆ ಎನ್ನುವ ರೀತಿಯಲ್ಲಿ ಒಂದು ಹೇಳಿಕೆಯನ್ನು ಕೊಡುವುದು ಏನಿದೆ ಬಹುಶಃ ಈ ರೀತಿ ಒಬ್ಬ ಐ.ಎ.ಎಸ್. ಅಧಿಕಾರಿ ನಿಗೂಢ ರೀತಿಯಲ್ಲಿ ಮೃತಪಟ್ಟಂಥ ಸಂದರ್ಭದಲ್ಲಿ ಇನ್ನು post Mortem ಆಗಿರುವುದಿಲ್ಲ, ಏನೂ ಆಗಿರುವುದಿಲ್ಲ, ತಕ್ಷಣವೇ ಅದಕ್ಕೆ reaction ಕೊಡುವಂಥ ಒಬ್ಬ ಪೊಲೀಸ್ ಅಧಿಕಾರಿಯ ವರ್ತನೆ ಬೇಜವಾಬ್ದಾರಿಯ ಪರಮಾವಧಿ ಎಂದು ಹೇಳುತ್ತಿದ್ದೇನೆ. ಇಂಥ ಒಬ್ಬ ಐ.ಎ.ಎಸ್. ಅಧಿಕಾರಿ, ಜನ ಮನ್ನಣೆ ಗಳಿಸಿರುವಂಥ ವ್ಯಕ್ತಿ ಎಲ್ಲೆಲ್ಲಿ ಕೆಲಸ ಮಾಡಿದ್ದಾರೆ, ಅಲ್ಲಿ ಅವರು ಕೆಲಸ ಮಾಡಿದಂಥ ಕಾರ್ಯವೈಖರಿ ನೋಡಿದಾಗ ಇವತ್ತು ಒಬ್ಬ ಅಧಿಕಾರಿ ಯಾವ ರೀತಿ ಸರ್ಕಾರಿ ಕೆಲಸವನ್ನು ಮಾಡಬೇಕು, ಅದನ್ನು ಪ್ರಾಮಾಣಿಕವಾಗಿ, ಪರಿಪೂರ್ಣವಾಗಿ ಮಾಡುವಂಥ ಕೆಲಸವನ್ನು ಡಿ.ಕೆ. ರವಿಯವರು ಮಾಡಿದ್ದಾರೆ. ಕೋಲಾರದಲ್ಲಿ ಕೇವಲ ಒಂದು ವರ್ಷ ಕಾಲ ಮಾತ್ರ D.C. ಆಗಿ ಕೆಲಸ ಮಾಡಿದ್ದರು. ಹೆಚ್ಚು ಕಡಿಮೆ ಒಂದೇ ವರ್ಷ ಕೆಲಸ ಮಾಡಿದ್ದರು. ಆ ಒಂದೇ ವರ್ಷದಲ್ಲಿ ಒಬ್ಬ ಅಧಿಕಾರಿ ಏನು ಕೆಲಸ ಮಾಡಬಹುದು? ಕೋಲಾರ ಜಿಲ್ಲೆಯ ಬಗ್ಗೆ ಕುಡಿಯುವ ನೀರು, ಎತ್ತಿನ ಹೊಳೆಯ ಬಗ್ಗೆ ನಿನ್ನೆ ಕೂಡ ಈ ಸದನದಲ್ಲಿ ಚರ್ಚೆಯಾಯಿತು. ಕೋಲಾರ ಬಹಳ ಹಿಂದುಳಿದಂಥ ಜಿಲ್ಲೆ. ಬಹಳಷ್ಟು backward taluks ಇರುವಂಥ ಜಿಲ್ಲೆ ಕೋಲಾರ. ಇವತ್ತು ಯಾರನ್ನಾದರೂ transfer ಮಾಡಿದರೆ ಕೋಲಾರ, ಬೀದರ್, ಕಲ್ಬುರ್ಗಿ, ಯಾದಗಿರ್ ಜಿಲ್ಲೆಗಳಿಗೆ ಹೋಗುವುದಿಲ್ಲವೆನ್ನುತ್ತಾರೆ. ಆದರೆ ಅದೇ ಡಿ.ಕೆ. ರವಿಯವರು ಆ ಕೋಲಾರ ಜಿಲ್ಲೆಯಲ್ಲಿ ಯಾವ ರೀತಿ ಕೆಲಸ ಮಾಡಿದ್ದಾರೆ ಎಂಬ ಬಗ್ಗೆ ಜನರ ಮನಸ್ಸಿನಲ್ಲಿದೆ. ಅವರ ಬಗ್ಗೆ ಜನ ಯಾವರೀತಿ ಮನ್ನಣೆ ಕೊಟ್ಟಿದ್ದಾರೆ ಎಂಬ ಬಗ್ಗೆ ಕೂಡ ಇವತ್ತು ಅಲ್ಲಿನ ಜನರ ಆಕ್ರೋಶ ನೋಡಿದರೆ ನಿಮಗೆ ಗೊತ್ತಾಗುತ್ತದೆ. ಇಲ್ಲಿಯೂ ಸಾಕಷ್ಟು ಸಲ

ಅಕ್ರಮ ಮರಳು ಗಣಿಗಾರಿಕೆ ಬಗ್ಗೆ ಚರ್ಚೆಯಾಯಿತು. ಯಾವ ಅಧಿಕಾರಿಗಳು bold ಆಗಿ steps ತೆಗೆದುಕೊಳ್ಳುತ್ತಾರೆ ಅವರು ಅಧಿಕಾರದಲ್ಲಿ ಇರುವುದಿಲ್ಲ. ಇಲ್ಲಿ ಅಕ್ರಮ ಮರಳು ಗಣಿಗಾರಿಕೆ ಬಗ್ಗೆ ಸಾಕಷ್ಟು ಸಲ ಚರ್ಚೆಯಾಯಿತು. ಯಾವ ಅಧಿಕಾರಿಗಳು ಬೋಲ್ಡ್ ಆಗಿ ಸ್ಟೆಪ್ಸ್ ತೆಗೆದುಕೊಳ್ಳುತ್ತಾರೆ ಅವರು ಅಧಿಕಾರದಲ್ಲಿ ಇರುವುದಿಲ್ಲ. ಮಂಡ್ಯ ಹಾಗೂ ಹಾಸನ ಕಡೆಗಳಲ್ಲಿ ಕೆಲವು ಅಧಿಕಾರಿಗಳು, ತಹಶೀಲ್ದಾರರು ಅಕ್ರಮ ಮರಳು ಗಣಿಗಾರಿಕೆಯಲ್ಲಿ ಸಾಗಾಣಿಕೆ ಮಾಡುವಂತಹ ಟ್ರಕ್‌ಗಳನ್ನು, vehicle ಗಳನ್ನು ಹಿಡಿದರೆ ಅವರ ಮೇಲೆ vehicle ಅನ್ನು ಹರಿಸಿ ಅವರನ್ನು murder ಮಾಡುವಂತಹ ಪ್ರಯತ್ನ ಕೆಲವು ತಾಲ್ಲೂಕುಗಳಲ್ಲಿ ನಡೆಯಿತು. ಅಂದರೆ, ಪ್ರಾಮಾಣಿಕವಾದಂತಹ ಅಧಿಕಾರಿಗಳು ಈ ರೀತಿಯ illegal activities ಬಂದ್ ಮಾಡುವಂತಹ ಕೆಲಸ ಮಾಡುವುದಕ್ಕೆ ಹೊರಟವರ ಮೇಲೆ ಯಾವ ರೀತಿಯಾದಂತಹ ಸಿಟ್ಟು ತೋರಿಸುತ್ತಾರೆ ಎಂದರೆ vested interest ಏನಿದೆ, ಲಾಬಿ ಏನಿದೆ ಅದಕ್ಕೆ ಯಾವ ರೀತಿಯಾಗಿ ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದು ಈಗ ನಮ್ಮ ಮುಂದೆ ಇರುವಂತಹದ್ದಾಗಿದೆ. ಇವತ್ತು ಅಕ್ರಮ ಮರಳು ಗಣಿಗಾರಿಕೆ ಕೆಲಸವನ್ನು ತಡೆಹಿಡಿಯುವಂತಹ ಕೆಲಸವನ್ನು ಡಿ.ಕೆ. ರವಿಯವರು ಮಾಡಿದರು. ಅಲ್ಲಿ ದಲಿತರ ಗುಡಿಸಲುಗಳಿಗೆ ಹೋಗಿ ಊಟ ಮಾಡುವಂತಹ ಕೆಲಸ ಮಾಡಿ, ದಲಿತರಿಗೆ confidence ತರುವಂತಹ ಕೆಲಸವನ್ನು ಡಿ.ಕೆ. ರವಿಯವರು ಮಾಡಿದರು. Real estate ಜನರು ಯಾರಿದ್ದಾರೆ ಮತ್ತು ಸರ್ಕಾರದ ಲ್ಯಾಂಡ್‌ಅನ್ನು encroachment ಮಾಡಿದಂತಹವರು ಯಾರಿದ್ದಾರೆ, ಅಕ್ರಮವಾದ ಕೆಲಸಗಳನ್ನು ಯಾರು ಮಾಡುತ್ತಾರೆ ಅದೆಲ್ಲವನ್ನೂ ತಡೆಹಿಡಿಯುವಂತಹದ್ದು ಹಾಗೂ ಅದನ್ನು ಬಯಲುಗೆಳೆಯುವಂತಹ ಕೆಲಸವನ್ನು ಮಾಡಿದರು. ಸರ್ಕಾರಿ ಲ್ಯಾಂಡ್‌ಗಳನ್ನು ಸರ್ಕಾರಕ್ಕೆ ವಶಪಡಿಸಿಕೊಳ್ಳುವಂತಹ ಕೆಲಸವನ್ನು ಒಬ್ಬ ಪ್ರಾಮಾಣಿಕ ಅಧಿಕಾರಿಯಾಗಿ, ದಕ್ಷ ಅಧಿಕಾರಿಯಾಗಿ ಡಿ.ಕೆ. ರವಿಯವರು ಮಾಡಿದ್ದಾರೆ. ಜನಸಾಮಾನ್ಯರ ದಿನನಿತ್ಯದ ಸಮಸ್ಯೆಗಳಿಗೆ ಸ್ಪಂದನೆ ಮಾಡುವಂತಹ ಕೆಲಸವನ್ನು ಒಬ್ಬ ಜಿಲ್ಲಾಧಿಕಾರಿಯಾಗಿ ಮಾಡಿದ್ದಾರೆ. ಮೊನ್ನೆ last time ಅಧಿವೇಶನದಲ್ಲಿ ನಾನು

ಹೇಳಿದ್ದೆ. ಬೀದರ್ ಡಿ.ಸಿ. ಯವರು ತಮ್ಮ ಕ್ಯಾಂಪಸ್‌ನಲ್ಲಿ ಯಾವುದೇ ರೀತಿಯಾದ delegation, strike 144 ಹಾಕಿದಂತಹ ಉದಾಹರಣೆ ಒಂದು ಕಡೆಯಿದೆ. ಆದರೆ, ಈ ಡಿ.ಕೆ. ರವಿ ಜಿಲ್ಲಾಧಿಕಾರಿಯಾಗಿ ಜನಮಾನಸದಲ್ಲಿದ್ದು ಅವರ ಸಮಸ್ಯೆಗಳನ್ನು ಕೇಳಿಕೊಂಡು ಅವರ ಜೊತೆ ಒಂದಾಗಿ ಕೆಲಸ ಮಾಡಿ ಬಡವರು, ದೀನದಲಿತರ ಬಗ್ಗೆ ಸ್ಪಂದನೆ ಮಾಡುವಂತಹ ಕೆಲಸವನ್ನು ಡಿ.ಕೆ. ರವಿಯವರು ಮಾಡಿದ್ದಾರೆ. ಹೀಗಾಗಿ ಸರ್ಕಾರದವರು ಆತನನ್ನು transfer ಮಾಡಿದರು. ಏಕೆ transfer ಮಾಡಿದ್ದೀರಿ? ಬಹುಶಃ ಮಾನ್ಯ ಮುಖ್ಯಮಂತ್ರಿಯವರು ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ಆ ಎಲ್ಲಾ ಡಿ.ಸಿ. ಗಳಿಗೆ head ಇರುವಂತಹವರು, ಇವತ್ತು ಇಡೀ ರಾಜ್ಯಕ್ಕೆ administration head ಆಗಿರುವಂತಹವರು ಮಾನ್ಯ ಮುಖ್ಯಮಂತ್ರಿಗಳಾಗಿದ್ದಾರೆ. ಒಬ್ಬ ಪ್ರಾಮಾಣಿಕ ಅಧಿಕಾರಿಯಾದಂತಹ ಡಿ.ಕೆ. ರವಿಯವರನ್ನು ಎಲ್ಲಿ ಅಂತಹ ಪ್ರಾಮಾಣಿಕ ಅಧಿಕಾರಿಗಳಿರುತ್ತಾರೆ, ದಕ್ಷ ಅಧಿಕಾರಿಗಳಿರುತ್ತಾರೆ, ಸರ್ಕಾರದ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಾರೆ, ಅಂತಹವರಿಗೆ ಕನಿಷ್ಠ 3–5 ವರ್ಷಗಳ ಕಾಲ ಅಲ್ಲಿಯೇ ಇರುವ ಹಾಗೆ ಸರ್ಕಾರ ವ್ಯವಸ್ಥೆ ಮಾಡಬೇಕು. ಆಗ ಅದು good administration ಆಗುತ್ತದೆ. ಉತ್ತಮ ಸರ್ಕಾರದ ಒಂದು ನಡವಳಿಕೆಯಾಗಿದೆ. ಆದರೆ, ಯಾರು ಒತ್ತಡ ತೆಗೆದುಕೊಂಡು ಬಂದರು, ಯಾರು vested interest ಇದ್ದರು, ಯಾರು ಮರಳು ಗಣಿಗಾರಿಕೆ ಮಾಡುವಂತಹ ಲಾಬಿ ಹೊಂದಿದ್ದರು ಮತ್ತು ಇನ್ನಿತರೆ ಹಲವಾರು illegal ಚಟುವಟಿಕೆ ಮಾಡುವಂತಹವರು ಏನು ಸರ್ಕಾರದ ಮೇಲೆ ಒತ್ತಡ ತೆಗೆದುಕೊಂಡು ಬರುತ್ತಾರೆ, ಆ ಒತ್ತಡಕ್ಕೆ ಮಣಿದ ಸರ್ಕಾರ ಅಂತಹ ಒಬ್ಬ ಪ್ರಾಮಾಣಿಕ ಅಧಿಕಾರಿಯನ್ನು ಕೋಲಾರದಿಂದ ನೀವು ಹೊರಗಡೆಗೆ ಬೆಂಗಳೂರಿಗೆ transfer ಮಾಡುತ್ತೀರಿ ಎಂದರೆ, ನೋಡಿ ಇದರ ಪಾಪ ನಿಮ್ಮ ಸರ್ಕಾರಕ್ಕೂ ಬರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಆವತ್ತು transfer ಮಾಡಿದಾಗ ಕೋಲಾರದಲ್ಲಿ ಜನ ದಂಗೆ ಎದ್ದರು. ಒಂದು ವಾರಗಟ್ಟಲೆ strike ನಡೆಯಿತು. ಕೋಲಾರ ಬಂದ್ ಆಯಿತು. ಅದು ನಿಮಗೆ ಏನೂ ಅನಿಸಲಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಏನೂ ಅನಿಸಲಿಲ್ಲ. ಕೊನೆಗೆ law and

order situation ಎಲ್ಲಿಯವರೆಗೆ ಬಂತು ಎಂದರೆ ಬಹಳ worst ಆಗಿರುವಂತಹ situation ಬಂದಾಗ ಇದೇ ಡಿ.ಕೆ. ರವಿಯವರು ಅಲ್ಲಿಗೆ ಹೋಗಿ ಇಲ್ಲ ನಾನಾಗಿಯೇ transfer ತೆಗೆದುಕೊಂಡಿದ್ದೇನೆ, ನೀವು ಸಮಾಧಾನದಿಂದ ಇರಪ್ಪ, ಶಾಂತತೆ ಕದಡಬೇಡಿ ಎಂದು ಆತ request ಮಾಡಿದ ಮೇಲೆ ಅಲ್ಲಿ ಶಾಂತಿ ನೆಲೆಸಿತು. ಈ ರೀತಿ ಜನರು ಆಕ್ರೋಶಗೊಳ್ಳಲಿಕ್ಕೆ ಕಾರಣವೇನು? ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ನಿನ್ನೆ ಆತ ಮರಣ ಹೊಂದಿದಂತಹ ಸುದ್ದಿಯನ್ನು ಕೇಳಿ ಆತ ಎಲ್ಲಿ ಸೇವೆ ಮಾಡಿದ್ದಾರೆ ಅಂದರೆ ಕೋಲಾರದಲ್ಲಿ ಜನರ response ನೋಡಿ, ಜನರ ಪ್ರತಿಭಟನೆ ನೋಡಿ, ಅಲ್ಲಿ ಯಾವರೀತಿ ಸ್ವಯಂ ಘೋಷಿತವಾಗಿ ಇವತ್ತು ಜನರೆಲ್ಲರೂ ಬೀದಿಗಿಳಿದು ದಂಗೆ ಎದ್ದಿದ್ದಾರೆ, ಇಡೀ ಕೋಲಾರ ಬಂದ್ ಮಾಡಿದ್ದಾರೆ. ಇವತ್ತೂ ಕೋಲಾರ ಬಂದ್ ಇದೆ. ಇವತ್ತು ಯಾರು ಅವರನ್ನು transfer ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಅವರ ಮೇಲೆ ಆ ಜನರ ಸಿಟ್ಟನ್ನು ನೀವೆಲ್ಲರೂ ನೋಡುತ್ತಿದ್ದೀರಿ. ಇದರಲ್ಲಿ ರಾಜಕಾರಣ ಮತ್ತೊಂದು ಏನೂ ಮಾಡುವಂತಹದ್ದು ಇಲ್ಲ. ಜನರು ಒಂದು ಸಲ ಮನಸ್ಸು ಮಾಡಿ ದಂಗೆ ಎದ್ದರೆ, ಯಾರನ್ನಾದರೂ ಒಬ್ಬರನ್ನು ಜನರು ಪ್ರೀತಿ ಮಾಡುತ್ತಿದ್ದು ಅವರಿಗೋಸ್ಕರ ಪ್ರತಿಭಟನೆಗಿಳಿದರೆ ಏನಾಗುತ್ತದೆ, ಉದಾಹರಣೆಗೆ ಇವತ್ತು ಕೋಲಾರದ ಜನರು ದಂಗೆ ಎದ್ದಿರುವುದನ್ನು ನಾವು ನೋಡುತ್ತಿದ್ದೇವೆ. ಇಂತಹ ಒಬ್ಬ ವ್ಯಕ್ತಿಯನ್ನು transfer ಮಾಡಿದ್ದಾರೆ, ಬಹುಶಃ ಅಂತಹ ಪ್ರಾಮಾಣಿಕ ಅಧಿಕಾರಿಯನ್ನು retain ಮಾಡಬಹುದಾಗಿತ್ತು. ಸರ್ಕಾರ ಇದನ್ನೂ ಕೂಡ ಸ್ಪಷ್ಟೀಕರಣ ಮಾಡಬೇಕು. ಆವತ್ತು transfer ಮಾಡುವುದಕ್ಕೆ ಕಾರಣೀಕರ್ತರಾರು? ಈ ಸದನದಲ್ಲಿ ಅದು ಬಹಿರಂಗವಾಗಬೇಕು. ಯಾರ್ಯಾರು ಕಾರಣೀಕರ್ತರಿದ್ದಾರೆ, ಆತನನ್ನು transfer ಮಾಡುವುದಕ್ಕೆ ಯಾರು ಹಿಂದೆ ಇದ್ದಾರೆ, ಅವೆಲ್ಲವೂ ಬಹಿರಂಗವಾಗಬೇಕು ಎನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಆವತ್ತು ಬಂದರು. ಅಲ್ಲಿಂದ ಅವರಿಗೆ commercial Tax Office ಗೆ transfer ಆಯಿತು. ಅಲ್ಲಿಯೂ ಸಹ ಹಿರಿಯ ಅಧಿಕಾರಿಗಳಾಗಿ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದರು. ನೋಡಿ

ಒಬ್ಬರು ಅಧಿಕಾರಿಯನ್ನು ನೀವು ಎಲ್ಲಿಗೆ ಕಳುಹಿಸಿ ಅಂದರೆ ಯಾವುದೇ ಇಲಾಖೆಗೆ ಕಳುಹಿಸಿ, ಆತ ಸರಿಯಾಗಿ ಪ್ರಾಮಾಣಿಕವಾಗಿ, ದಕ್ಷವಾಗಿ ಕೆಲಸ ಮಾಡುತ್ತಿದ್ದರೆ ಆ ಇಲಾಖೆಗೆ ಆತ ನ್ಯಾಯ ಕೊಡುತ್ತಾರೆ. ಇವರು Commercial Tax Office ಗೆ ಬಂದರು. ಬಂದಮೇಲೆ ಡಿ.ಕೆ. ರವಿಯವರು ಸುಮ್ಮನೆ ಕುಳಿತುಕೊಳ್ಳಲಿಲ್ಲ. ಬಹುಶಃ ಇತ್ತೀಚಿನ ಒಂದು ತಿಂಗಳಿನ ಪತ್ರಿಕೆಗಳನ್ನು ತೆಗೆದು ನೋಡಿ. ಇವತ್ತು ಬೆಂಗಳೂರಿನಲ್ಲಿ ಯಾರು ಪ್ರತಿಷ್ಠಿತ builders ಇದ್ದಾರೆ, ಯಾರ್ಯಾರು real estate field ನಲ್ಲಿ ಕೆಲಸ ಮಾಡುವಂತಹ ವ್ಯಕ್ತಿಗಳಿದ್ದಾರೆ, ಕಾರ್ಪೊರೇಟ್ ಆಫೀಸರ್ಸ್ ಇದ್ದಾರೆ, businessmen ಗಳಿದ್ದಾರೆ, ಅದೆಲ್ಲಾ ಪತ್ರಿಕೆಗಳಲ್ಲಿ ಬಂದಿದೆ, ಇತ್ತೀಚಿನ 2–3 ತಿಂಗಳುಗಳ ಪತ್ರಿಕೆಗಳನ್ನು ತೆಗೆದುನೋಡಿದರೆ ಗೊತ್ತಾಗುತ್ತದೆ. ಅವರ ಮೇಲೆಲ್ಲಾ ಡಿ.ಕೆ. ರವಿಯವರು raid ಮಾಡಿದ್ದಾರೆ. ಇವತ್ತು ಕೇವಲ 2–3 ತಿಂಗಳುಗಳಲ್ಲಿ ರೂ. 300–400 ಕೋಟಿಗಳಷ್ಟು ಆದಾಯ commercial tax ಗೆ ಬಂತು. ಈ ಬಜೆಟ್‌ನಲ್ಲಿ ನಾವು ಚರ್ಚೆ ಮಾಡುತ್ತೇವೆ. ಇವತ್ತು ನಿಮ್ಮ ಬಜೆಟ್‌ನ ಸಮೀಕ್ಷೆ, ಸರ್ವೆಯನ್ನು ನೋಡಿದಾಗ ಇವತ್ತು ಎಲ್ಲಾ revenue collection ಏನಿದೆ ಅದು down ಆಗಿದೆ. Commercial tax ಇರಬಹುದು, excise ಇರಹುದು, stamp duty ಇರಬಹುದು, ಎಲ್ಲವೂ ಇವತ್ತು revenue ಕಡಿಮೆಯಾಗಿದೆ. ಇಂತಹ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಕೇವಲ ಕೆಲವೇ ದಿವಸಗಳಲ್ಲಿ, ಕೆಲವೊಂದು real estate groups ಗೆ ಸಂಬಂಧಿಸಿದಂತೆ builders ಏನಿದ್ದಾರೆ ಅವರ ಮೇಲೆ raid ಮಾಡಿದಾಗ ರೂ. 300–400 ಕೋಟಿಗಳು ಇವತ್ತು immediately recovery ಆಗುತ್ತದೆ ಎಂದರೆ ಎಷ್ಟೊಂದು tax evasion ನಮ್ಮ ರಾಜ್ಯದ, ಬೆಂಗಳೂರಿನಲ್ಲಿರಬಹುದು ಎಂದು ನಾವು ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಬಹುಶಃ ಪ್ರಾಮಾಣಿಕವಾದ ಅಧಿಕಾರಿಗಳನ್ನು ಕೆಲಸ ಮಾಡುವುದಕ್ಕೆ ನೀವು ಬಿಡಿ. ನಿಮಗೆ ಇವತ್ತು ರೂ. 10,000 ಕೋಟಿಗಳಲ್ಲ, ರೂ. 20,000 ಕೋಟಿ revenue ಬರುತ್ತದೆ. ಆದರೆ, ಪ್ರಾಮಾಣಿಕವಾದ ಅಧಿಕಾರಿಗಳನ್ನು ಯಾರೂ ಬಿಡುತ್ತಿಲ್ಲ. ಹೀಗಾಗಿ ಇವತ್ತು ವ್ಯವಸ್ಥೆ ಕೆಟ್ಟು ಹೋಗುತ್ತಿದೆ. ನಾವೆಲ್ಲಾ ಭ್ರಷ್ಟ ವ್ಯವಸ್ಥೆಗೆ

ಹೋಗುತ್ತಿದ್ದೇವೆ. ಈ ಭ್ರಷ್ಟ ವ್ಯವಸ್ಥೆಯನ್ನು ತಡೆಹಿಡಿಯುವಂತಹ ಒಬ್ಬ ಪ್ರಾಮಾಣಿಕ ಅಧಿಕಾರಿಯನ್ನು ರಕ್ಷಣೆ ಮಾಡುವಂತಹ ಪರಿಸ್ಥಿತಿ ಇವತ್ತು ರಾಜ್ಯದಲ್ಲಿಲ್ಲ. ಹೀಗಾಗಿ ಇವತ್ತು ಇದು suicide ಎಂದು ಹೊರಗೆ ಏನು ಸುದ್ದಿಯಾಗುತ್ತಿದೆ, ನಾನು ಹೇಳುತ್ತೇನೆ, ಇದು suicide ಅಲ್ಲ, ಇದು ಒಂದು ಮರ್ಡರ್. ಯಾರು ಇಂತಹ ಅಧಿಕಾರಿಯನ್ನು ಮರ್ಡರ್ ಮಾಡಿದ್ದಾರೆ, ಇದು investigation ಆಗಬೇಕಾಗಿದೆ. ಇದನ್ನು ಸುಮ್ಮನೆ suicide ಎಂದು ಸುದ್ದಿ ಮಾಡುತ್ತಿದ್ದಾರೆ. ನೋಡಿ ಒಬ್ಬ ದಕ್ಷ ಅಧಿಕಾರಿ, ಮಾನಸಿಕವಾಗಿ confident ಇದ್ದ ಅಧಿಕಾರಿ, ಬೇರೆಯವರಿಗೆಲ್ಲಾ ಪಾಠ ಹೇಳುವಂತಹ ಒಬ್ಬ ಅಧಿಕಾರಿ, ಡಿ.ಕೆ. ರವಿಯಂತಹ ವ್ಯಕ್ತಿತ್ವ ಇರುವ ವ್ಯಕ್ತಿ suicide ಮಾಡಿಕೊಳ್ಳುವುದಕ್ಕೆ ಸಾಧ್ಯತೆಯಿದೆಯೇ? ಯಾರೂ ಜಗತ್ತಿನಲ್ಲಿ ನಂಬುವುದಕ್ಕೆ ಸಾಧ್ಯವಿಲ್ಲ. ಅಂತಹ ಡಿ.ಕೆ. ರವಿಯಂತಹ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಸುದ್ದಿ spread ಮಾಡುವುದು ಏನು ಇದೆಯೆಲ್ಲಾ, ಇದು ಒಂದು ವ್ಯವಸ್ಥಿತವಾದಂತಹ ಕುತಂತ್ರ ಎಂದು ನಾನು ಹೇಳುತ್ತೇನೆ. ಹೀಗಾಗಿ ನಿನ್ನೆ ಮಾಧ್ಯಮದವರು ಬಂದಾಗ ನಾನು ಹೇಳಿದೆ. ಇದು suspect ಇದೆ, ಆತನ ಸಾವಿನ ಬಗ್ಗೆ ನಿಗೂಢತೆಯಿದೆ. ಇದಕ್ಕೆ ಸಂಪೂರ್ಣವಾದಂತಹ ನಿಷ್ಪಕ್ಷವಾದಂತಹ ತನಿಖೆಯಾಗಬೇಕು. ಇಲ್ಲದೇ ಹೋದರೆ ನಿಜಾಂಶ ಹೊರಗೆ ಬರುವುದಿಲ್ಲ. ಇದರಲ್ಲಿ ಯಾರಿದ್ದಾರೆ, ಯಾರಾದರದೂ ಲಾಭ ಇದೆಯೇ, ಇದರ ಹಿಂದೆ builders ಇದ್ದಾರೆಯೇ, developers ಇದ್ದಾರೆಯೇ ಅಥವಾ ರಾಜಕಾರಣಿಗಳಿದ್ದಾರೆಯೇ ಇದೆಲ್ಲಾ ಹೊರಗಡೆಗೆ ಬರಬೇಕಾಗಿದೆ. ಇಲ್ಲದಿದ್ದರೆ, ಈ ರೀತಿ ಒಬ್ಬ ಪ್ರಾಮಾಣಿಕ ದಕ್ಷ ಅಧಿಕಾರಿಗೆ ನಾವು ರಾಜ್ಯದಲ್ಲಿ ರಕ್ಷಣೆ ಕೊಡದಿದ್ದರೆ ನಾಳೆ entire administration collapse ಆಗುತ್ತದೆ. ಇನ್ನು ಪ್ರಾಮಾಣಿಕ ಅಧಿಕಾರಿಗಳು decide ಮಾಡಿಬಿಡುತ್ತಾರೆ. ನಾವು ಇಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ನಮಗೆ ಏನೂ ಭವಿಷ್ಯವಿಲ್ಲವೆಂದು, ನಮ್ಮ ಜೀವಕ್ಕೆ ರಕ್ಷಣೆಯಿಲ್ಲವೆನ್ನುವ ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ಸಾಧ್ಯತೆಯಿದೆ. ಆ ಒಂದು ವ್ಯವಸ್ಥೆ ಮುಂದುವರೆಯುವುದಕ್ಕೆ ಸಾಧ್ಯತೆಯಿದೆ. ನೀವು ಈ

ಸರ್ಕಾರ ಬಂದಮೇಲೆ ಕಳೆದ 2–3 ವರ್ಷಗಳಿಂದ ಏನೇನು ನೋಡಿದ್ದೀರಿ ನೋಡಿ.

ಶ್ರೀಮತಿ ರಶ್ಮಿ ಮಹೇಶ್ ಎಂಬ ಪ್ರಾಮಾಣಿಕ ಅಧಿಕಾರಿಯಿದ್ದರು, ಯಾವ್ಯಾವ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದ್ದರು, ಅವರ ಮೇಲೆ ಸಾರ್ವಜನಿಕವಾಗಿ ಹಲ್ಲೆಯಾಗುತ್ತದೆ. ಅಲ್ಲಿ ಹೇಳುವವರು, ಕೇಳುವವರು ಯಾರೂ ಇಲ್ಲ. ಆ ರಿಪೋರ್ಟ್ ಏನಾಯಿತು, ಇಲ್ಲಿಯವರೆಗೆ ರಾಜ್ಯ ಸರ್ಕಾರ ಆ ರಶ್ಮಿ ಮಹೇಶ್‌ರವರ ಬಗ್ಗೆ ಒಂದು statement ಅನ್ನೂ ಸಹ ಸದನದಲ್ಲಿ ಮಾಡಿಲ್ಲ. ಅದರ background ಏನು, ಏನು misappropriation ಆಗಿದೆ, ಯಾವುದೂ ಇವತ್ತಿನವರೆಗೂ ಹೊರಗೆ ಬಂದಿಲ್ಲ. ಶ್ರೀಮತಿ ರಶ್ಮಿ ಮಹೇಶ್‌ರವರ ಪರಿಸ್ಥಿತಿ ಹಾಗೆ ಇದೆ.

ಕೊಪ್ಪಳದಲ್ಲಿ ತುಳಸಿ ಮದನೆನಿ ಎಂದು ಒಬ್ಬರು ಮಹಿಳೆ ಪ್ರಾಮಾಣಿಕ ಅಧಿಕಾರಿಯಾಗಿದ್ದರು. ಯಾವುದೋ illegal activities ಮಾಡುವಂತಹದ್ದನ್ನು ಕೆಡವಲಿಕ್ಕೆ ಹೋದಾಗ, ನೋಟೀಸ್ ಕೊಟ್ಟಾಗ ಅದರಲ್ಲಿ ರಾಜಕಾರಣಿಗಳು involve ಆಗಿ ಅವರನ್ನೂ transfer ಮಾಡಿದರು. ಅಂದರೆ ಪ್ರಾಮಾಣಿಕವಾಗಿ ಕೆಲಸ ಮಾಡುವವರು ಇಲ್ಲಿ ಯಾರೂ ಬೇಕಾಗಿಲ್ಲ. ಇನ್ನೂ ಹಲವಾರು ಉದಾಹರಣೆಗಳನ್ನು ನಾವು ಕೊಡಬಹುದು.

ಇತ್ತೀಚೆಗೆ ನಾನು ಮೈಸೂರಿನ ವಿಷಯ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಸ್ಥಳ ಅದು. ಅಲ್ಲಿ ಒಬ್ಬರು ಚೆಲುವರಾಜು ಎಂಬುವವರು ಸಬ್‌ರಿಜಿಸ್ಟ್ರಾರ್‌ರವರು ಈ ಭ್ರಷ್ಟಾಚಾರದ ವ್ಯವಸ್ಥೆಯನ್ನು ನನಗೆ ನಿಲ್ಲಿಸುವುದಕ್ಕೆ ಆಗುತ್ತಿಲ್ಲ, ನಾನು ಅಸಹಾಯಕನಾಗಿದ್ದೇನೆ, ಇನ್ನು ನಾನು ಹೇಗೆ ಕೆಲಸ ಮಾಡಲಿ ಎಂದು ಅದಕ್ಕಾಗಿ ನಾನು ರಾಜೀನಾಮೆ ಕೊಟ್ಟು ಹೊರಗೆ ಬರುತ್ತೇನೆ ಎಂದು ರಾಜೀನಾಮೆ ಕೊಡುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ ಎಂದರೆ, ಪ್ರಾಮಾಣಿಕರು ಇಲ್ಲಿ ಕೆಲಸ ಮಾಡಬೇಕೋ ಬೇಡವೋ ಎಂದು ನಾವು ಇವತ್ತು ವಿಚಾರ ಮಾಡಬೇಕಾಗಿದೆ.

ಕೋಲಾರದಲ್ಲಿ ನಾಗರಾಜುರವರಂತಹ ತಹಶೀಲ್ದಾರರು ಮರಳು ಮಾಫಿಯಾಗೆ ಸಂಬಂಧಿಸಿದಂತೆ ಆತನ ಮೇಲೆ ಲಾರಿ ಹತ್ತಿಸುವಂತಹ ಪ್ರಯತ್ನ ಮಾಡಿದ್ದಾರೆ. ಆ ಮರಳು ಮಾಫಿಯಾವನ್ನು ತಡೆಹಿಡಿಯುವಂತಹ ಒಬ್ಬ ಪ್ರಾಮಾಣಿಕ ತಹಶೀಲ್ದಾರ್ ನಾಗರಾಜ್‌ರವರ ಮೇಲೆ ಸಹಿತ ಇವತ್ತು ಈ ರೀತಿಯಾದಂತಹ ಹಲ್ಲೆ ಮಾಡುವುದು ಹಾಗೂ ಲಾರಿ ಮೇಲೆ ಹತ್ತಿಸುವಂತಹ ಕೆಲಸವಾಯಿತು.

ಅದೇ ರೀತಿ ನಾಗಮಂಗಲದಲ್ಲಿ ಇದೇ ರೀತಿ ಮರಳು ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಲಾರಿಯನ್ನು ತಡೆಹಿಡಿಯುವಂತಹ ಕೆಲಸ ಮಾಡಿದ Dy.SP ಸವಿತ ಉಗಾರ್ ಮೇಲೆ ಲಾರಿಯಿಂದ accident ಮಾಡಿಸುವಂತಹ ಕೆಲಸ ಅಲ್ಲಿ ನಡೆಯಿತು. ಅಂದರೆ, ರಾಜ್ಯದಲ್ಲಿ ಪ್ರಾಮಾಣಿಕ ಅಧಿಕಾರಿಗಳಿಗೆ ಭವಿಷ್ಯವಿಲ್ಲವೇ? ಈ ವ್ಯವಸ್ಥೆ ಮುಂದುವರೆದರೆ ಯಾರೂ ಕೆಲಸ ಮಾಡುವುದಿಲ್ಲ. Administration collapse ಆಗುತ್ತದೆ. ಈ ರೀತಿ ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ ಕೊಡುವಂತಹದ್ದು ಆಗಬೇಕು. ನಿನ್ನೆ ಮಾಧ್ಯಮದಲ್ಲಿ ಮತ್ತೆ ಬೇರೆ ಬೇರೆ ಕಡೆಗಳಿಂದ ಸುದ್ದಿಗಳು ಬರುತ್ತಿವೆ. ಡಿ.ಕೆ. ರವಿಯವರಿಗೆ ಭೂಗತ ವ್ಯಕ್ತಿಗಳಿಂದ ಕೊಲೆ ಬೆದರಿಕೆ ಮತ್ತೊಂದು threatening calls ಬರುತ್ತಿವೆ ಎನ್ನುವಂತಹ ಮಾಹಿತಿಗಳು ಬರುತ್ತಿವೆ. ಅದು ನಿಜವೋ ಏನೋ ಎಂದು ಸತ್ಯಾಂಶವನ್ನು ಸರ್ಕಾರ ಹೇಳಬೇಕು. Investigation authority ಹೇಳಬೇಕು. ಹೀಗಾಗಿ ಯಾರ್‍ಯಾರು ಟೆಲಿಫೋನ್ ಮಾಡಿದ್ದರು, ಅವರ ಮೊಬೈಲ್‌ಗೆ ಕಾಲ್ ಏನು ಬಂದಿತ್ತು, ಮೊಬೈಲ್ safe custody ಯಲ್ಲಿ ಇಟ್ಟಿದ್ದರೋ ಇಲ್ಲವೋ ನೋಡಬೇಕು. ಡಿ.ಕೆ. ರವಿಯವರ ಮೊಬೈಲ್‌ಗೆ ಯಾವ್ಯಾವ ಕಾಲ್ ಬಂದಿದ್ದವು, ಅವುಗಳನ್ನು ನಾಶ ಮಾಡುವಂತಹದ್ದು ಏನಾದರೂ ನಡೆದರೆ ನಾಳೆ ಏನು ಆಗುವುದಕ್ಕೆ ಸಾಧ್ಯತೆಯಿದೆ ಎಂಬುದು impartial ತನಿಖೆಯಾಗಬೇಕಾಗಿದೆ. ಇಡೀ ರಾಜ್ಯದಲ್ಲಿ ಇದರ ಬಗ್ಗೆ ಚರ್ಚೆಯಾಗುತ್ತಿದ್ದು, ಇವತ್ತು ಜನ ದಂಗೆ ಏಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಐ.ಎ.ಎಸ್. ಅಧಿಕಾರಿಗೆ ರಕ್ಷಣೆ ಇಲ್ಲದಿರುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಬಿ.ಬಿ.ಎಂ.ಪಿಯಲ್ಲಿ ಸಾವಿರಾರು ಕೋಟಿ

ರೂ.ಗಳ ಹಗರಣಗಳಿರುವ ಫೈಲ್‌ಗಳನ್ನು ಮುಚ್ಚಿ ಹಾಕುವಂತಹ ಪ್ರಯತ್ನ ನಡೆದ ವಿಚಾರ ಲೋಕಾಯುಕ್ತದಲ್ಲಿದೆ. ಆ ಬಗ್ಗೆ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅನುಮತಿ ಕೊಡಲಿಲ್ಲ. ಈ ವಿಷಯವನ್ನು ವಿಧಾನ ಪರಿಷತ್‌ನಲ್ಲಿ ನಿನ್ನೆ raise ಮಾಡಿದ್ದಾರೆ. ಯಾರ ಹೆಸರೆಂದು ನಾವು ತೆಗೆದುಕೊಳ್ಳುವುದಿಲ್ಲ. ಬಿ.ಬಿ.ಎಂ.ಪಿಯಲ್ಲಿ ಸಾವಿರಾರು ಕೋಟಿ ರೂ.ಗಳ ಹಗರಣವಾಗಿದ್ದು, ಆ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನಪಟ್ಟಾಗ ನೀವು ರೂಲಿಂಗ್ ಕೊಟ್ಟ ನಂತರ ನಾವು ಸುಮ್ಮನಾದೆವು. ಲೋಕಾಯುಕ್ತ ತನಿಖೆಯೇ impartial, ಲೋಕಾಯುಕ್ತದ ಎಸ್.ಪಿ ಆದ ಮಹೇಶ್ ಎಂಬ ಪ್ರಾಮಾಣಿಕ ಅಧಿಕಾರಿ ಯಾವುದೋ ಒಂದು ದೂರು ಬಂದಾಗ ತಕ್ಷಣವೇ ಆತನೆ raid ಮಾಡಿ ಫೈಲ್‌ಗಳನ್ನು ಸೀಸ್ ಮಾಡಿಸಿ ಅದರ ತನಿಖೆಯನ್ನು ಗಂಭೀರವಾಗಿ ಮಾಡುವಂತಹ ಸಂದರ್ಭದಲ್ಲಿ ಆ ಎಸ್.ಪಿಯನ್ನೇ ವರ್ಗಾವಣೆ ಮಾಡುತ್ತಾರೆಂದರೆ ಏನರ್ಥ? ಇದರಲ್ಲಿರುವ ಹಗರಣಗಳ್ಯಾವುವು ಹೊರಗೆ ಬರಲೇ ಬಾರದೇ ಎಲ್ಲವನ್ನು ಮುಚ್ಚಿಹಾಕುವಂತಹ ಕೆಲಸವೇ? ನೀವೆಷ್ಟು ಹಗರಣಗಳನ್ನು ಮುಚ್ಚಿಹಾಕುತ್ತೀರಿ, ಪ್ರಾಮಾಣಿಕ ಅಧಿಕಾರಿಗಳಿಗೆ ನೀವೆಷ್ಟು harassment ಮಾಡುತ್ತೀರಿ ಇಷ್ಟೆಲ್ಲಾ ಮಾಡಿದರು ಹಗರಣಗಳು ಎಂದಿಗೂ ಮುಚ್ಚಿ ಹೋಗುವುದಿಲ್ಲ. ಇವತ್ತಿಲ್ಲ ನಾಳೆಯಾದರೂ ಆ ಹಗರಣಗಳು ಹೊರಗೆ ಬರಲೇಬೇಕು. ಡಿ.ಕೆ. ರವಿಯವರ ನಿಗೂಢವಾದ ಹತ್ಯೆ ಏನಿದೆ ಇದು ಕೇವಲ natural death ಅಲ್ಲ ಇದೊಂದು murder ಎಂದು ನಾನು ಹೇಳುತ್ತಿದ್ದೇನೆ. ಇದು suicide ಎಂದು ಈ ಪ್ರಕರಣವನ್ನು ಮುಚ್ಚಿ ಹಾಕುವಂತಹ ಕೆಲಸವಾಗಬಾರದು. ಇದರ thorough investigation ಆಗಬೇಕು. ನಮ್ಮ ಪೊಲೀಸ್ ಅಧಿಕಾರಿಗಳು ದಕ್ಷರು ಮತ್ತು ಪ್ರಾಮಾಣಿಕರಿದ್ದು ಅವರಿಂದ ತನಿಖೆ ಮಾಡಿಸುತ್ತೇವೆಂದು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳುತ್ತಾರೆ. ನಮ್ಮ ರಾಜ್ಯದಲ್ಲಿರುವ ಪೊಲೀಸ್ ಅಧಿಕಾರಿಗಳ ಬಗ್ಗೆ ನಮಗೇನು ಸಂಶಯವಿಲ್ಲ ಆದರೆ ಮೃತಪಟ್ಟ ವ್ಯಕ್ತಿ ಒಬ್ಬ I.A.S. ಅಧಿಕಾರಿಯಾಗಿದ್ದು, central cadre ನಲ್ಲಿ ಹಾಗೂ All India Service ನಲ್ಲಿ ಬರುವಂತಹ ಒಬ್ಬ ವ್ಯಕ್ತಿಯ ಸಾವಿನ ವಿಷಯ ಜನಮಾನಸದಲ್ಲಿ ಚರ್ಚೆ

ನಡೆಯುವಂತಹ ಹಾಗೂ ಜನರ ಆಕ್ರೋಶ ಮುಗಿಲುಮುಟ್ಟುವಂತಹ ಸಂದರ್ಭದಲ್ಲಿ ರಾಜ್ಯದ ಸಿ.ಓ.ಡಿ ಅಥವಾ ಯಾವುದೋ ಒಂದು ಟೀಮ್‌ನಿಂದ ತನಿಖೆಯಾದರೆ ನಿಜಾಂಶ ಹೊರಗೆ ಬರುವುದಕ್ಕೆ ಸಾಧ್ಯವಿಲ್ಲ. ಕೆಲವು ಹಿರಿಯ ಪೊಲೀಸ್ ಅಧಿಕಾರಿಗಳು ಪ್ರಾಮಾಣಿಕರಿದ್ದಾರೆ ನಾನು ಇಲ್ಲವೆಂದು ಹೇಳುವುದಿಲ್ಲ ಆದರೆ ನಮ್ಮ ರಾಜ್ಯದ ಪೊಲೀಸರ ಮುಖಾಂತರ ತನಿಖೆ ಮಾಡಿದರೆ ನಿಜಾಂಶ ಹೊರಗೆ ಬರುವ ಬಗ್ಗೆ ನಮಗೆಲ್ಲಾ ಸಂಶಯವಿರುವ ಕಾರಣ ಈ ಪ್ರಕರಣವನ್ನು ಸಿ.ಬಿ.ಐಗೆ ವಹಿಸಿ ಆ ಮುಖಾಂತರ ಇದರ ತನಿಖೆ ಆಗಲಿ ನಿಜಾಂಶ ಹೊರಗೆ ಬರಲಿ ಎಂದು ನಾನು ಈ ಸದನದ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಇದರ ಹಿಂದೆ ಯಾರೇ ಇರಲಿ, ಯಾರಿದ್ದಾರೆ ಇಲ್ಲವೆಂಬ ಎಲ್ಲಾ ವಿಷಯ ಸ್ಪಷ್ಟೀಕರಣವಾಗಲಿ ಮತ್ತು ಸಾಕ್ಷಿಗಳನ್ನು ಮುಚ್ಚಿ ಹಾಕುವಂತಹ ಕೆಲಸ ಎಂದಿಗೂ ಆಗಬಾರದು. ಯಾರು ಈಗಾಗಲೇ investigation ಮಾಡುತ್ತಿದ್ದಾರೆ. ಮೊಬೈಲ್ ಕರೆಗಳು ಮತ್ತು ಲ್ಯಾಂಡ್‌ಲೈನ್ ನಂಬರ್ ಮುಖಾಂತರ ಯಾರ್ಯಾರು ಮಾತನಾಡಿದ್ದಾರೆ, ಎಲ್ಲೆಲ್ಲಿಗೆ ಕರೆ ಹೋಗಿದೆ ಈ ಎಲ್ಲವನ್ನು safeguard ಮಾಡುವಂತಹ ಕೆಲಸವಾಗಬೇಕು. ಇದಕ್ಕೆ ಒಂದೇ ಒಂದು ದಾರಿಯೆಂದರೆ ಸಿ.ಬಿ.ಐ ತನಿಖೆಯಾಗಬೇಕು. ಅದಕ್ಕಾಗಿ ನಾನು ಒತ್ತಾಯ ಮಾಡುತ್ತೇನೆ. ಪ್ರಾಮಾಣಿಕ ದಕ್ಷ ಅಧಿಕಾರಿಗಳಿಗೆ ರಾಜ್ಯದಲ್ಲಿ ರಕ್ಷಣೆ ಸಿಕ್ಕಾಗ ಮಾತ್ರ ಒಳ್ಳೆಯ ಆಡಳಿತ ಸಾಧ್ಯವಿದ್ದು, ಇದರಿಂದ ರಾಜ್ಯ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಕ್ಕೆ ಸಾಧ್ಯವಾಗುತ್ತದೆ ಇಲ್ಲವಾದರೆ ಇದರಿಂದಲೇ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದಕ್ಕೆ ಸಾಧ್ಯವಿದೆ. ಈ ವಿಷಯದಲ್ಲಿ ಮೀನಮೇಷ ಎಣಿಸದೆ ಮುಖ್ಯಮಂತ್ರಿಗಳು ಮತ್ತು ಗೃಹ ಮಂತ್ರಿಗಳು ತಕ್ಷಣವೇ ಒಂದು ನಿರ್ಧಾರವನ್ನು ಕೈಗೊಂಡು ನಿಗೂಢತೆಯನ್ನು ಬಯಲಿಗೆಳೆಯಬೇಕಾದರೆ ಸಿ.ಬಿ.ಐ ತನಿಖೆ ಆಗಲೇಬೇಕು, ಏಕೆಂದರೆ ಇದರ ಹಿಂದೆ ದೊಡ್ಡ ದೊಡ್ಡ ವ್ಯಕ್ತಿಗಳಿದ್ದಾರೆನ್ನುವುದು ಮತ್ತು threatening calls ಇರುವ ಕಾರಣ thorough enquiry ಹಾಗೂ investigation ಆಗಬೇಕು. ಇದೆಲ್ಲಾ ಸಿ.ಬಿ.ಐ ಮುಖಾಂತರ ಆಗಬೇಕೆಂಬ ಒತ್ತಾಯವನ್ನು ಮಾಡುತ್ತಿದ್ದೇನೆ.

ಶ್ರೀ ವೈ.ಎಸ್.ವಿ. ದತ್ತಾ:- ಸುರೇಶ್ ಕುಮಾರ್ ರವರೆ ಒಂದು ನಿಮಿಷ ಇರಿ, ಮಾನ್ಯ ಅಧ್ಯಕ್ಷರೆ, ಡಿ.ಕೆ. ರವಿಯವರು ಹುಲಿಯೂರುದುರ್ಗದವರಾಗಿದ್ದು ಮೊದಲು ನಾಗರಾಜಯ್ಯರವರು ಮಾತನಾಡುತ್ತಾರೆ ನಂತರ ನೀವು ಮಾತನಾಡಿ.

ಶ್ರೀ ಡಿ. ನಾಗರಾಜಯ್ಯ (ಕುಣಿಗಲ್):- ಮಾನ್ಯ ಅಧ್ಯಕ್ಷರೆ, ಡಿ.ಕೆ. ರವಿರವರು ಒಬ್ಬ ಐ.ಎ.ಎಸ್ ಅಧಿಕಾರಿಯಾಗಿದ್ದು, ಅನುಮಾನಾಸ್ಪದವಾಗಿ ಸಾವಿಗೀಡಾಗಿದ್ದಾರೆ. ಈ ವಿಚಾರವಾಗಿ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು ಇಲ್ಲಿಯವರೆಗೆ ಏನೇನು ವಿಮರ್ಶೆ ಮಾಡಿದ್ದಾರೆ ಅದನ್ನು ಸಮರ್ಥನೆ ಮಾಡುವ ಜೊತೆಗೆ ಒಬ್ಬ ಐ.ಎ.ಎಸ್ ಅಧಿಕಾರಿಯಾಗಿದ್ದ ರವಿಯವರು ನನ್ನ ತಾಲ್ಲೂಕಿನವರಾಗಿದ್ದು, ಅವರು ಹುಟ್ಟಿ ಬೆಳೆದು ಬಂದಿರುವ ಮನೆಯ ಪರಿಸ್ಥಿತಿಯನ್ನು ನೋಡಿದರೆ ಅವರು ಐ.ಎ.ಎಸ್ ವಿದ್ಯಾಭ್ಯಾಸವನ್ನು ಮಾಡುತ್ತಾರೆಯೇ ಎನ್ನುವ ಸಂಶಯ ನಮ್ಮೆಲ್ಲರಿಗೂ ಇತ್ತು. 25 ಮನೆಗಳಿರುವಂತಹ ಒಂದು ಪುಟ್ಟ ಹಳ್ಳಿಯಲ್ಲಿ ಜನಿಸಿ Primary, Middle School and PUC ವಿದ್ಯಾಭ್ಯಾಸವನ್ನು ಒಂದು ಚಿಕ್ಕ ಹಳ್ಳಿಯಲ್ಲಿ ಮುಗಿಸಿ ಬೆಂಗಳೂರಿಗೆ ಬಂದು ಡಿಗ್ರಿ ವ್ಯಾಸಂಗ ಮಾಡಿ ಪದವಿ ಪಡೆದ ನಂತರ Excise Inspector ಆಗಿ ಆಯ್ಕೆ ಆಗಿ ಬಂದು ಕುಣಿಗಲ್ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದರು. ನಾನು ಶಾಸಕನಾಗಿದ್ದ ಸಂದರ್ಭದಲ್ಲಿ ರವಿಯವರನ್ನು ಕರೆದು ನಿಮ್ಮಂತಹವರು ಈ ಹುದ್ದೆಗೆ ಬರುವುದಕ್ಕಿಂತ ಕಷ್ಟಪಟ್ಟು ವಿದ್ಯಾಭ್ಯಾಸವನ್ನು ಮುಂದುವರೆಸಿ ಈ ರಾಷ್ಟ್ರದ ಉನ್ನತ ಅಧಿಕಾರಿ ಹುದ್ದೆಗೆ ಬರಬಹುದಾಗಿತ್ತು ನೀನೇಕೆ ಈ ಹುದ್ದೆಗೆ ಬಂದೆ ಎಂದು ಪ್ರಶ್ನಿಸಿದ ಸಂದರ್ಭದಲ್ಲಿ ಆತ ನಮ್ಮ ಮನೆಯ ಪರಿಸ್ಥಿತಿ ಈ ರೀತಿ ಇದೆ ಸ್ವಲ್ಪ ದಿವಸ ಕೆಲವು ಕಡೆ ಕೆಲಸ ಮಾಡಿ ಐ.ಎ.ಎಸ್. ಅಥವಾ ಐ.ಪಿ.ಎಸ್ ಪರೀಕ್ಷೆಯನ್ನು ತೆಗೆದುಕೊಂಡು ಈ ಹುದ್ದೆಯಿಂದ ನಿವೃತ್ತಿ ಹೊಂದುತ್ತೇನೆಂದು ಹೇಳಿದ್ದರು. ಅದೇ ರೀತಿ ವಿದ್ಯಾಭ್ಯಾಸವನ್ನು ಮುಂದುವರೆಸಿ ಐ.ಎ.ಎಸ್ ಅಧಿಕಾರಿಯಾಗಿ ಆಯ್ಕೆ ಆಗಿ Excise Inspector ಹುದ್ದೆಗೆ ರಾಜಿನಾಮೆ ಕೊಟ್ಟರು. ಅವರು ಕೆಲಸ ಮಾಡಿದ ಕಡೆಯಲ್ಲೆಲ್ಲಾ ಜನರ ಪ್ರಶಂಸೆಗೆ ಕಾರಣರಾಗುವ ರೀತಿಯಲ್ಲಿ

ದಕ್ಷತೆಯಿಂದ ಆಡಳಿತ ನಡೆಸಿದ್ದರು. ಕಲಬುರ್ಗಿಯಲ್ಲಿ ಸಿ.ಇ.ಓ ಆಗಿ ಮತ್ತು ಎ.ಸಿ. ಆಗಿ ಹಾಗೂ ಕೋಲಾರದಲ್ಲಿ ಡಿ.ಸಿ ಯಾಗಿ ಕಾರ್ಯನಿರ್ವಹಿಸಿದ್ದಾರೆ. ಕೋಲಾರದಲ್ಲಿ ಡಿ.ಸಿ ಆಗಿ ಕಾರ್ಯನಿರ್ವಹಿಸಿದ ಪರಿಣಾಮವಾಗಿ ಅಲ್ಲಿನ ಜನತೆ ಅವರ ಪರವಾಗಿ ಎದ್ದು ನಿಂತು ರವಿರವರನ್ನು ಪ್ರಶಂಸೆ ಮಾಡುವ ಮುಖೇನ ಅವರನ್ನು ಗುಣಗಾನ ಮಾಡುತ್ತಿದ್ದಾರೆ. ಇದನ್ನು ನೋಡಿದರೆ ರವಿರವರನ್ನು ಕೋಲಾರದಿಂದ ಬೆಂಗಳೂರಿಗೆ ವರ್ಗಾಯಿಸಲಾಗಿದೆಯೆಂದು ಹೇಳಿದಾಗ ಕೋಲಾರ ಇಡೀ ಜಿಲ್ಲೆ ಜನರೆಲ್ಲಾ ಕೋಲಾರ ಜಿಲ್ಲೆಗೆ ರವಿರವರೆ ಬೇಕೆಂದು ಎರಡು ದಿನಗಳು strike ಮಾಡಿರುವುದನ್ನು ನಾವು ನೋಡಿದ್ದೇವೆ. ತದನಂತರ ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಸಮಾಧಾನಪಡಿಸಿ ರವಿರವರನ್ನು ಬೆಂಗಳೂರಿನ Commercial Tax Officer ಆಗಿ ವರ್ಗಾವಣೆ ಮಾಡಿದ ನಂತರ ಅಲ್ಲಿ ಅವರು ಕಾರ್ಯನಿರ್ವಹಿಸಿದ ರೀತಿಯನ್ನು ನಾವೆಲ್ಲಾ ಪತ್ರಿಕೆಯಲ್ಲಿ ಮತ್ತು ಅವರು ಸತ್ತ ನಂತರ ಆಗುತ್ತಿರುವ ವರದಿಗಳನ್ನು ನೋಡಿದರೆ ಕೇವಲ 2–3 ತಿಂಗಳುಗಳಲ್ಲಿ ಸರ್ಕಾರಕ್ಕೆ ಕಟ್ಟಬೇಕಾದ 129 ಕೋಟಿ ರೂ.ಗಳನ್ನು ಮೋಸ ಮಾಡಿರುವವರನ್ನು ಬಲಿ ಹಾಕುವ ಮುಖಾಂತರ ಈ ಹಣವನ್ನು ಸರ್ಕಾರಕ್ಕೆ ಅವರು ಜಮಾ ಮಾಡಿಸಿದ್ದಾರೆ. 129 ಕೋಟಿ ರೂ.ಗಳನ್ನು ವಸೂಲಿ ಮಾಡುವ ನಿಟ್ಟಿನಲ್ಲಿ ಯಾವ್ಯಾವ ರೀತಿ ದಿಟ್ಟತನವಾದ ಕ್ರಮಗಳನ್ನು ತೆಗೆದುಕೊಂಡಿದ್ದಾರೋ ಆ ಕ್ರಮಗಳಿಂದಾಗಿ ನೋವನ್ನು ಅನುಭವಿಸಿದಂತಹ ಉದ್ಯಮಿಗಳಿರಬಹುದು, smugglers ಇರಬಹುದು ಅಥವಾ ಬೇರೆಯವರಿರಬಹುದು ಅವರುಗಳು ಈ ಅಧಿಕಾರಿ ಇದೇ ಸ್ಥಾನದಲ್ಲಿ ಮುಂದುವರೆದರೆ ನಮಗೆ ಅತಿ ಹೆಚ್ಚಿನ ಧಕ್ಕೆ ಆಗುತ್ತದೆಂಬ ದೃಷ್ಟಿಯಿಂದ ರವಿರವರು ಇವತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ನಾವೇನು ಹೇಳುತ್ತಿದ್ದೇವೆ ಅದು ಆತ್ಮಹತ್ಯೆ ಎಂದು ಹೇಳುವುದಾದರೂ ಕೂಡ ಅವರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿಗೆ ತಂದಂತಹವರು ಯಾರು ಎಂಬ ಮೂಲವನ್ನು ನಾವು ಹುಡುಕಲೇ ಬೇಕಾಗಿದೆ. ಆ ಮೂಲವನ್ನು ಹುಡುಕಲಿಲ್ಲವೆಂದರೆ, ಒಬ್ಬ ರವಿ ಎಂಬ ಒಬ್ಬ ವ್ಯಕ್ತಿಯಿದ್ದ ಅವನು ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟ ಎಂದು ಈ ವಿಚಾರವನ್ನು ಇಷ್ಟಕ್ಕೆ ಬಿಡುವುದಾದರೆ

ಮುಂದಿನ ದಿನಗಳಲ್ಲಿ ಈ ರಾಷ್ಟ್ರದಲ್ಲಿ ಅಥವಾ ರಾಜ್ಯದಲ್ಲಿ ದಕ್ಷತೆಯಿಂದ ಕಾರ್ಯನಿರ್ವಹಿಸಬೇಕೆಂದು ಹೇಳುವ ಅಧಿಕಾರಿಗಳು ಯಾರೂ ಕೂಡ ನಮ್ಮ ಸರ್ಕಾರದ ಜೊತೆಯಲ್ಲಿರುವುದಿಲ್ಲ. ಒಳ್ಳೆಯ ರೀತಿಯಲ್ಲಿ ಆಡಳಿತ ನಡೆಸುವುದನ್ನು ಕೈಬಿಡುತ್ತಾರೆಂಬುದನ್ನು ನಾವು ಮನಗಾಣಬೇಕಾಗುತ್ತದೆ. ದಕ್ಷ ಅಧಿಕಾರಿಗಳಿಗೆ ರಕ್ಷಣೆ ಕೊಡುವ ಜವಾಬ್ದಾರಿಯನ್ನು ಸರ್ಕಾರ ಎಲ್ಲಿಯವರೆಗೆ ವಹಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ದಕ್ಷ ಅಧಿಕಾರಿಗಳು ಇರುವುದು ಕಷ್ಟವಾಗುತ್ತದೆ. ಕೋಲಾರ ಜಿಲ್ಲೆ ಜನರ ಆಪೇಕ್ಷೆಯ ಮೇರೆಗೆ ರವಿರವರನ್ನು ಅಲ್ಲೇ ಉಳಿಸಿದ್ದರೆ ಅವರು ಸಾಯುತ್ತಿರಲಿಲ್ಲವೆಂದು ಸಾಮಾನ್ಯ ಜನರು ಮಾತನಾಡುತ್ತಿದ್ದಾರೆ. ಒಬ್ಬ ಅಧಿಕಾರಿ ಒಂದು ಊರಿನಿಂದ ಇನ್ನೊಂದು ಊರಿಗೆ ವರ್ಗಾವಣೆ ಆಗಲೇಬೇಕು ಹೋದಂತಹ Commercial Tax office ನಲ್ಲಿಯೂ ಕೂಡ ಅಷ್ಟೇ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದ್ದು, ಭ್ರಷ್ಟರಿಗೆ ಅವಕಾಶ ಕೊಡುವುದಿಲ್ಲವೆಂಬ ಕಾರಣಕ್ಕೆ ಕೆಟ್ಟಜನ ಅವರನ್ನು ಹಗೆತನದಿಂದ ಕೊಲೆಯಾಗುವ ರೀತಿಯಲ್ಲಿ ನಡೆಸಿಕೊಂಡರು ಎಂದು ಹೇಳುವುದಾದರೆ ಸರ್ಕಾರದಿಂದ ದಕ್ಷ ಅಧಿಕಾರಿಗಳಿಗೆ ಎಲ್ಲಿ ರಕ್ಷಣೆ ಸಿಗುತ್ತದೆ? ಎಂ.ಎನ್. ರೆಡ್ಡಿಯವರು ಇದು ಮೇಲ್ನೋಟಕ್ಕೆ ಆತ್ಮಹತ್ಯೆ ಎಂದು ಹೇಳುತ್ತಿರುವುದನ್ನು ನಾವು ಟಿ.ವಿಯಲ್ಲಿ ನೋಡುತ್ತಿದ್ದೆವು. ಅವರು ಯಾವ ಆಧಾರದ ಮೇಲೆ ಆತ್ಮಹತ್ಯೆ ಎಂದು ಹೇಳುತ್ತಾರೆ? ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಇವರೇನಾದರೂ ಕಣ್ಣಿನಿಂದ ನೋಡಿದ್ದಾರಾ? ಅನುಮಾನಸ್ಪದವಾದ ಸಾವು ಎನ್ನುವ ಬಗ್ಗೆ ಸಾರ್ವಜನಿಕರು ಮಾತನಾಡುತ್ತಿದ್ದಾರೆ, ಅವರ ಇಲಾಖೆಯವರು ಒಂದು ಬಾರಿ death note ಸಿಕ್ಕಿದೆಯೆಂದು ಹೇಳಿದರು ಮತ್ತೊಂದು ಬಾರಿ death note ಸಿಕ್ಕಿಲ್ಲ ಪರಿಪೂರ್ಣವಾಗಿ ಹುಡುಕಬೇಕಾಗಿದೆ ಹುಡುಕಿದ ನಂತರ ನಾವು ತಿಳಿಸುತ್ತೇವೆಂದು ಹೇಳಿದ್ದಾರೆ. ಇದೆಲ್ಲವನ್ನೂ ಲೆಕ್ಕ ಹಾಕಿ ನೋಡಿದಾಗ, ರವಿ ಎನ್ನುವ ಐ.ಎ.ಎಸ್. ಅಧಿಕಾರಿಯು ಹುಟ್ಟಿ ಬೆಳೆದು ಬಂದಂತಹ ಊರು, ಮನೆಯೆಲ್ಲವನ್ನೂ ನೋಡಿದಾಗ, ಇಂತಹ ದಕ್ಷ ಅಧಿಕಾರಿ ಬದುಕಿ ಸರ್ಕಾರಿ ಕೆಲಸದಲ್ಲಿ ಕಾರ್ಯ ನಿರ್ವಹಿಸಿದ್ದೇ ಆದರೆ, ಇನ್ನೂ ಅತಿ ಹೆಚ್ಚಿನ ರೀತಿಯಲ್ಲಿ ರಾಜ್ಯಕ್ಕೆ, ರಾಷ್ಟ್ರಕ್ಕೆ ಒಳ್ಳೆಯ ಹೆಸರು ಬರುವಂತಹ ರೀತಿಯಲ್ಲಿ

ಕಾರ್ಯನಿರ್ವಹಿಸುವಂತಹವರನ್ನು ನಮ್ಮ ಸರ್ಕಾರ ಉಳಿಸಿಕೊಳ್ಳುವುದಕ್ಕೆ ಆಗಲಿಲ್ಲ ಎನ್ನುವ ಚಿಂತನೆ ನಾವು ಮಾಡಬೇಕಾಗಿದೆ. ಅವರು suicide ಮಾಡಿಕೊಳ್ಳುವ ವ್ಯಕ್ತಿ ಅಲ್ಲ. ಅವರು ಒಂದು ವೇಳೆ suicide ಮಾಡಿಕೊಳ್ಳುವ ವ್ಯಕ್ತಿ ಆಗಿದ್ದರೆ, ಕೋಲಾರದಲ್ಲೇ ಆಗಲಿ, ಬೇರೆ ಕಡೆಯಲ್ಲೇ ಆಗಲಿ, ನಾಲ್ಕು ಕಾಸನ್ನು ಸಂಪಾದನೆ ಮಾಡಿ ಆಸ್ತಿ ಮಾಡಬೇಕು, ಮನೆ ಕಟ್ಟಬೇಕು ಹಿನ್ನೆಲೆಯಲ್ಲಿ ಮಾಡಬಹುದಾಗಿತ್ತು. ಆದರೆ ಅವರ ಮನೆಯನ್ನು ನೋಡಿದರೆ ಅವರು ಏನೆಂದು ತಿಳಿಯುತ್ತದೆ. ಶ್ರೀಮಂತರ ಮನೆಯ ಹೆಣ್ಣನ್ನು ಕೊಡುವುದರ ಮುಖಾಂತರ ಮದುವೆ ಮಾಡಿಕೊಳ್ಳುವ ಸಲುವಾಗಿ ಕೇವಲ ಐದಾರು ಚದರಡಿಯ ಮನೆಯೊಂದನ್ನು ಡಿ.ಸಿ. ಆದನಂತರ ಕಟ್ಟಿಕೊಂಡಿದ್ದಾರೆ. ಅದೊಂದು ಬಿಟ್ಟರೆ, ಇಂದು ಅವರ ತಾಯಿ ದನ, ಎಮ್ಮೆಗಳನ್ನು ಸಾಕಿ, ಹಾಲು ಕರೆದು ಜೀವನ ಮಾಡುತ್ತಿರುತ್ತಾರೆ. ಅವರ ತಂದೆ ಇಂದಿಗೂ ಹಿಪ್ಪನೇರಳೆ ಸೊಪ್ಪನ್ನು ಬೆಳೆದು ಜೀವನ ಮಾಡುತ್ತಿದ್ದಾರೆ. ಇಂತಹ ಕುಟುಂಬದಿಂದ ಬಂದಂತಹ ಇವರು ಐ.ಎ.ಎಸ್. ಅಧಿಕಾರಿಗೆ ನಮ್ಮ ಸರ್ಕಾರದಿಂದ ರಕ್ಷಣೆ ಸಿಗಲಿಲ್ಲ ಎಂದು ಹೇಳುವುದಾದರೆ, ಮುಂದಿನ ದಿನಗಳಲ್ಲಿ ದಕ್ಷತೆಯಿಂದ ಕೆಲಸ ಮಾಡುವಂತಹ ಅಧಿಕಾರಿಗಳನ್ನು ಸರ್ಕಾರದಲ್ಲಿ ಉಳಿಸಿಕೊಳ್ಳಬೇಕೆನ್ನುವ ಚಿಂತನೆಯನ್ನು ಸರ್ಕಾರ ಮಾಡಬೇಕಾಗಿದೆ. ನಮ್ಮ ರಾಜ್ಯದ ಪೊಲೀಸ್ ಅಧಿಕಾರಿಗಳು ರವಿ ಅವರ ಸಾವನ್ನು ಆತ್ಮಹತ್ಯೆ ಎಂದು ಏನು ಹೇಳಿದ್ದಾರೆ, ಅದು investigation ಮುಖಾಂತರ ಏನಾಗುತ್ತದೆ ಎಂಬುದನ್ನು ಚಿಂತನೆ ಮಾಡಬೇಕಾಗಿದೆ. ಆ ಕಾರಣದಿಂದ ನಾನು ವೈಯಕ್ತಿಕವಾಗಿ ಹೇಳುವುದೇನೆಂದರೆ, ಈ ಪ್ರಕರಣವನ್ನು ಸಿ.ಬಿ.ಐ. ಗೆ ಕೊಟ್ಟು ಅಲ್ಲಿ enquiry ಮಾಡುವುದರ ಮುಖಾಂತರ ಇದರ ನಿಜಸ್ಥಿತಿಯನ್ನು ಕಂಡು ಹಿಡಿಯದೇ ಹೋದರೆ, ದಕ್ಷತೆಯಿಂದ ಕೆಲಸ ಮಾಡುವಂತಹ ಅಧಿಕಾರಿಗಳು ರಾಜ್ಯ ಸರ್ಕಾರದಲ್ಲಿ ಕೆಲಸ ಮಾಡುವುದಕ್ಕೆ ಮುಂದೆ ಬರುವುದಿಲ್ಲವೆನ್ನುವುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾಗಿದೆ. ರವಿ ಅವರು ನನ್ನ ಕ್ಷೇತ್ರದವರಾಗಿದ್ದು, ದಕ್ಷ ಅಧಿಕಾರಿಯನ್ನು ನಾವೆಲ್ಲರೂ ಕಳೆದುಕೊಂಡಿರುವ ನೋವಿದ್ದರೂ ಸಹ ಇದು proper ಆಗಿ investigation ಮಾಡುವುದರಲ್ಲಿ

ನಿಮ್ಮ ಸಹಕಾರ ಮತ್ತು ಮಾನ್ಯ ಸಿದ್ದರಾಮಯ್ಯನವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಇದನ್ನು ಸಿ.ಬಿ.ಐ.ಗೆ ವಹಿಸಿ enquiry ಮಾಡಬೇಕೆಂದು ಹೇಳಿ, ಸಾಮಾಜಿಕ ವ್ಯಕ್ತಿಗಳಿಗೆ ಸರ್ಕಾರ ರಕ್ಷಣೆ ಕೊಡುವುದನ್ನು ವಹಿಸಿಕೊಳ್ಳಬೇಕೆಂದು ಹೇಳುತ್ತೇನೆ. ಡಿ.ಕೆ. ರವಿ ಅವರ ಶವವನ್ನು ನನ್ನ ಕ್ಷೇತ್ರಕ್ಕೆ ತೆಗೆದುಕೊಂಡು ಹೋಗುತ್ತಿರುವುದರಿಂದ ಶವ ಸಂಸ್ಕಾರದಲ್ಲಿ ಪಾಲ್ಗೊಳ್ಳಬೇಕಾಗಿರುವುದರಿಂದ ನಾನು ಹೋಗುತ್ತಿದ್ದೇನೆಂದು ಹೇಳಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ನಾಗರಾಜಯ್ಯನವರು ಸಾಮಾನ್ಯವಾಗಿ ಸದನದಲ್ಲಿ ಮಾತನಾಡುವುದಿಲ್ಲ. ಇವತ್ತು ಅವರ ಕ್ಷೇತ್ರದ ಒಬ್ಬ ಯುವಕ, ಒಳ್ಳೆ ಅಧಿಕಾರಿ ತೀರಿ ಹೋದ ಹಿನ್ನೆಲೆಯಲ್ಲಿ ಬಹಳ ಭಾವಪೂರ್ಣವಾಗಿ, ಅರ್ಥಪೂರ್ಣವಾಗಿ ಮಾತನಾಡಿ ನಮ್ಮೆಲ್ಲರಿಗೂ ಮನದಟ್ಟು ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ಇವತ್ತು ಸದನ ನಡೆಯುತ್ತಿದೆ, ಸದನ ನಡೆಯುವಂತಹ ಸಂದರ್ಭದಲ್ಲಿ ಈ ಸಾವು ಸಂಭವಿಸಿದೆ. ಇಡೀ ರಾಜ್ಯದಲ್ಲಿ ಯಾವ ರೀತಿಯ ಆಕ್ರೋಶವಿದೆ, ಅದೇ ರೀತಿಯಲ್ಲಿ ಸದನವನ್ನೂ ಸಹ ಬಹಳ ಕುತೂಹಲದಿಂದ ನೋಡುತ್ತಾರೆ. ಈ ಸದನದಿಂದ ಈ ಸಾವಿನ ಬಗ್ಗೆ ಯಾವ ರೀತಿ ಸಂದೇಶ ಹೋಗುತ್ತದೆಂದು ವೀಕ್ಷಿಸುತ್ತಿರುತ್ತಾರೆ. ಅನೇಕ ಸಾವುಗಳನ್ನು ನಾವು ನೋಡುತ್ತೇವೆ. ಯಾವುದೇ ಒಂದು ಸಾವು ನಮಗೆ ದುಃಖವನ್ನು ಉಂಟು ಮಾಡುತ್ತದೆ. ಕೆಲವು ಸಾವುಗಳು ದಿಗ್ಭ್ರಮೆ ಉಂಟು ಮಾಡುತ್ತದೆ. ಇಡೀ ರಾಜ್ಯವನ್ನು ದಿಗ್ಭ್ರಮೆಗೆ ಉಂಟುಮಾಡಿರುವ ಸಾವು ಡಿ.ಕೆ. ರವಿ ಅವರ ಸಾವು. ಇಲ್ಲಿಯವರೆಗೂ ನಮ್ಮ ಪ್ರತಿ ಪಕ್ಷದ ನಾಯಕರು ಅನೇಕ ವಿಚಾರಗಳನ್ನು ಸವಿಸ್ತಾರವಾಗಿ ಹೇಳಿದ್ದಾರೆ. ನಾನು ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಈ ವಿಚಾರದಲ್ಲಿ let us not stand on prestige. ಈ ಸರ್ಕಾರ ಒಳ್ಳೆಯ ನಿರ್ಧಾರವನ್ನು ತೆಗೆದುಕೊಂಡಿದೆಯೆಂದು ಈ ರಾಜ್ಯಕ್ಕೆ ಒಳ್ಳೆಯ ಸಂದೇಶ ಹೋಗಬೇಕು ಮತ್ತು ಅಲ್ಲಿ ಕುಳಿತುಕೊಳ್ಳುವ ಅಧಿಕಾರಿಗಳಿಗೆ ನಾವಿದ್ದೇವೆಂದು ಒಳ್ಳೆಯ ಧೈರ್ಯವನ್ನು ಕೊಡಬೇಕು. ದಕ್ಷ ಅಧಿಕಾರಿಗಳಿಗೆ ರಕ್ಷಣೆ

ಕೊಡುವುದಕ್ಕೆ ನಾವಿದ್ದೇವೆ, ದಕ್ಷ ಅಧಿಕಾರಿಗಳು ಮಾರಕ ಎಂದು ನಾವು ತಿಳಿದುಕೊಳ್ಳುವುದಿಲ್ಲ ಎನ್ನುವ ಸಂದೇಶ ಅಲ್ಲಿಗೆ ಹೋಗಬೇಕು. ಡಿ.ಕೆ. ರವಿ ಅವರು ಕೋಲಾರದಲ್ಲಿದ್ದಾಗ ಜನಪರ ಕಾರ್ಯಗಳನ್ನು ಮಾಡಿದರು ಮತ್ತು ಯಾರೂ ಜನ ವಿರೋಧಿ ಕಾರ್ಯಗಳನ್ನು ಮಾಡುತ್ತಿದ್ದರೋ ಅಂತಹವರಿಗೆ ಸಿಂಹ ಸ್ವಪ್ನವಾಗಿದ್ದರು. ಅದಕ್ಕಾಗಿ ಏನೇನು ಆಯಿತು ಎನ್ನುವುದನ್ನು ನಾವು ನೋಡಿದ್ದೇವೆ. ವಾಣಿಜ್ಯ ಇಲಾಖೆಗೆ ಬಂದ ನಂತರ ಅಲ್ಲಿ ಕೂಡ ತನ್ನ ಹೋರಾಟದ ಅಸ್ತ್ರವನ್ನು ಕೆಳಗೆ ಇಡಲಿಲ್ಲ. ವರ್ಗಾವಣೆ ಆದ ಮೇಲೆ ನನಗೆ ಏಕೆ ಬೇಕೆಂದು ಕೆಲವರು ತಿಳಿದು ಕೊಳ್ಳುತ್ತಾರೆ. ಆದರೆ ಆ ವ್ಯಕ್ತಿ ಬಿಡಲಿಲ್ಲ. ಮತ್ತೇ ನಾಗರಾಜಯ್ಯನವರು ಹೇಳಿದಂತೆ ಕಳೆದ ನಾಲ್ಕು ತಿಂಗಳಿನಿಂದ ಕೆಲಸ ಮಾಡಿ ಸರ್ಕಾರಕ್ಕೆ ತನ್ನ ಋಣವನ್ನು ತೀರಿಸಿದರು ಮತ್ತು ಯಾರು ಅನ್ಯಾಯ ಮಾಡಿರುತ್ತಾರೋ ಅವರಿಗೆ ಸರಿಯಾದ ಪಾಠವನ್ನು ಕಲಿಸಿದರು. Conflict of interest ಎನ್ನುವ ಒಂದು ಪದವಿದ್ದು, ಈ ಪದ ಯಾವುದೇ ಒಂದು ವ್ಯವಸ್ಥೆಗೆ ಅತ್ಯಂತ ದೊಡ್ಡ ಮಾರಕವಾಗಿರುತ್ತದೆ. ಬಹಳ ದೊಡ್ಡ ಉದ್ಯಮ ನಡೆಸುವವರು, ಆಡಳಿತದಲ್ಲಿ ದೊಡ್ಡ ಸ್ಥಾನದಲ್ಲಿದ್ದಾಗ ಬಹಳ ಆತಂಕವಾಗುತ್ತದೆ. ಅದರ ಒಂದು ಪರಿಣಾಮವನ್ನು ಕೂಡ ಇದರಲ್ಲಿ ನಾವು ನೋಡುತ್ತಿದ್ದೇವೆ. ಮಾನ್ಯ ಜಗದೀಶ್ ಶೆಟ್ಟರ್ ಅವರು ಹೇಳಿದಂತೆ ನಮ್ಮ ರಾಜ್ಯದ ಪೊಲೀಸ್ ಅಧಿಕಾರಿಗಳ ಬಗ್ಗೆ ಅತ್ಯಂತ ಗೌರವ, ಹೆಮ್ಮೆ ಇದೆ. ಆದರೆ ಆ ಪೊಲೀಸ್ ಅಧಿಕಾರಿಗಳ ಹಿತ ದೃಷ್ಟಿಯಿಂದ ಕೇಳಿಕೊಳ್ಳುವುದೇನೆಂದರೆ, ದಯವಿಟ್ಟು ಈ ಪ್ರಕರಣವನ್ನು ಸಿ.ಬಿ.ಐ.ಗೆ ವರ್ಗಾವಣೆ ಮಾಡಿ. ಇದಕ್ಕೆ ಕಾರಣವೇನೆಂದರೆ, ಈಗಾಗಲೇ ಎಲ್ಲರೂ ಹೇಳುವುದೇನೆಂದರೆ, ನಿನ್ನೆ ಪೊಲೀಸ್ ಅಧಿಕಾರಿಗಳು ಮಾತನಾಡುತ್ತಾ, ಮೇಲ್ನೋಟಕ್ಕೆ ಇದು ಆತ್ಮಹತ್ಯೆ ಎಂದು ಹೇಳಿರುತ್ತಾರೆ. Anticipatory bail ತೆಗೆದುಕೊಳ್ಳುವ ರೀತಿಯಲ್ಲಿ, Anticipatory judgment ಹೇಳಿದ್ದಾರೆ. ಹಾಗಾಗಿ ಇವತ್ತು ಅವರು ಏನೇ ನಿರ್ಧಾರವನ್ನು ತೆಗೆದುಕೊಂಡರೂ ಜನರ ಗುಮಾನಿ, ಸಂಶಯ ಉಳಿಯುತ್ತದೆ. ಆ needle of suspicion ಉಳಿಯಬಾರದು. ಇದರ ಜೊತೆಗೆ ನಿನ್ನೆ ಬೆಳಿಗ್ಗೆ 10.45 ಗಂಟೆಗೆ ಕಛೇರಿಗೆ ಹೋದ ಡಿ.ಕೆ. ರವಿ ಅವರು 11.20 ಗಂಟೆಗೆ

ಮನೆಗೆ ಏಕೆ ವಾಪಸ್ಸಾದರು. ಯಾವುದೇ ಅಧಿಕಾರಿಗಳು ಅಷ್ಟು ಬೇಗನೆ ಮನೆಗೆ ಹೋಗುವುದಿಲ್ಲ. ಒಂದು ವೇಳೆ ಅವರಿಗೆ ಆರೋಗ್ಯ ಕೆಟ್ಟಿದ್ದರೆ ಮಾತ್ರ ಹೋಗಬೇಕು. 11.20 ಗಂಟೆಗೆ ಏಕೆ ಹೋದರು ಮತ್ತು ಹೋದ ನಂತರ ಈ ದುರಂತ ಯಾವ ರೀತಿ ಸಂಭವಿಸಿತು. ಈ ಬಗ್ಗೆ ನಾಗರಾಜಯ್ಯನವರು ಮಾತನಾಡುತ್ತಾ, ಟಿ.ವಿ. ಮಾಧ್ಯಮವೊಂದರಲ್ಲಿ ಡೆತ್ ನೋಟ್ ಸಿಕ್ಕಿತು ಎಂದು ಪ್ರಸಾರವಾಯಿತು. ನಂತರ ಡೆತ್ ನೋಟ್ ಮಾಯವಾಗಿದೆ. ನಿಜವಾಗಿಯೂ ಡೆತ್ ನೋಟ್ ಇತ್ತೋ ಅಥವಾ ಡೆತ್ ನೋಟ್ ಮಾಯವಾಗಿದೆಯೋ ಎನ್ನುವುದು ಗೊತ್ತಿಲ್ಲ. ಈ ಘಟನೆಗಳನ್ನು ನಾವು ಉತ್ತರ ಪ್ರದೇಶದಲ್ಲಿ ಕೇಳುತ್ತಿದ್ದೆವು. ಉತ್ತರ ಭಾರತದ ಕೆಲವೊಂದು ರಾಜ್ಯಗಳಲ್ಲಿ ಕೇಳುತ್ತಿದ್ದೆವು. ನಮ್ಮ ರಾಜ್ಯಕ್ಕೆ ಅಧಿಕಾರಿಗಳು ಬಹಳ ಹೆಮ್ಮೆಯಿಂದ, ಸಂತೋಷದಿಂದ, ಸಂಭ್ರಮದಿಂದ ಬರುತ್ತಿದ್ದರು. ಈ ರಾಜ್ಯವೂ ಕೂಡ ಅದೇ ಸ್ಥಿತಿಗೆ ಹೋಗುತ್ತಿದೆ ಎನ್ನುವ ಭಾವನೆ ಬಂದರೆ, ನಮ್ಮ ರಾಜ್ಯದ ಭವಿಷ್ಯಕ್ಕೆ ಇದು ಮಾರಕವಾಗುತ್ತದೆ. ಕೆಲವು ರಾಜಕಾರಣಿಗಳ ಹೆಸರು ಇದರಲ್ಲಿ ತಗುಲಿ ಕೊಂಡಿರುವುದರಿಂದ ಈ ಒಂದು ಪ್ರಕರಣವನ್ನು ದಯವಿಟ್ಟು ಸಿ.ಬಿ.ಐ.ಗೆ handover ಮಾಡಿ. ಇದರಿಂದ ಸತ್ಯ ಬರಲಿ. ನಮಗೇನಾದರೂ ಕೂಡ ರವಿ ಅವರು ಮಾಡಿರುವ ಕಾರ್ಯದ ಬಗ್ಗೆ ಗೌರವವಿದ್ದರೆ, ಇದು ರವಿ ಅವರ ಆತ್ಮಕ್ಕೆ ಕೊಡುವ ಶ್ರದ್ಧಾಂಜಲಿಯಾಗುತ್ತದೆ. ಸತ್ಯ ಹೊರಗಡೆ ಬರಲಿ. ನನಗೆ ತಿಳಿದಿರುವ ಪ್ರಕಾರ ರವಿ ಅವರು suicide ಮಾಡಿಕೊಳ್ಳುವ ವ್ಯಕ್ತಿ ಅಲ್ಲ. ಅಳ್ಳೆದೆ ಅಲ್ಲ, ಹೆದರಿಕೊಳ್ಳುವ ವ್ಯಕ್ತಿ ಅಲ್ಲ. ಅಂತಹ ವ್ಯಕ್ತಿಯೂ ಕೂಡ ಈಗಾಗಲೇ ತೀರ್ಮಾನ, ತೀರ್ಪು ಬಂದಿರುವ ಹಾಗೆ, ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದರೆ, ಏಕೆ ಈ ರೀತಿ ಮಾಡಿಕೊಂಡಿದ್ದಾರೆನ್ನುವುದು ತಿಳಿಯಬೇಕು. ಯಾರೋ ಮೂರು ಜನ Commercial Tax Officers ಆ ಕಟ್ಟಡಕ್ಕೆ ಪ್ರವೇಶ ಮಾಡಿದ್ದಾರೆನ್ನುವ ಸುದ್ದಿ ಏನು ಬಂದಿದೆ, ಅವರು ಯಾವ ಪುಣ್ಯಾತ್ಮರು, ಇದರಲ್ಲಿ ಅವರ role ಏನಿದೆ ಎನ್ನುವುದು ತಿಳಿಯಬೇಕು. ನಾನು ಮುಖ್ಯಮಂತ್ರಿಗಳಿಗೆ ಕೇಳುವುದೇನೆಂದರೆ, Sir, we cannot afford to be lenient in this case. ನಮ್ಮ ಅಧಿಕಾರಿಗಳಿಗೆ ಈ ರಾಜ್ಯದಲ್ಲಿ

ದಕ್ಷತೆಯಿಂದಿರುವುದು ನಮ್ಮ ವೃತ್ತಿಗೆ ಮಾತ್ರ ಮಾರಕವಲ್ಲದೆ, ಜೀವಕ್ಕೂ ಮಾರಕ ಎಂದೆನಿಸಿದರೆ, even God will not save this state. ಅದಕ್ಕಾಗಿ ನಾನು ಹೇಳುವುದೇನೆಂದು ಇದೊಂದು ಸೂಕ್ತವಾದ ಪ್ರಕರಣವಾಗಿರುವುದರಿಂದ CBI ಗೆ ವರ್ಗಾವಣೆ ಮಾಡೋಣ. ಅವರೊಬ್ಬರು 2009 ನೇ ಇಸವಿಯ All India Services ಅಧಿಕಾರಿಯಾಗಿದ್ದವರು. ಹಾಗಾಗಿ ಈ ಒಂದು ಪ್ರಕರಣ ಇಡೀ ದೇಶದ ಜನರ ಗಮನ ಸೆಳೆಯುತ್ತದೆ. Indian Oil ರೀತಿಯ ಪ್ರಕರಣದಲ್ಲಿ ನಮ್ಮ ರಾಜ್ಯದ ಮಂಜುನಾಥ್ ಅವರ ಸಾವು ಉತ್ತರ ಪ್ರದೇಶದಲ್ಲಿ ಆಗಿತ್ತೋ, ಅದೇ ರೀತಿ ಈ ಪ್ರಕರಣ ಇಡೀ ದೇಶದ ಗಮನ ಸೆಳೆಯುತ್ತದೆ. ಹಾಗಾಗಿ ತಮ್ಮ ಮುಖಾಂತರ ಸದನದಲ್ಲಿ ಸರ್ಕಾರವನ್ನು ಮನವಿ ಮಾಡಿಕೊಳ್ಳುವುದೇನೆಂದರೆ, ಈ ಪ್ರಕರಣದಲ್ಲಿ ಯಾವುದೇ ಒಂದು prestige ಗೆ ಸಿಲುಕದೆ, ಇಡೀ ಸದನ ಒಂದೇ ಒಂದು ಗಟ್ಟಿಯಾದ ಧ್ವನಿಯಲ್ಲಿ ದಕ್ಷಾಧಿಕಾರಿಗಳ ರಕ್ಷಣೆಗೆ ನಾವಿದ್ದೇವೆ, ಈ ಸಾವಿನ ಸತ್ಯ ಹೊರಗಡೆ ಬರಬೇಕು, culprits ಯಾರಿದ್ದಾರೆ, ಅವರನ್ನು ಬಲಿ ತೆಗೆದುಕೊಳ್ಳುತ್ತೇವೆನ್ನುವ ಸಂದೇಶವನ್ನು ಕಳುಹಿಸೋಣ. ಹೀಗಾಗಿ ಮಾನ್ಯ ಜಗದಿಶ್ ಶೆಟ್ಟರ್ ಅವರ ಬೇಡಿಕೆಯನ್ನು ಮನವಿಯನ್ನು ಅನುಮೋದಿಸುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ (ತರುವೇಕೆರೆ):– ಮಾನ್ಯ ಅಧ್ಯಕ್ಷರೆ, ಡಿ.ಕೆ. ಅವರ ಸಾವು ಇಡೀ ಸದನ ಇವತ್ತು ದುಃಖ ಪಡುವಂತಹ ವಿಚಾರವಾಗಿದೆ. ಮಾನ್ಯ ಡಿ.ಕೆ. ರವಿ ಅವರು ಬಹಳ ಚಿಕ್ಕ ವಯಸ್ಸಿನಲ್ಲೇ ಒಳ್ಳೆಯ ಹೆಸರನ್ನು ಸಂಪಾದನೆ ಮಾಡಿದಂತಹ ಒಬ್ಬ ದಿಟ್ಟ ಅಧಿಕಾರಿ. ಬಹುಶಃ ಕೋಲಾರ ಇವತ್ತು ಸಂಪೂರ್ಣವಾಗಿ ಬಂದ್ ಆಗಿದೆ. ಇದಕ್ಕೆ ಕಾರಣ ಅವರು ಕೋಲಾರದವರಲ್ಲ. ಆದರೂ ಸಹ ಅವರ ಆಡಳಿತ, ನಡವಳಿಕೆ ಬಹಳ ಮೆಚ್ಚುಗೆಯನ್ನು ತಂದಿರುವಂತಹ ವಿಚಾರ. ಯಾವತ್ತಿಗೂ ಕೋಲಾರದ ಜಿಲ್ಲೆಯಲ್ಲಿ ಡಿ.ಸಿ. ಯಾಗಿ ಕೆಲಸ ಮಾಡುವುದೆ ಬಹಳ ಕಷ್ಟ, ಕೋಲಾರ ಜಿಲ್ಲೆ ಯಾವಾಗಲೂ ಪ್ರತಿಭಟನೆಯಲ್ಲೇ ಮುಳುಗಿರುತ್ತದೆ. ಅಂಥ ಜಿಲ್ಲೆಯಲ್ಲಿ ಅವರು ಒಳ್ಳೆಯ ಹೆಸರು ಮಾಡಿದ್ದಾರೆ ಅಂದರೆ ಅವರ ಸೇವೆಯನ್ನು ನಾವು ಸ್ಮರಿಸಬೇಕು. ದಲಿತರ ಮನೆಯಲ್ಲಿ ಊಟವನ್ನು ಮಾಡುವ ಮುಖಾಂತರ ಅವರ

ಸಂಬಂಧವನ್ನು ಬೆಳೆಸಿದ ಮೊಟ್ಟ ಮೊದಲ ಡಿ.ಸಿ ಈ ರಾಜ್ಯದಲ್ಲಿ ಎಂದರೆ ಶ್ರೀಮಾನ್ ಡಿ.ಕೆ. ರವಿಯವರು ಆಗಿದ್ದಾರೆ. ನಿನ್ನೆ ನಡೆದಂಥ ನೀರಿನ ಹಗರಣ ಅದರಲ್ಲೂ ಸಹ ಅವರು ಹಳ್ಳಿ ಹಳ್ಳಿಗಳಿಗೆ ಹೋಗಿ ಬಾಕಿ ನೀರನ್ನು ಕೊಡಬೇಕೆಂದು ಹತ್ತಾರು ರಾಜಕಾರಣಿಗಳ ಜೊತೆ ಹಾಗೂ ಅಧಿಕಾರಿಗಳ ಜೊತೆ ಕುಳಿತು ಚರ್ಚೆ ಮಾಡಿ ಬಹಳ ಶ್ರಮ ಪಟ್ಟಂಥ ವ್ಯಕ್ತಿ. ಅವರು ಮೊದಲು ಐ.ಎ.ಎಸ್ ಆದಾಗ ನಮ್ಮ ತುಮಕೂರು ಜಿಲ್ಲೆಯಲ್ಲಿ ಅವರು ಬಹಳ ಒಳ್ಳೆಯ ಅಧಿಕಾರಿ ಎನ್ನುವ ದೃಷ್ಟಿಯಿಂದ ಎಲ್ಲ ಶಾಸಕರು ಸೇರಿ ಅವರಿಗೆ ಸನ್ಮಾನ ಮಾಡಿದೆವು. ಇವತ್ತಿನ ದಿವಸ ಅವರು ಇಡೀ ರಾಜ್ಯಕ್ಕೆ ಮಾದರಿ ಆಗಿದ್ದಾರೆ. ಬಡತನ, ಹಣವಂತಿಕೆ ಇಲ್ಲ. ಬುದ್ಧಿವಂತಿಕೆ ಇದ್ದರೆ ಏನಾದರೂ ಆಗಬಹುದು ಎನ್ನುವುದಕ್ಕೆ ಡಿ.ಕೆ. ರವಿಯವರು ಇವತ್ತು ನಮಗೆ ಮಾದರಿ ಆಗಿದ್ದಾರೆ. ಹಾಗಾಗಿ, ಆತ್ಮಹತ್ಯೆ ಮಾಡಿಕೊಳ್ಳುವಂಥ ನಿಶ್ಯಕ್ತಿ ಮನುಷ್ಯ ಅವರಲ್ಲ. ಅವರು ಹಳ್ಳಿಯಲ್ಲಿ ಹುಟ್ಟಿ ಬಡತನದಲ್ಲಿ ಬೆಳೆದು ಬಂದಂಥ ಒಬ್ಬ ವ್ಯಕ್ತಿ. ಸಾಧನೆಯನ್ನು ಮಾಡಿದಂಥ ವ್ಯಕ್ತಿ. ಬಹುಶಃ ದೆಹಲಿಗೆ ಹೋಗಬೇಕಾದರೆ ಪರೀಕ್ಷೆ ಫೀಸ್ ಕಟ್ಟುವುದಕ್ಕೆ ಹಾಗೂ ಬಸ್ ಚಾರ್ಜ್‌ಗೆ ಹಣವಿಲ್ಲದೆ ಒದ್ದಾಡಿದಂಥ ಅತ್ಯಂತ ಬಡ ಕುಟುಂಬದಿಂದ ಬಂದಂಥ ವ್ಯಕ್ತಿ. ಆ ದಿವಸ ಹೋರಾಟ ಮಾಡಿ ಇವತ್ತು ಅಧಿಕಾರಿಯಾಗಿ ಬಂದಿದ್ದಾರೆ. ಅವರಿಗೆ ಅನ್ಯಾಯ ಆಗಿದೆ. ಎಲ್ಲೋ ಒಂದು ಕಡೆ ಡಿ.ಸಿ ಆಗಿ ಕೆಲಸ ಮಾಡಿದ್ದಾರೆ. Commercial tax ನಲ್ಲಿ ಕೆಲಸ ಮಾಡಿದ್ದಾರೆ. ಸರ್ಕಾರದ ಪರ ಅವರು ಬಹಳಷ್ಟು ಕೆಲಸ ಮಾಡಿರತಕ್ಕಂಥವರು. ಇವತ್ತಿನ ದಿನಸ ಈ ಹಗರಣವನ್ನು ಏನಾದರೂ ಕೈಬಿಟ್ಟರೆ ಬಹುಶಃ ಅಲ್ಲಿರುವ ಎಲ್ಲ IAS, IPS ಅಧಿಕಾರಿಗಳು ಯಾರೂ ಕೆಲಸ ಮಾಡುವುದಿಲ್ಲ. ನಮ್ಮಲ್ಲಿ ಮೂರು ಉದಾಹರಣೆಗಳು ಇವೆ. Sub-Inspector ಬಂಡೆ ಕೇಸ್. ಅದು ಹಾಗೆ ಮುಚ್ಚಿ ಹೋಯಿತು. ಅದು ಏನೂ ಆಗಲೇ ಇಲ್ಲ. ರಶ್ಮಿ ಕೇಸ್. ನಿಮ್ಮ Medical ಲಾಬಿಗೆ ಮಣಿದು ಅವರನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಹಾಕಿದ್ದೀರಿ. ಅವರ ಮೇಲೆ assault ಆಯಿತು. ಅದು ಸಹ ಈಗ ಮುಚ್ಚಿ ಹೋಗುತ್ತಿದೆ. ಅಂದರೆ, ಅಧಿಕಾರಿಗಳು ಯಾವ ರೀತಿಯಲ್ಲಿ ಕೆಲಸ ಮಾಡಬೇಕೆನ್ನುವುದು ನಮಗೆ ಬಹಳ ಚಿಂತನೆ ಮಾಡಬೇಕಾದ ವಿಚಾರ

ಆಗಿದೆ. Ultimately ನಮ್ಮ ತೀರ್ಮಾನಗಳನ್ನು ಅಧಿಕಾರಿಗಳು implement ಮಾಡುತ್ತಾರೆ. ನಾವು ಯಾರು ಮಾಡುವುದಕ್ಕೆ ಆಗುವುದಿಲ್ಲ. ನಾವು ಅಧಿಕಾರಿಗಳನ್ನು ರಕ್ಷಣೆ ಮಾಡದೆ ಇದ್ದರೆ, ಒಬ್ಬ ನಿಷ್ಠಾವಂಥ ಅಧಿಕಾರಿಯನ್ನು ರಕ್ಷಣೆ ಮಾಡದೆ ಇದ್ದರೆ ಬಹುಶಃ ಆಡಳಿತ ನಿಷ್ಕ್ರಿಯವಾಗುತ್ತದೆ. ಆಡಳಿತ ಉಳಿಯುವುದಿಲ್ಲ. ರಾಜಕಾರಣಿಗಳಾದ ನಾವು ಆ ಪಾರ್ಟಿ, ಈ ಪಾರ್ಟಿ ಎಂದು ಕಿತ್ತಾಡಿಕೊಳ್ಳಬಹುದು ಅಷ್ಟೆ. ಆಡಳಿತದಲ್ಲಿ ಅಧಿಕಾರಿಗಳು ಬಹಳ ಅವಶ್ಯಕ. ಹೀಗಾಗಿ, ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಬಹಳ ವಿಮ್ರತೆಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಮೂರು ಕೇಸ್‌ಗಳು ಅಂದರೆ, ಬಂಡೆಯವರ ಕೇಸ್ ಇರಬಹುದು, ರಶ್ಮಿಯವರ ಕೇಸ್ ಇರಬಹುದು, ಡಿ.ಕೆ. ರವಿಯವರ ಕೇಸ್ ಇರಬಹುದು ಈ ಕೇಸ್‌ಗಳು ನಾವು ರಾಜ್ಯದಲ್ಲಿ ಆಡಳಿತಾತ್ಮಕವಾಗಿ ಚಿಂತನೆ ಮಾಡುವಂಥ ವಿಚಾರಗಳು ಆಗಿವೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ಬಹಳ ಸಂತೋಷ. ಡಿ.ಕೆ. ರವಿ ಯವರು ಸಂಶಯಾಸ್ಪದವಾಗಿ ನೇಣು ಹಾಕಿಕೊಂಡಿದ್ದಾರೆ ಎಂದು ಹೇಳಲಾಗಿದೆ. ಅವರೇ ಸ್ಟೂಲ್ ಇಟ್ಟು ಫ್ಯಾನ್‌ಗೆ ಕಟ್ಟಿ ಬಹುಶಃ ಈ ರೀತಿ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಇದು ಯಾರೋ ಮಾಡಿರುವ ಕೃತ್ಯ ಎಂದು ಸಂಶಯ ಇದೆ. ಆಡಳಿತ ದೃಷ್ಟಿಯಿಂದ ಎಲ್ಲವನ್ನೂ ನಾವು smooth ಆಗಿ ನಡೆಸಬೇಕಾದರೆ ಅಧಿಕಾರಿಗಳ ಸಹಕಾರ ನಮಗೆ ಬೇಕಾಗಿದೆ. ಮೊನ್ನೆ ದಿವಸ ನಾಗಮಂಗಲದಲ್ಲಿ ಮರಳು ಹಿಡಿಯಲು ಹೋದ ಒಬ್ಬ Dy.S.P. ಹೆಣ್ಣುಮಗಳ ಮೇಲೆ attack ಮಾಡಲಾಯಿತು. ತಪ್ಪಿಸಿಕೊಂಡು ಬರುವಂಥ ಪರಿಸ್ಥಿತಿ. ಹೀಗಾಗಿ ಅಧಿಕಾರಿಗಳು ಎಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯ? ಈ ಗುಂಡಾಗಿರಿ ಇರಬಹುದು, land ಮಾಫಿಯಾ ಇರಬಹುದು ಅಥವಾ ಲಿಕ್ಕರ್ ಮಾಫಿಯಾ ಇರಬಹುದು ಇವುಗಳ ಮಧ್ಯ ಅಧಿಕಾರಿಗಳು ಕೆಲಸ ಮಾಡುವುದು ಬಹಳ ಕಷ್ಟವಾಗಿದೆ. ಈ ರೀತಿಯಾಗದ ರೀತಿಯಲ್ಲಿ ಅಧಿಕಾರಿಗಳಿಗೆ ಒಳ್ಳೆಯ ಸಂದೇಶ ಕೊಡಬೇಕಾದರೆ CBI ಗೆ refer ಆಗಬೇಕು. CBI enquiry ಆಗಬೇಕು. ಯಾರು culprits ಇದ್ದಾರೆ ಅವರಿಗೆ ಶಿಕ್ಷೆ ಆಗಲೇಬೇಕು. ಇವತ್ತಿನ ದಿವಸ ಮಂಜುನಾಥ್ ಹಗರಣದ ಕೇಸ್ ಕೋರ್ಟಿನಲ್ಲಿ ತೀರ್ಮಾನ ಆಗಿದೆ. ಅವರಿಗೆ

conviction ಆಗಿದೆ. ಅದೇ ರೀತಿ ಇದು ಸಹ ಆಗಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯವನ್ನು ಮಾಡುತ್ತೇವೆ.

ಶ್ರೀ ಆರ್. ಅಶೋಕ್:- ಮಾನ್ಯ ಅಧ್ಯಕ್ಷರೆ, ಡಿ.ಕೆ ರವಿಯವರಿಗೆ ಕೇವಲ 36 ವರ್ಷ ವಯಸ್ಸು ಆಗಿದೆ ಅಷ್ಟೆ. ಒಬ್ಬ ಅಧಿಕಾರಿ ಆಗಿ, ಒಬ್ಬ IAS ಅಧಿಕಾರಿ ಆಗಿ ನೂರಾರು ಕನಸುಗಳನ್ನು ಇಟ್ಟುಕೊಂಡು ರಾಜ್ಯದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವಂಥ, ಇನ್ನೂ ಹತ್ತಾರು ವರ್ಷ ಬಾಳುವಂಥ ಆಸೆ ಇಟ್ಟುಕೊಂಡಿರುವಂಥ ಮನುಷ್ಯ. ನನ್ನ ಹಳೆಯ ಉತ್ತರಹಳ್ಳಿ ಕ್ಷೇತ್ರದಲ್ಲಿ ಅವರು ಮದುವೆಯಾಗಿದ್ದಾರೆ. ಮದುವೆ ಆಗಿ ಇನ್ನೂ ಕೇವಲ ಎರಡೂವರೆ ವರ್ಷ ಆಗಿದೆ. ಆ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳುವಂಥ ಯಾವುದೇ ಪರಿಸ್ಥಿತಿ ಆತನಿಗೆ ಇರಲಿಲ್ಲವೆಂದು ನನಗೆ ಅನ್ನಿಸುತ್ತದೆ. ಕೌಟುಂಬಿಕ ಕಾರಣ ಎಂದು ನಾನು ಕೆಲವು ಪತ್ರಿಕೆಯಲ್ಲಿ ನೋಡಿದ್ದೇನೆ. ನಾನು ನೋಡಿರುವ ಹಾಗೆ ಆ ತರಹದ ಯಾವುದೇ ಘಟನೆ ಇಲ್ಲ. ಒಬ್ಬ ನಿಷ್ಠಾವಂತ ಅಧಿಕಾರಿಯಾಗಿ ಕೆಲಸ ಮಾಡಿದ್ದಾರೆ. ಪೊಲೀಸ್ ಅಧಿಕಾರಿಯನ್ನು ವರ್ಗಾವಣೆ ಮಾಡಿ ಸರ್ಕಲ್ ಇನ್ಸ್‌ಪೆಕ್ಟರ್ ಅನ್ನು ವರ್ಗಾವಣೆ ಮಾಡಿ, ಡಿ.ಸಿ ಅವರನ್ನು ವರ್ಗಾವಣೆ ಮಾಡಿ ಎಂದು ಸಾವಿರಾರು ಹೋರಾಟಗಳು ನಡೆಯುವುದನ್ನು ನಾವೆಲ್ಲ ಕೆಲವು ಕಡೆ ನೋಡಿದ್ದೇವೆ. ಆದರೆ, ಕೆಲವೇ ಕೆಲವು ಅಧಿಕಾರಿಗಳು ಎಲ್ಲಿ ಕೆಲಸ ಮಾಡುತ್ತಿದ್ದಾರೆ ಅವರು ಇರಬೇಕೆಂದು ಹೋರಾಟ ಮಾಡುತ್ತಾರೆ. ಅಂಥ ಒಬ್ಬ ಅಧಿಕಾರಿ, ಅದರಲ್ಲಿ ಡಿ.ಕೆ. ರವಿಯವರು ಮೊದಲಿಗರು. ಅವರ ಹುಟ್ಟೂರು ಬೇರೆ. ಕುಣಿಗಲ್ ಕಡೆಯವರು. ಅವರು ಕೋಲಾರದಲ್ಲಿ ಕೆಲಸ ಮಾಡಿದ್ದಾರೆ. ಒಂದೇ ವರ್ಷದಲ್ಲಿ ಅಷ್ಟೊಂದು ಜನಪ್ರಿಯತೆಯನ್ನು ಗಳಿಸಿ ಇಡೀ ಕೋಲಾರ ಇವತ್ತು ಬಂದ್ ಮಾಡುತ್ತಿದೆ. ನಿನ್ನೆ ರಾತ್ರಿ ಸುದ್ದಿ ಹೋಗಿ ಸುಮಾರು 11-00 ಗಂಟೆ ಸಮಯದಲ್ಲಿ ಕೋಲಾರದ ಎಲ್ಲ ತಾಲ್ಲೂಕುಗಳಲ್ಲಿ ಜನ ಬೀದಿಗೆ ಇಳಿದು ರಸ್ತೆಗೆ ಬಂದು ಧರಣಿ ಮಾಡುತ್ತಾರೆ, ಗಲಾಟೆ ಮಾಡುತ್ತಾರೆ ಎಂದು ಹೇಳಿದರೆ ಅವರು ಯಾವ ರೀತಿ ಸರ್ಕಾರದ ಪರವಾಗಿ, ಜನಸಾಮಾನ್ಯರ ಪರವಾಗಿ ಕೆಲಸ ಮಾಡಿದ್ದಾರೆ ಎನ್ನುವುದಕ್ಕೆ ಇದೊಂದು ಸ್ಪಷ್ಟವಾದಂಥ ಸಾಕ್ಷಿ ಆಗಿದೆ. ನಮಗೆ ಬಹಳ ನೋವು ಆಗಿರುವಂಥದ್ದು ನಾನು ಆ ಇಲಾಖೆಯಲ್ಲಿ

ಕೆಲಸ ಮಾಡಿದ್ದೇನೆ. ಬಗಳಷ್ಟು ಜನ ಹಿರಿಯರು ಇದ್ದಾರೆ. ಮಾನ್ಯ ಜಾರ್ಜ್‌ರವರು ಹಿಂದೆ ಕೂಡ ಮಂತ್ರಿಯಾಗಿದ್ದರು. ಒಬ್ಬ ಪೊಲೀಸ್ ಅಧಿಕಾರಿ ಮಧ್ಯಂತರ ವರದಿಯನ್ನು ಕೊಟ್ಟರೆ ಹೇಗೆ? ಇನ್ನೂ investigation ಆಗಿಲ್ಲ. Investigation Officer ಯಾರು ಇರುತ್ತಾರೆ? ಅಲ್ಲಿ post mortem ಆಗಬೇಕು. ಡಾಕ್ಟರ್ ಕೊಡಬೇಕಾದರೆ ಅವರು 4–5 ದಿನ ಸಮಯಾವಕಾಶ ತೆಗೆದುಕೊಳ್ಳುತ್ತಾರೆ. ಇದು ಬಹಳ sensitive case ಆಗಿದೆ. ಒಬ್ಬ IAS ಅಧಿಕಾರಿ. ಇದರ ಮಧ್ಯ ಒಬ್ಬ ಅಧಿಕಾರಿ ಮಧ್ಯಂತರ ವರದಿ ಕೊಟ್ಟು ಇದು ಮೇಲ್ನೋಟಕ್ಕೆ ಆತ್ಮಹತ್ಯೆ ಎಂದು ಹೇಳಿದರೆ ಈ ತನಿಖೆ ಎಲ್ಲಿ ಹೋಗುತ್ತಿದೆ? ಎಂದು ಜನ ತಿಳಿದುಕೊಳ್ಳುತ್ತಾರೆ. ಅವಶ್ಯಕತೆ ಏನಿತ್ತು? ಯಾರೇ ಆಗಲಿ, ಮಂತ್ರಿ ಆಗಲಿ, ನಾವಾಗಲಿ ಅಧಿಕಾರ ಮಾಡುವಂಥ ಸಂದರ್ಭದಲ್ಲಿ ತನಿಖೆ ಮಾಡುತ್ತಾರೆ, ವರದಿ ಬಂದ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುವಂಥದ್ದು ಒಂದು ಪದ್ಧತಿ. ಸರ್ಕಾರವು ಕೂಡ ಹಾಗೆ ನಡೆಯುವುದು. ಮುಖ್ಯಮಂತ್ರಿ ಆಗಲಿ, ಮಂತ್ರಿ ಆಗಲಿ ಏಕಾಏಕಿ ತೀರ್ಮಾನ ಕೊಡುವುದಕ್ಕೆ ಬರುವುದಿಲ್ಲ. ಏಜೆನ್ಸಿ ಇರುತ್ತದೆ. ಅದನ್ನು ತನಿಖೆಗೆ ಒಪ್ಪಿಸುತ್ತಾರೆ. ಅವರು ವರದಿ ಕೊಡುತ್ತಾರೆ. ಅದರ ಮೇಲೆ ನಾವು act ಮಾಡುವಂಥವರು. ಯಾರೇ ಎಷ್ಟೇ ದೊಡ್ಡ ಅಧಿಕಾರಿ ಇರಲಿ. ಪೊಲೀಸರು ಇದೊಂದು ಮೇಲ್ನೋಟಕ್ಕೆ ಆತ್ಮಹತ್ಯೆ ಎಂದರೆ, ಬೇರೆ ನೋಟಕ್ಕೆ ಏನು ಕಾಣಿಸುತ್ತದೆ? ಇವತ್ತು ಅದನ್ನು ನೋಡುವವರು ಯಾರು? ಇವತ್ತು ಹಿರಿಯ ಅಧಿಕಾರಿಗಳೇ ಹೇಳಿರುವುದರಿಂದ ನೀವು ಪುನಃ ಅವರ ಕೆಳಗಿನ ಅಧಿಕಾರಿಯನ್ನು ನೀವು Investigation Officer ಆಗಿ ಒಬ್ಬ DCP ಯನ್ನು ನೇಮಕ ಮಾಡಿದ್ದೀರಿ. ಅವರು ಹಿರಿಯ ಅಧಿಕಾರಿಗಳ ಮಾತನ್ನು ಕೇಳಲೇಬೇಕು. Already ನೀವು ಮಧ್ಯಂತರ ವರದಿಯನ್ನು ಕೊಟ್ಟಿದ್ದೀರಿ. ಕಿರಿಯ ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಾರೆ? ಇದರಿಂದ ನಮಗೆ ಸ್ಪಷ್ಟವಾಗಿ ಕಾಣಿಸುವಂಥದ್ದು ಇದನ್ನು ಜನ ನಂಬುವುದಿಲ್ಲ. ಏನೇ ವರದಿ ಕೊಟ್ಟರೂ ಒಂದು ಸಂಶಯಭೂತ ಅವರಲ್ಲಿ ಕಾಣುತ್ತಿರುತ್ತದೆ. ಎಲ್ಲಾ ಕಡೆ ಬಹಳಷ್ಟು ಹೋರಾಟ ನಡೆಯುತ್ತಿದೆ. ಅವರು ಉತ್ತರ ಕರ್ನಾಟಕದ ಕಡೆ ಕೆಲಸ ಮಾಡಿದ್ದಾರೆ. ಅಲ್ಲಿ

ಕೂಡ ಬಂದ್ ಮಾಡುತ್ತಿದ್ದಾರೆ. ಅವರಿಗೆ ಕೌಟುಂಬಿಕವಾಗಿ ಒತ್ತಡ ಏನೂ ಇರಲಿಲ್ಲವೆಂದು ನನಗೆ ಅನ್ನಿಸುತ್ತದೆ. ಕಳೆದ ಒಂದು ತಿಂಗಳಿನಿಂದ ಅವರಿಗೆ ಯ್ಯಾರ್ಯಾರು ಫೋನ್ ಕಾಲ್ ಮಾಡಿ ಅವರಿಗೆ ಒತ್ತಡ ಹಾಕಿದರು? ಯಾವ ಒತ್ತಡದಿಂದ ಅವರು ಸತ್ತಿದ್ದಾರೆ? ಇದು ಬಹಳ ಮುಖ್ಯ. ಆತ್ಮಹತ್ಯೆ ಎನ್ನುವುದಾದರೆ ಆತ್ಮಹತ್ಯೆಯನ್ನು ಏಕೆ ಮಾಡಿಕೊಂಡರು ಎನ್ನುವ ಬಗ್ಗೆ ನೀವು ಯಾವ ವಿಧದಲ್ಲಿ ತನಿಖೆ ಮಾಡುತ್ತಿದ್ದೀರಿ? ಆತ್ಮಹತ್ಯೆಯನ್ನು ಏಕೆ ಮಾಡಿಕೊಂಡರು ಎನ್ನುವುದು ಮುಖ್ಯ. ಅವರಿಗೆ ಒತ್ತಡ ಯಾರು ಹಾಕಿದರು? ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಪ್ರೇರಿಪಿಸಿದವರು ಯಾರು? ಅವರು ಆ ರೀತಿಯ ಒಂದು ಸಂಕಷ್ಟಕ್ಕೆ ಸಿಲುಕುವಂತೆ ಮಾಡಿದಂಥ ವ್ಯಕ್ತಿಗಳು ಯಾರು? ಅದು ಜನರಿಗೆ ಗೊತ್ತಾಗಬೇಕಲ್ಲ. ಇಲ್ಲವಾದರ ಜನ ಸುಮ್ಮನೆ ಆಗುವುದಿಲ್ಲ. ಬ್ಲಾಕ್‌ಮೇಲ್ ಮಾಡಿರುವಂಥ ಘಟನೆಗಳು ಈ ರೀತಿ ಘಟನೆಗಳು ಇವೆ. ಅಥವಾ ಕೊಲೆ ಮಾಡಲಾಗಿದೆಯೇ? ಕೊಲೆ ಆಗಿದ್ದರೆ ಯಾವ ರೀತಿ ಆಗಿದೆ? ಇವೆಲ್ಲಾ ತನಿಖೆ ಆಗಬೇಕಾದರೆ ಒಬ್ಬ IAS ಅಧಿಕಾರಿ ಆಗಿರುವುದರಿಂದ, ಕೇಂದ್ರದ ಕೇಡರ್ ಇರುವುದರಿಂದ CBI ತನಿಖೆ ಮಾಡಿ. ಜನರು ಸಹ ಕೇಳುತ್ತಿದ್ದಾರೆ. ಮಾನ್ಯ ಜಗದೀಶ್ ಶೆಟ್ಟರ್ ಇರಬಹುದು, ಮಾನ್ಯ ದತ್ತಾರವರು ಇರಬಹುದು, ನಾವು ಇರಬಹುದು ಇವತ್ತು ಚರ್ಚೆ ಮಾಡಿ CBI ತನಿಖೆ ಕೇಳುತ್ತಿದ್ದೇವೆ. ನಿನ್ನೆ ಟಿ.ವಿ., ಮಾದ್ಯಮಗಳಲ್ಲಿ ಬಂದಿರುವ ವರದಿಯನ್ನು ನೋಡಿದಾಗ ಜನರೇ CBI ಗೆ ಕೊಡಿ ಎಂದು ಕೇಳಿದ್ದಾರೆ. ಜನಕ್ಕಿಂತ ದೊಡ್ಡದು ಯಾವುದೂ ಇಲ್ಲವೆಂದು ಅನ್ನಿಸುತ್ತದೆ. ಆದ್ದರಿಂದ ಗೌರವಾನ್ವಿತ ಮುಖ್ಯಮಂತ್ರಿಗಳು, ಏನೇನು ಆಗಿದೆ? CBI ಅವರು ಏನು ಮಾಡುತ್ತಾರೆ? ಆ ವರದಿ ಬೇಡ. ಜನ ಬಯಕೆ ಮಾಡಿದ್ದಾರೆ. ಜನ CBI ತನಿಖೆಗೆ ಕೊಡಿ ಎಂದು ಅಗ್ರಹ ಮಾಡಿದ್ದಾರೆ. ವಿರೋಧ ಪಕ್ಷದವರು ಹೇಳಿದರೆ ಅವರು ವಿರೋಧನೇ ಮಾತನಾಡುತ್ತಾರೆ ಎನ್ನುವುದನ್ನು ಬಿಟ್ಟು, ಜನ ಹೇಳುತ್ತಿದ್ದಾರೆ CBI ಗೆ ಕೊಡಿ ಎಂದು. ಆದ್ದರಿಂದ ದಯವಿಟ್ಟು, ಮಾನ್ಯ ಮುಖ್ಯಮಂತ್ರಿಗಳು CBI ತನಿಖೆಗೆ ಕೊಡುವ ಮೂಖಾಂತರ ಜನರಿಗೆ ಒಂದು ಅನುಮಾಸ್ಪದ ಏನಿದೆ ಅದು ಹೋಗಬೇಕು. ಅಧಿಕಾರಿಗಳು ಏನು ನಿಷ್ಠಾವಂತರಾಗಿ ಕೆಲಸ

ಮಾಡುತ್ತಿದ್ದಾರೆ ಅವರಿಗೆ ನಾವು moral ಧೈರ್ಯ ತುಂಬಬೇಕಾಗಿದೆ. ಈ ರೀತಿಯ ಘಟನೆಗಳು ಬಹಳಷ್ಟು ನಡೆದಿವೆ. ಮಾನ್ಯ ಜಗದೀಶ್ ಶೆಟ್ಟರ್ ರವರು ಹೇಳಿದ್ದಾರೆ. ಬಂಡೆ ಪ್ರಕರಣ ಇರಬಹುದು, ರಶ್ಮಿ ಪ್ರಕರಣ ಇರಬಹುದು. ಬಂಡೆ ಪ್ರಕರಣದಲ್ಲಿ ಸರ್ಕಾರ ಸರಿಯಾಗಿ ನಡೆದುಕೊಂಡಿಲ್ಲವೆಂದು ಕೇಳಿಬರುತ್ತಿದೆ. ಈ ಒಂದು ವಿಷಯದಲ್ಲಿ ಸರ್ಕಾರ ಒಂದು ಗಟ್ಟಿ ನಿಲುವನ್ನು ತೆಗೆದುಕೊಂಡು ಆಗಿರುವಂಥ ಎಲ್ಲಾ ಘಟನೆಗಳನ್ನು ನೋಡಿದ ಮೇಲೆ ಸರ್ಕಾರದ ಮೇಲೆ ವಿಶ್ವಾಸ ಹೋಗುತ್ತದೆ. ಆದ್ದರಿಂದ, ಈ ಘಟನೆಯನ್ನು ವಿಶೇಷ ಘಟನೆ ಎಂದು ತಿಳಿದುಕೊಂಡು ಒಬ್ಬ ಹಿರಿಯ IAS ಅಧಿಕಾರಿ ಅದರಲ್ಲೂ ಮಾನ್ಯ ಮುಖ್ಯಮಂತ್ರಿಗಳ ಅಡಿಯಲ್ಲಿ ಬರತಕ್ಕಂಥ ಒಂದು ಖಾತೆಯಲ್ಲಿ ಮುಖ್ಯಮಂತ್ರಿಗಳಿಗೆ ಹೆಚ್ಚು ಹಣ ಬರುವಂಥ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಅಂದರೆ, ಆ ಇಲಾಖೆಗೆ ಹಣ ಬರುವ ರೀತಿ, ರಾಜ್ಯದ ಅಭಿವೃದ್ಧಿಗೆ ಕೆಲಸ ಮಾಡಿದ್ದಾರೆ. ಅವರಿಗೆ ಶ್ರದ್ಧಾಂಜಲಿ ಅರ್ಪಿಸಬೇಕಾದರೆ, ಈ ಸದನ ಜನರ ಜೊತೆಗೆ ಇದೆ ಎನ್ನುವುದಾದರೆ ಈ ಘಟನೆಯನ್ನು CBI ತನಿಖೆಗೆ ಕೊಡುವ ಮುಖಾಂತರ ತನಿಖೆಯ ಸ್ಪಷ್ಟ ಚಿತ್ರಣ ಬರಬೇಕೆಂದು ಹೇಳಿ ನಾನು ಆಗ್ರಹ ಮಾಡುತ್ತಿದ್ದೇನೆ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾತನಾಡಿರುವ ಎಲ್ಲ ಸದಸ್ಯರುಗಳು ಕೂಡ ವಿಷಯದ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಸದನದಲ್ಲಿ ಮಂಡಿಸಿದ್ದಾರೆ. ಬಹಳ ಮುಖ್ಯವಾಗಿ ಮೂರು ಅಂಶಗಳನ್ನು ಮಾತ್ರ ನಾನು ತಮ್ಮ ಮೂಲಕ ಸದನದ ಗಮನಕ್ಕೆ ಮತ್ತು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈಗ ಈ ಪ್ರಶ್ನೆ ಮೊದಲಿಗೆ ಪೊಲೀಸ್ ಕಮಿಷನರ್‌ರವರು ಮೇಲ್ನೋಟಕ್ಕೆ ಇದು ಆತ್ಮಹತ್ಯೆ ಎಂದು ಹೇಳಿದರು ಎನ್ನುವುದರ ಜೊತೆಗೆ ನಿಜವಾಗಿಯೂ ಕೂಡ ಒಬ್ಬ ದಕ್ಷ ಐ.ಎ.ಎಸ್ ಅಧಿಕಾರಿಯ ಜೊತೆ ಅಲ್ಲಿಯ ಇಡೀ ಜನಗಳೇ ಒಂದು ರೀತಿಯಲ್ಲಿ ಭಾವನಾತ್ಮಕವಾಗಿ ಸಂಬಂಧವನ್ನು ಇಟ್ಟುಕೊಂಡಂಥವರಾಗಿದ್ದಾರೆ. ಆತನ ಸಾವಿನ ಸುದ್ದಿಯನ್ನು ಕೇಳಿದ ತಕ್ಷಣವೇ, ಇದರೊಳಗೆ ರಾಜಕೀಯವಿಲ್ಲ, ಆ ಪಕ್ಷವಿಲ್ಲ, ಈ ಪಕ್ಷವೆಂಬುದಿಲ್ಲ, ಇವೆಲ್ಲಾ ಏನಿಲ್ಲ. ಇಡೀ ಜನ

ಸಮುದಾಯವೇ ಎದ್ದುನಿಂತುಕೊಂಡು ಈ ಸಾವು ಏಕೋ ನಮಗೆ ಅನುಮಾನವಾಗಿದೆ, ಈ ಸಾವಿನ ಹಿನ್ನೆಲೆ ಬಗ್ಗೆ ತನಿಖೆಯಾಗಬೇಕು ಎನ್ನುವ ತರದಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ, ಕೊಪ್ಪಳದಲ್ಲಿ ಆ ಅಧಿಕಾರಿ ಕೆಲಸ ಮಾಡಿದ್ದರು, ಅಲ್ಲಿಯೂ ಜನರು ತನಿಖೆಯಾಗಬೇಕೆನ್ನುತ್ತಿದ್ದಾರೆ, ಗುಲ್ಬರ್ಗಾದಲ್ಲಿಯೂ ಕೆಲಸ ಮಾಡಿದ್ದರು, ಅರಸೀಕೆರೆಯಲ್ಲಿಯೂ ಕೆಲಸ ಮಾಡಿದ್ದರು, ಎಲ್ಲ ಕಡೆಗಳಲ್ಲಿಯೂ ಅಲ್ಲಿಯ ಜನರು ಆ ಅಧಿಕಾರಿ ಬಗ್ಗೆ ಅಷ್ಟೊಂದು ಎಲ್ಲರೂ ಒಗ್ಗಟ್ಟಿನಿಂದ ಒಕ್ಕೊರಲಿನಿಂದ ತನಿಖೆಯಾಗಬೇಕೆಂದು ಹೇಳುತ್ತಿರುವಾಗ, ದಿಢೀರ್ ಎಂದು ಹೇಳಿ ಪೊಲೀಸ್‌ನವರು ಒಂದು ಹೇಳಿಕೆಯನ್ನು ಕೊಟ್ಟುಬಿಡುವುದು, ನಿಜವಾಗಿಯೂ ಕೂಡ ಆ ದಕ್ಷ ಅಧಿಕಾರಿಯ ಸಾವನ್ನು, ಇದರ ಮರ್ಮವನ್ನು ಬೇಧಿಸಬೇಕು ಎನ್ನುವುದಾಗಿದ್ದರೆ ಮೊದಲು ಪೊಲೀಸ್‌ನವರು ಮಾಡಬೇಕಾಗಿದ್ದ ಪ್ರಾಥಮಿಕ ಕರ್ತವ್ಯ ಇದೊಂದು ಅಸಹಜ ಸಾವು ಎಂದು ಪ್ರಕರಣ ದಾಖಲು ಮಾಡಿಕೊಳ್ಳಬೇಕಾಗಿತ್ತು. ನನಗೆ ಗೊತ್ತಿಲ್ಲ, ನಾನು ವಕೀಲನಲ್ಲ. ಬೋಪಯ್ಯನವರು ಹೇಳಬೇಕು. ನಿಜವಾಗಿಯೂ ಕೂಡ ಅವರು ಮಾಡುವುದಾಗಿದ್ದರೆ ಅಸಹಜ ಸಾವು ಎಂದು ಪ್ರಕರಣ ದಾಖಲಾಗಬೇಕು. ಅದಾದ ಮೇಲೆ ಮೇಲ್ನೋಟ ಎಂದು ಹೇಳಿಕೊಳ್ಳುವುದು ಅದು ಬೇರೆ. ಇದು ಒಂದು ಅಂಶ. ಎರಡನೆಯದಾಗಿ ಬಹಳ ಮುಖ್ಯವಾಗಿ ಇಲ್ಲಿ ಬಂದಿರುವಂಥದ್ದು ಸಿ.ಬಿ.ಐ. ತನಿಖೆಗೆ ಏಕೆ ಕೊಡಲೇಬೇಕಾಗುತ್ತದೆ ಎನ್ನುವುದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ ಬರುತ್ತಿರತಕ್ಕಂಥ ಮಾಹಿತಿಗಳನ್ನು ನೋಡಿದರೆ ಇದಕ್ಕೆ ದುಬೈನಿಂದಲೂ ಕೂಡ ಕರೆಗಳು ಬರುತ್ತಿತ್ತು ಎನ್ನುವುದಿದೆ. ದುಬೈನ ಭೂಮಾಫಿಯಾಗಳು, ರಿಯಲ್ ಎಸ್ಟೇಟ್ ಇಂಟರೆಸ್ಟ್‌ಗಳು ಇದರ ಹಿಂದೆ ಇದ್ದಂಥ ಮಾಫಿಯಾಗಳು ಬೆದರಿಕೆ ಕರೆಗಳನ್ನು ದುಬೈನಿಂದ ಮಾಡುತ್ತಿದ್ದರು ಎನ್ನುವುದಿದೆ. ದುಬೈನಿಂದ ಬರುತ್ತಿತ್ತೇ, ಯಾವ ಯಾವ ಭೂಗತ ಚಟುವಟಿಕೆಗಳಲ್ಲಿ ನಿರತರಾಗಿರತಕ್ಕಂಥ ವ್ಯಕ್ತಿಗಳು ಯಾವ ಯಾವ ದೇಶ ವಿದೇಶಗಳಿಂದ ಮಾಡುತ್ತಿದ್ದರು ಎನ್ನುವ ಪ್ರಶ್ನೆ ಕೂಡ ಬರುತ್ತದೆ. ಇದರ ಜೊತೆಗೆ ಈಗ ಮೂರು ದಿನಗಳ ಹಿಂದಿನಿಂದಲೂ ನಿರಂತರವಾಗಿ ಅವರಿಗೆ

ಬೆದರಿಕೆ ಕರೆಗಳು ಬರುತ್ತಿತ್ತು ಎನ್ನುವುದಾಗಿದೆ. ಅಷ್ಟೇ ಅಲ್ಲ 11.00 ಗಂಟೆಗೆ ಸಾಯುವುದಕ್ಕೆ ಕೆಲವೇ ನಿಮಿಷಗಳ ಮುಂಚೆ ಕೆಲವು tax payer ಗಳು ಫೋನ್ ಮಾಡಿ ನಾವು ನಿಮ್ಮನ್ನು ಭೇಟಿಯಾಗಬೇಕು ಎಂದು ಹೇಳಿ appointment ಕೇಳಿಕೊಂಡಿದ್ದರು ಮತ್ತು ಆ ಮೂರು ಜನ ವ್ಯಕ್ತಿಗಳು ಅಪಾರ್ಟ್‌ಮೆಂಟ್‌ಗೆ ಬಂದಿದ್ದರು ಎನ್ನುವ ಮಾಹಿತಿಗಳು ಕೂಡ ಬರುತ್ತಿವೆ. ಅಂದಮೇಲೆ ಈ ಫೋನ್ ಕರೆಗಳು ಯಾವ ಮೊಬೈಲ್‌ಗಳಿಂದ, ಯಾವ ಯಾವ ಸಂದರ್ಭದಲ್ಲಿ ಯಾರು ಯಾರು ಮಾಡಿದ್ದಾರೆ, ಅದು ಹೊರ ರಾಜ್ಯಗಳಿಂದ ಬಂದಿದೆಯೇ, ಹೊರ ದೇಶಗಳಿಂದ ಬಂದಿದೆಯೇ, ಇವೆಲ್ಲಾ ತನಿಖೆಯಾಗಬೇಕೆಂದರೆ ಖಂಡಿತವಾಗಿಯೂ ನಮ್ಮ ಪೊಲೀಸ್‌ನವರ ದಕ್ಷತೆ ಬಗ್ಗೆ ನಾನು ಈಗಾಗಲೇ ಹೇಳಿದ ಹಾಗೆ ನನಗೇನೂ ಅನುಮಾನವಿಲ್ಲ. ಆದರೆ ಎಲ್ಲೋ ಒಂದು ಕಡೆಯಲ್ಲಿ ಸ್ಪಷ್ಟವಾದ ಸಂದೇಶ ರವಾನೆಯಾಗಬೇಕಾಗುತ್ತದೆ. ಇದರಲ್ಲಿ ಪ್ರತಿಷ್ಠೆಯಿಲ್ಲ, ರಾಜಕೀಯವಿಲ್ಲ, ಪ್ರತಿಪಕ್ಷದವರು ಒತ್ತಾಯ ಮಾಡುವುದು, ಅವರು ಪ್ರತಿಪಕ್ಷದವರು ಒತ್ತಾಯ ಮಾಡಿದ್ದಾರೆಂದು ಆಡಳಿತ ಪಕ್ಷದವರು ತಳ್ಳಿಹಾಕುವ ಪ್ರಶ್ನೆಯೇ ಇಲ್ಲ. ಇಡೀ ಶಾಸಕಾಂಗ, ಸದನ ಒಕ್ಕೊರಲಿನಿಂದ ಒಂದು ಸ್ಪಷ್ಟ ಸಂದೇಶ ರವಾನೆ ಮಾಡುವುದಕ್ಕೆ, ಹೇಗೆ ನೆಲ, ಜಲ ವಿವಾದದೊಳಗಡೆ ಸರ್ವಾನುಮತದ ನಿರ್ಣಯವೆಂದು ಮಾಡುತ್ತೇವೋ ಅದೇ ರೀತಿ ಇವತ್ತು ಸದನದೊಳಗೆ ಸರ್ವಾನುಮತದ ನಿರ್ಣಯ ಮಾಡಿ ಇದನ್ನು ಸಿ.ಬಿ.ಐ. ತನಿಖೆಗೆ ವಹಿಸುತ್ತೇವೆ ಎನ್ನುವ ದಿಟ್ಟ ತೀರ್ಮಾನವನ್ನು ಸದನ ತೆಗೆದುಕೊಂಡರೆ ಮಾತ್ರ ಇವತ್ತು ದಕ್ಷತೆಗೆ ಪ್ರಾಮಾಣಿಕತೆಗೆ ಭ್ರಷ್ಟಾಚಾರದ ವಿರುದ್ಧದ ಹೋರಾಟಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ ಎನ್ನುವ ಸಂದೇಶ ನಾವು ಸದನದಿಂದ ರವಾನೆ ಮಾಡಿದಂತಾಗುತ್ತದೆ. ರಾಜಕಾರಣಿಗಳ ಬಗ್ಗೆ ಈಗಾಗಲೇ ಸಾಕಷ್ಟು ಜನರು ಅಸಹ್ಯವಾಗಿ ಮಾತನಾಡುತ್ತಿದ್ದಾರೆ. ನಮ್ಮಂಥ ರಾಜಕಾರಣಿಗಳಂತೂ ಇವತ್ತು ಭ್ರಷ್ಟಾಚಾರದ ಮೇರು ಪರ್ವತದ ತುತ್ತ ತುದಿಯಲ್ಲಿ ಕುಳಿತುಕೊಂಡು ಇದಕ್ಕೆ ಶಾಮೀಲಾಗಿದ್ದೇವೆ ಎನ್ನುವ ತರಹ ಮಾತನಾಡುತ್ತಿದ್ದಾರೆ. ಕನಿಷ್ಟ ಈ ಪ್ರಕರಣದೊಳಗಡೆಯಲ್ಲಿ ರಾಜಕಾರಣಿಗಳು, ಸರ್ಕಾರ ನಡೆಸುವಂಥವರು, ನಮ್ಮಂಥವರು, ನಮಗೆ ಗೂಬೆ

ಕೂರಿಸಿಕೊಳ್ಳುವುದಕ್ಕೆ ತಯಾರಿಲ್ಲ ಎನುವುದಕ್ಕಾದರೂ ಒಂದು ಸ್ಪಷ್ಟವಾದ ಸಂದೇಶವನ್ನು ರವಾನೆ ಮಾಡುವುದಕ್ಕೆ ಇದನ್ನು ಸಿ.ಬಿ.ಐ ತನಿಖೆಗೆ ವಹಿಸಬೇಕು. ಕಡೆಯದಾಗಿ ಒಂದು ಮಾತನ್ನು ಮಾನ್ಯ ಸಿದ್ದರಾಮಯ್ಯನವರ ಗಮನಕ್ಕೆ ಮತ್ತು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. 1985ರ ದಶಕದೊಳಗಡೆಯಲ್ಲಿ ರಷೀದ್ ಎನ್ನತಕ್ಕಂಥ ಒಬ್ಬ ವಕೀಲನ ಕೊಲೆ ಪ್ರಕರಣವಾಯಿತು. ಆ ಸಂದರ್ಭದಲ್ಲಿ ಹೀಗೆಯೇ ಅನುಮಾನದ ಹುತ್ತಗಳು ಬಂದವು. ಗೃಹ ಮಂತ್ರಿಗಳು ಇದರೊಳಗಡೆ ಇದ್ದಾರೇನೋ ಎನ್ನುವ ಅನುಮಾನದ ಹುತ್ತ ಬಂತು. ಆಗ ಕೇಂದ್ರದಲ್ಲಿ ಒಂದು ಸರ್ಕಾರವಿತ್ತು. ರಾಜ್ಯದಲ್ಲಿ ಜನತಾ ಪಕ್ಷದ ಸರ್ಕಾರವಿತ್ತು. ಸಾಮಾನ್ಯವಾಗಿ ಸಿಬಿ.ಐ. ತನಿಖೆ ಎಂದ ತಕ್ಷಣವೇ ಇದಕ್ಕೆ ನಾವು ಬೇರೆ ಬೇರೆ ತರಹದ ಬಣ್ಣ ಕಟ್ಟಿಕೊಂಡು ಬಿಟ್ಟು, ಇಲ್ಲಾ ನಿಮ್ಮ ಸರ್ಕಾರವಿದ್ದಾಗ ನೀವು ಕೊಟ್ಟಿರಲಿಲ್ಲ, ನಾವು ಈಗ ನಮ್ಮ ಸರ್ಕಾರವಿರುವಾಗ ನಾವು ಕೊಡುವುದಿಲ್ಲವೆಂದು ಹೇಳಿ ಅವರು ಫುಟ್‌ಬಾಲ್‌ನ್ನು toss ಮಾಡುವುದಕ್ಕೆ ಹೋಗುತ್ತಾರೆ. ಈಗ ಅಲ್ಲೊಂದು ಸರ್ಕಾರ, ಇಲ್ಲೊಂದು ಸರ್ಕಾರ ಸಿ.ಬಿ.ಐ.ಗೆ ಆಗ ಒತ್ತಾಯ ಮಾಡುವುದು, ಈಗ ನಾವು ಸಿ.ಬಿ.ಐ.ಗೆ ಕೊಡುವುದಿಲ್ಲವೆನ್ನುವುದು, ಆ ತರಹದ ಚರ್ಚೆಗಳಿಗೆ ಈಗ ಹೋಗುವುದು ಬೇಡ. ನಮ್ಮ ಹತ್ತಿರ ಒಂದು precedent, ಒಂದು ಒಳ್ಳೆಯ ಆರೋಗ್ಯಕರವಾದ ನಿದರ್ಶನವೊಂದು ನಮ್ಮ ಮುಂದಿದೆ. ಇಲ್ಲಿ ಜನತಾ ಪಕ್ಷದ ಸರ್ಕಾರವಿದ್ದಾಗಲೂ ಗೃಹ ಮಂತ್ರಿಗಳು ಜನತಾ ಪಕ್ಷದವರಿದ್ದರೂ, ಅವರ ಮೇಲೂ ಕೂಡ ಸ್ವಲ್ಪ ಅನುಮಾನದ ಹುತ್ತ ಬಂದಾಗ ಆಗಿನ ಮುಖ್ಯಮಂತ್ರಿಗಳಾಗಿದ್ದಂಥ ರಾಮಕೃಷ್ಣ ಹೆಗಡೆಯವರು ಅದನ್ನು ಸಿ.ಬಿ.ಐ.ಗೆ ವಹಿಸಿದಂಥ ಒಂದು ಸ್ಪಷ್ಟವಾದಂಥ ಆರೋಗ್ಯಕರವಾದಂಥ precedent ಇವತ್ತು ಈ ಸದನದಲ್ಲಿ ನಡೆದಿರುವುದಿದೆ. ಹೀಗಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, ಇವತ್ತು ನಿಮ್ಮ ಬಗ್ಗೆ ಜನರು ಅಪಾರ ನೀರಿಕ್ಷೆಯನ್ನಿಟ್ಟುಕೊಂಡಿದ್ದಾರೆ. ನಿಮ್ಮ ಪ್ರಾಮಾಣಿಕತೆಯ ಪಾರದರ್ಶಕತೆಯ ಬಗ್ಗೆ ಜನರು ಬಹಳ ಒಳ್ಳೆಯ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ನೀವು ಕೋಲಾರ ಜಿಲ್ಲೆಯಿಂದ ಆ ಅಧಿಕಾರಿಯನ್ನು ಇಲ್ಲಿಗೆ ಏಕೆ ಟ್ರಾನ್ಸ್‌ಫರ್

ಮಾಡಿದಿರೋ ಗೊತ್ತಿಲ್ಲ. ಆದರೆ ಆ ಅಧಿಕಾರಿಯನ್ನು ಟ್ರಾನ್ಸ್‌ಫರ್ ಮಾಡಿದಾಗಲೇ ಏಕೋ ಸಿದ್ದರಾಮಯ್ಯನವರ ಸರ್ಕಾರವು ಹೀಗೆ ಮಾಡಿಬಿಡ್ತಲ್ಲಾ, ಸಿದ್ದರಾಮಯ್ಯನವರಂಥ ಪ್ರಾಮಾಣಿಕ ಪಾರದರ್ಶಕ ಮುಖ್ಯಮಂತ್ರಿಗಳು ಕೂಡ ಏಕೆ ಈ ರಾಜಕೀಯ ಒತ್ತಾಸೆಗೆ ಮಣಿದುಬಿಟ್ಟು ಅಂಥ ದಕ್ಷತೆಯ ಅಧಿಕಾರಿಯನ್ನು ಜನರು ಉಳಿಸಿ, ಉಳಿಸಿ ಎಂದು ಕೇಳಿಕೊಂಡರೂ ಕೂಡ ಏಕೆ ಅಂಥ ವ್ಯಕ್ತಿಯನ್ನು ಸಿದ್ದರಾಮಯ್ಯನವರಂಥವರು ಟ್ರಾನ್ಸ್‌ಫರ್ ಮಾಡಿಬಿಟ್ಟರಲ್ಲ ಎಂದು ಹೇಳಿ ಜನ ನಿಮ್ಮ ಬಗ್ಗೆ ಅಪಾರವಾದಂಥ ನಿರೀಕ್ಷೆಯನ್ನಿಟ್ಟುಕೊಂಡಿದ್ದರಿಂದಲೇ ಅಭಿಮಾನದಿಂದ ಮಾತನಾಡಿದರು, ಸಿದ್ದರಾಮಯ್ಯನವರು ಏಕಪ್ಪಾ ಆ ಅಧಿಕಾರಿಯನ್ನು ಟ್ರಾನ್ಸ್‌ಫರ್ ಮಾಡಿದರೆಂದು. ಇಲ್ಲಿಗೆ ಬಂದಮೇಲೂ ಕೂಡ ಆ ವ್ಯಕ್ತಿ ತನ್ನ ನಿಸ್ಪೃಹತೆ, ತನ್ನ ದಕ್ಷತೆಯನ್ನು ಮೆರೆಸಿಕೊಂಡು ಹೋದರು. ಎಲ್ಲಿಗಾದರೂ ಹಾಕಿ ನಾನು ಹೀಗೆಯೇ ಕೆಲಸ ಮಾಡುವುದು ಎಂದು ತೋರಿಸಿದರು. ಇಲ್ಲಿಗೆ ಬಂದಮೇಲೆ ಈ ಸಾವು ಸಂಭವಿಸಿದೆ. ಹೀಗಾಗಿ ಇವತ್ತು ಇಡೀ ಶಾಸಕಾಂಗದಲ್ಲಿ, ಸದನದಲ್ಲಿ ನಾವೆಲ್ಲರೂ ಕೂಡ ಒಕ್ಕೊರಲಿನಿಂದ ಒಂದು ತೀರ್ಮಾನವನ್ನು ಮಾಡೋಣ. ಇದು ಒಂದು ರೀತಿ ಸರ್ವಾನುಮತದ ನಿರ್ಣಯ ಎಂದು ಆಗಿಬಿಡಲಿ. ಈ ಪ್ರಕರಣ ಸ್ಪಷ್ಟವಾಗಿ ಸಿ.ಬಿ.ಐ. ತನಿಖೆಗೆ ಯೋಗ್ಯವಾಗಿರತಕ್ಕಂಥ ಪ್ರಕರಣವಾಗಿದೆ. ಮೇಲಾಗಿ ದೊಡ್ಡ ಪ್ರಮಾಣದಲ್ಲಿ ಅಲ್ಲಿ ಕುಳಿತಿರತಕ್ಕಂಥ ಅಧಿಕಾರಿಗಳಿಗೆ, ಇಂದು ಕಾರ್ಯಾಂಗ ಬಿಟ್ಟು ನಾವು ಏನೂ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗವೆಂದು ನಾವು ಸಂವಿಧಾನದಲ್ಲಿ ಮಾಡಿಕೊಂಡಿದ್ದೇವೆ. ಕಾರ್ಯಾಂಗಕ್ಕೂ ಕೂಡ ನಾವು ಇಂದು ಆತ್ಮಸ್ಥೈರ್ಯವನ್ನು ತುಂಬಬೇಕಾಗಿದೆ. ಆ ದೃಷ್ಟಿಯಿಂದ ಇದನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಬೇಕೆಂದು ನಾನು ನನ್ನ ಪಕ್ಷದ ಪರವಾಗಿ ಮತ್ತು ವೈಯಕ್ತಿಕವಾಗಿ ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಐ.ಎ.ಎಸ್. ಅಧಿಕಾರಿ ಡಿ.ಕೆ. ರವಿಯವರ ಅನುಮಾನಸ್ಪದ ಸಾವು ದುಃಖಕರವಷ್ಟೇ ಅಲ್ಲ, ಸುರೇಶ್‌ಕುಮಾರ್‌ರವರು ಹೇಳಿದಂತೆ ಆಘಾತಕಾರಿಯೂ ಹೌದು. ನನಗೆ ವೈಯಕ್ತಿವಾಗಿ ಅವರ ಪರಿಚಯ, ಭೇಟಿಗಿಂತ ಅವರು ಕೋಲಾರದಲ್ಲಿ ಜಿಲ್ಲಾಧಿಕಾರಿಯಾಗಿ ಜನಾನುರಾಗಿಯಾಗಿ ಕೆಲಸ ಮಾಡುತ್ತಿದ್ದಂಥದ್ದನ್ನು ನೋಡಿ ಒಂದು ಅಭಿನಂದನಾ ಪತ್ರವನ್ನು ಬರೆದಿದ್ದೆ, ಇಂಥ ಕೆಲಸವನ್ನು ಮುಂದುವರೆಸಿ ಎಂದಿದ್ದೆ. ಆಗ ಅವರು ಒಂದೆರಡು ದಿನ ಬಿಟ್ಟು ನನಗೆ ಘೋನ್ ಮಾಡಿದ್ದರು. ಆ ಸಂಬಂಧ ಅವತ್ತಿನಿಂದ ಮುಂದುವರೆದು ಆಗಾಗ ಮಾತನಾಡುವಂಥ ಒಂದು ಸಂಬಂಧ ಬೆಳೆದುಕೊಂಡು ಬಂದಿತು. ಆಗ ಅವರು ಯಾವ ರೀತಿ ಕಷ್ಟದಲ್ಲಿ ಐ.ಎ.ಎಸ್. ಮಾಡಿದ್ದು, ಅದೆಲ್ಲವನ್ನು ಘೋನ್‌ನಲ್ಲಿ ಆ ಸಂದರ್ಭದಲ್ಲಿ ಅವರು ನನಗೆ ಹೇಳಿದ್ದರು. ಜೀವನದಲ್ಲಿ ಏನಾದರೂ ಒಂದು ಸಾಧನೆ ಮಾಡಬೇಕು ಎನ್ನುವಂಥ ಹುಮ್ಮಸ್ಸು, ಗುರಿ ಅವರಲ್ಲಿತ್ತು. ಸಾವಿರಾರು ಜನರ ಬದುಕಿಗೆ ದಾರಿಯಾದವರು, ವಿಶ್ವಾಸವನ್ನು ತುಂಬಿದಂಥವರು, ಅವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎನ್ನುವಂಥ ಯೋಚನೆ ಮಾಡುವುದು ಕೂಡ ಅಸಾಧ್ಯ. ಖಂಡಿತ ಇದು ಆತ್ಮಹತ್ಯೆಯಲ್ಲ. ಸೀನಿಯರ್ ಅಧಿಕಾರಿಯಾದ ನಗರದ ಪೋಲೀಸ್ ಕಮಿಷನರ್‌ರವರು 11 ಜನರ ತನಿಖೆಯ ತಂಡವನ್ನು ಮಾಡಿ, ಆ ತನಿಖೆಯ ತಂಡ ರಿಪೋರ್ಟ್ ಕೊಡುವುದಕ್ಕಿಂತ ಮುಂಚೆಯೇ ಮಾಧ್ಯಮಗಳಿಗೆ ಇದು ಮೆಲ್ನೋಟಕ್ಕೆ ಆತ್ಮಹತ್ಯೆ ಎಂದು ಕಂಡುಬರುತ್ತದೆಂದು ಏಕೆ ಹೇಳಿದರು? ಇದರಲ್ಲಿಯೇ ನನಗೆ ಅನುಮಾನವಿದೆ. ಹೀಗೆ ಹೇಳುವುದೇ ಬಹುಶಃ ಜನರಿಗೆ ದಿಕ್ಕು ತಪ್ಪಿಸುವುದಕ್ಕೆ ಇರಬಹುದು ಎನ್ನತಕ್ಕಂಥ ಭಾವನೆ ನನಗೆ ಮಾತ್ರವಲ್ಲ, ಈ ರಾಜ್ಯದ ಜನರಿಗೂ ಕೂಡ ಕಾಡುತ್ತಿದೆ. 11 ಜನರ ತಂಡ ಇನ್ನು ಕಾರ್ಯಕ್ಕೇ ಇಳಿದಿಲ್ಲ. ಅವರು ಇನ್ನು ಯಾವ ವರದಿಯನ್ನು ಕೂಡ ಕೊಟ್ಟಿಲ್ಲ. ಅದಕ್ಕೆ ಮುಂಚೆಯೇ ಇವರು ಹೇಗೆ ಹೇಳುತ್ತಾರೆ? ಪೋಸ್ಟ್‌ಮಾರ್ಟಮ್ ರಿಪೋರ್ಟ್ ಕೂಡ ಬಂದಿಲ್ಲ. ಸುದ್ದಿಗಳನ್ನು plant ಮಾಡುವ ಕೆಲಸ ಮಾಡುತ್ತಿದ್ದಾರೆ. ಈ plant ಮಾಡಬೇಕು ಎನ್ನುವುದರಲ್ಲಿ ಏನಾದರೂ ದುರುದ್ದೇಶವಿದೆಯೇ?

ಹಾಗಿಲ್ಲದಿದ್ದರೆ ಅವರು ಏಕೆ ಈ ರೀತಿ ಹೇಳಿದರು? ಯಾವುದೇ ರೀತಿ ಒಂದು ತಂಡ ಹೀಗಾಗಿ, ಎಷ್ಟೇ ಪ್ರಾಮಾಣಿಕವಾಗಿ, ಪಾರದರ್ಶಕವಾಗಿ ನಮ್ಮ ರಾಜ್ಯದ ಪೊಲೀಸ್ ತನಿಖೆ ವರದಿ ಕೊಟ್ಟರೂ ಕೂಡ ಜನರ ಮನಸ್ಸಿನಲ್ಲಿ ಆ ವರದಿ ಬಗ್ಗೆ ನಂಬಿಕೆ ಉಳಿಯುವುದಿಲ್ಲ. ಆ ನಂಬಿಕೆ ಉಳಿಯಬೇಕು ಎನ್ನುವುದಾದರೆ ಸಿ.ಬಿ.ಐ. ಮೂಲಕವೇ ಇದರ ತನಿಖೆ ನಡೆಸಬೇಕಾಗಿರತಕ್ಕಂಥದ್ದು ಅನಿವಾರ್ಯವಾಗಿದೆ. ನೋಡಿ ನಾನು ಮೂರು ಸಾರಿ, ಅದೇ ರೀತಿ ಏಳು ಸಾರಿ, ಎಂಟು ಸಾರಿ ಗೆದ್ದವರಿದ್ದಾರೆ. ಒಂದೇ ವರ್ಷದಲ್ಲಿ ಅವರು ಕೋಲಾರದಲ್ಲಿ ಅಷ್ಟು ಜನಪ್ರಿಯತೆಯನ್ನು ಸಂಪಾದನೆ ಮಾಡಿದ್ದರು. ನಮಗೆ ಅಷ್ಟು ಜನಪ್ರಿಯತೆಯನ್ನು ಸಂಪಾದನೆ ಮಾಡುವುದಕ್ಕೆ ಆಗಿಲ್ಲ. ಆ ರೀತಿ ಪ್ರಾಮಾಣಿಕತೆಯಿಂದ ಕೆಲಸ ಮಾಡಿದ ಕಾರಣದಿಂದಲೇ ಅವರಿಗೆ ಆ ಜನಪ್ರಿಯತೆ ಬಂದಿದೆ. ಅವರು Commercial Tax Department ಗೆ ಬಂದ ಮೇಲೆ ಯಾರ್‍ಯಾರು ಬುಡಕ್ಕೆ ಕೈ ಹಾಕಿದ್ದರೋ, ಆ ಬುಡದ ಬೇರನ್ನು ಹುಡುಕಿಕೊಂಡು ಹೋದರೆ, ಯಾರ್‍ಯಾರನ್ನು ಅಲ್ಲಾಡಿಸುತ್ತದೆ ಎನ್ನುವುದು ಗೊತ್ತಿಲ್ಲ. ಅಂತಹವರ ಬುಡಕ್ಕೆಲ್ಲಾ ಕೈ ಹಾಕಿದ್ದರು. ಯಾರೋ ಒಬ್ಬ ಪ್ರಮುಖ ರಾಜಕಾರಣಿ, ಅಧಿಕಾರಸ್ಥ ರಾಜಕಾರಣಿ 40 ಕೋಟಿ ರೂ.ಗಳ ತೆರಿಗೆ ಕಟ್ಟಬೇಕಾಗಿತ್ತು. ಆದರೆ ಅವರು ಒತ್ತಡ ಹಾಕಿ ಅದನ್ನು 40 ಲಕ್ಷ ರೂ.ಗಳಿಗೆ ಕಡಿಮೆ ಮಾಡಿಕೊಂಡಿದ್ದಾರೆನ್ನುವ ಸುದ್ದಿಯನ್ನು ಸಹ ಪತ್ರಿಕೆಯಲ್ಲಿ ನೋಡಿರುತ್ತೇನೆ. ಹಾಗಾಗಿ ಇದರ ಹಿಂದೆ ಕಾಣದ ಕೈಗಳು ಖಂಡಿತವಾಗಿಯೂ ಕೆಲಸ ಮಾಡಿವೆ. ಆ ಕಾಣದ ಕೈಗಳು ಅವರ ಸಾವಿಗೆ ಯಾವ ರೀತಿ ಕಾರಣವಾಗಿದೆ ಎನ್ನುವ ಸತ್ಯ ಬಹಿರಂಗವಾಗಬೇಕು. ಮೇಲ್ನೋಟಕ್ಕೆ ಎಂದು ಏನು ಹೇಳಿದ್ದಾರೆ, ಒಳನೋಟದ ಸತ್ಯ ತಿಳಿಯಬೇಕು. ಒಳನೋಟದ ಸತ್ಯ ತೀಳಿಯಬೇಕಾದರೆ ಸಿ.ಬಿ.ಐ.ಗೆ ಕೊಡುವುದೊಂದೇ ಅನಿವಾರ್ಯವಾಗಿರುವ ಕ್ರಮ. ಆ ಕ್ರಮವನ್ನು ಕೈಗೊಳ್ಳುವುದರ ಮೂಲಕ ರಾಜ್ಯ ಸರ್ಕಾರ ಬೇರೆ ಏನನ್ನೂ ಯೋಚನೆ ಮಾಡದೇ, ಜನರ ಭಾವನೆಯನ್ನು ಪ್ರತಿನಿಧಿಸುವಂತಹ ಕೆಲಸವನ್ನು ಈ ವಿಷಯದಲ್ಲಿ ಮಾಡಬೇಕು. ಜನರ ಭಾವನೆ ಏನೆಂಬುದನ್ನು ನಾವು ನಿನ್ನೆ ರಾತ್ರಿಯಿಂದಲೇ ನೋಡುತ್ತಿದ್ದೇವೆ. ನಿನ್ನೆ ಈ ಸುದ್ದಿ ಕಿವಿಗೆ ಬಿದ್ದ

ಕೂಡಲೇ, ಜನರ ಭಾವನೆ ಏನು ಎನ್ನುವುದನ್ನು ಹೇಳುವ ಕೆಲಸ ಮಾಡುತ್ತಿದ್ದಾರೆ. ಇವತ್ತು ಒಳ್ಳೆಯ ಭಾವನೆ ಉಳಿದುಕೊಂಡಿಲ್ಲ. ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ ಇಲ್ಲ ಎನ್ನುವ ಭಾವನೆ ಜನಜನಿತವಾಗುತ್ತಿದೆ. ಅದು ಲೋಕಾಯುಕ್ತ ರೈಡ್ ಪ್ರಕರಣದಲ್ಲಿರಬಹುದು, ರಶ್ಮಿ ಮಹೇಶ್ ಪ್ರಕರಣದಲ್ಲಿರಬಹುದು, ಚೆಲುವರಾಜು ಪ್ರಕರಣದಲ್ಲಿರಬಹುದು. ಈ ರೀತಿ ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ ಇಲ್ಲವೆನ್ನುವ ವಾತಾವರಣ ಸೃಷ್ಟಿಯಾಗುತ್ತಿರುವುದು ಅಪಾಯಕಾರಿ. ಹಾಗಾಗಿ ಈ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸುವುದೇ ಅನಿವಾರ್ಯವಾಗಿರುವಂತಹ ಕ್ರಮ. ಇಲ್ಲದಿದ್ದರೆ ಇದು ಪುನಃ ಪಟ್ಟಭದ್ರ ಹಿತಾಸಕ್ತಿಗಳ ರಕ್ಷಣೆಗೆ ಅವಕಾಶವಾಗುತ್ತದೆನ್ನುವ ಭಾವನೆ ಉಂಟಾಗುತ್ತದೆ. ಈಗ ನಾವು ಏನನ್ನಾದರೂ ಮುಚ್ಚಿಹಾಕಬಹುದು, ಜನರ ಆಕ್ರೋಶವನ್ನು ಮುಚ್ಚಿಹಾಕುವುದಕ್ಕಾಗುವುದಿಲ್ಲ. ಸತ್ಯವನ್ನು ಕೆಲ ಕಾಲ ಮಾತ್ರ ಮುಚ್ಚಿಹಾಕಬಹುದೇ ಹೊರತು ಶಾಶ್ವತವಾಗಿ ಮುಚ್ಚಿಹಾಕುವುದಕ್ಕಾಗುವುದಿಲ್ಲ. ಜನರ ಆಕ್ರೋಶ ಸ್ಫೋಟಗೊಂಡರೆ ನಾವ್ಯಾರು ಇಲ್ಲಿ ಕುಳಿತುಕೊಂಡು ನೆಮ್ಮದಿಯಾಗಿ ಆಡಳಿತ ಮಾಡುವುದಕ್ಕೆ ಕಾಲ ಉಳಿಯುವುದಿಲ್ಲ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಇದರ ಸತ್ಯಾಸತ್ಯತೆಯ ತನಿಖೆಗೆ ಸಿ.ಬಿ.ಐ.ಗೆ ವಹಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):– ಮಾನ್ಯ ಅಧ್ಯಕ್ಷರೆ, ವಿಧಾನಸಭೆ ಅಧಿವೇಶನ ನಡೆಯುತ್ತಿದೆ. ಒಬ್ಬ ಐ.ಎ.ಎಸ್. ಅಧಿಕಾರಿಯವರನ್ನು ಪ್ರಾಮಾಣಿಕತೆ, ಬದ್ಧತೆಯಿಂದ ಜನ ಬಿಂಬಿಸಿದ್ದಾರೆ. ಆ ಪ್ರಾಮಾಣಿಕ ಬದ್ಧತೆಯ ಕೊಲೆ ಇವತ್ತಾಗಿದೆ. ಹಾಗಾಗಿ, ಇವತ್ತು ಈ ಒಂದು ವಿಧಾನಸಭೆ ಏನಿದೆ, ಇದು ಜನರ ಧ್ವನಿ. ನಾವು ಏನೇ ಮಾತನಾಡಿದರೂ ಸಹ ಅದು ಜನರ ಧ್ವನಿ. ಈ ಒಂದು ಪ್ರಕರಣದ ಬಗ್ಗೆ ಜನರು ಹೊರಗಡೆ ಏನು ಮಾತನಾಡುತ್ತಿದ್ದಾರೆನ್ನುವುದನ್ನು ನಿನ್ನೆಯಿಂದಲೇ ನಾವೆಲ್ಲರೂ ಕೇಳುತ್ತಲೇ ಬಂದಿದ್ದೇವೆ. ಪೊಲೀಸ್‌ನವರು ಕೇಸ್‌ನ್ನು unnatural death ಎಂದು ರಿಜಿಸ್ಟರ್ ಮಾಡಿಕೊಂಡಿರುತ್ತಾರೆ. ಇದೊಂದು unnatural death ಅಲ್ಲ, ಇದೊಂದು ಕೊಲೆ ಪ್ರಕರಣ ಎಂದು ಜನರ ಧ್ವನಿಯಾಗಿ ಎಲ್ಲಾ ಕಡೆ ಬರುತ್ತಿದೆ. ಇದಕ್ಕೆ

ಸ್ಪಂದನೆ ಕೊಡುವಂತಹ ಕೆಲಸ ಈ ವಿಧಾನಸಭೆಯಿಂದ ಹೋಗಬೇಕಾಗಿದೆ. ಜನರ ಧ್ವನಿಯಾಗಿ ನಾವಿಲ್ಲಿ ಇದ್ದೇವೆಂದು ಹೇಳಿದರೆ ಅದನ್ನು ನಾವು ಮಾಡಬೇಕಾಗಿದೆ. ಬಹುಶಃ ಇವತ್ತು ಈ ಪ್ರಕರಣವನ್ನು ಸಿ.ಬಿ.ಐ.ಗೆ ಕೊಡಬೇಕೆಂದು ಹೇಳಿದರೆ, ಆಗಲೇ ಹೇಳಿದಂತೆ ನಾನು ವಿವರಗಳಿಗೆ ಹೋಗುವುದಿಲ್ಲ. ಕರ್ನಾಟಕ ಪೊಲೀಸ್ ಅಧಿಕಾರಿಗಳ ಕೆಲಸ ಕಾರ್ಯದ ಬಗ್ಗೆ ಸಂಶಯ ಪಡುವಂತಿಲ್ಲ. ಒಂದು ಸಾರಿ unnatural death ಎಂದು ರಿಜಿಸ್ಟರ್ ಆದ ಮೇಲೆ ಒಬ್ಬ ಹಿರಿಯ ಪೊಲೀಸ್ ಅಧಿಕಾರಿ ತಕ್ಷಣವೇ it is a case of suicide ಎಂದು ಹೇಳಿದರೆ, ಆ ಅಧಿಕಾರಿಗಳು ಯಾವ ರೀತಿಯ ಸಂದೇಶ ಕೊಡುತ್ತಾರೆ? ಹಾಗಾದರೆ ಇವರ ತನಿಖೆಯಲ್ಲಿ ಯಾವ ರೀತಿಯ ವಿಶ್ವಾಸವನ್ನಿಡಬೇಕು? ಹಾಗಾಗಿ ಏನು ಆಗುವುದಕ್ಕೆ ಮುಂಚಿತವಾಗಿಯೇ judgment ಕೊಡುವ ಪ್ರವೃತ್ತಿ ಈ ಇಲಾಖೆಯಲ್ಲಿ ಬಂದಿದೆ. ಅದಕ್ಕಾಗಿ ಇದನ್ನು ತಪ್ಪಿಸಬೇಕಾದರೆ ಈ ಪ್ರಕರಣ ಸಿ.ಬಿ.ಐ. ಗೆ ಹೋಗಲೇ ಬೇಕಾಗುತ್ತದೆ. ಈ ಮೂಲಕ ಒಳ್ಳೆಯ ಸಂದೇಶವನ್ನು ಕೊಡಬೇಕು ಮತ್ತು ಅಧಿಕಾರಿಗಳಿಗೂ ಕೂಡ ಧೈರ್ಯವನ್ನು ತುಂಬುವಂತಹ ಕೆಲಸವನ್ನು ಮಾಡಬೇಕು. ಯಾರು ಪ್ರಾಮಾಣಿಕತೆಯಿಂದ, ಕಾನೂನಿನ ಪ್ರಕಾರ ಕೆಲಸ ಮಾಡುತ್ತಾರೆ ಅಂತಹವರ ರಕ್ಷಣೆಗೆ ಈ ವಿಧಾನಸಭೆ ಇದೆ, ಈ ವಿಧಾನಸಭೆಯ ಎಲ್ಲಾ ಸದಸ್ಯರು ಇದ್ದಾರೆ ಎನ್ನುವ ಸಂದೇಶವನ್ನು ಕೊಡಬೇಕಾದರೆ, ಇದನ್ನು ಬಹಳ ಲೈಟ್ ಆಗಿ ತಂಡ ರಚಿಸುವುದು, investigation ಮಾಡಿಸುವುದು, ಇದೆಲ್ಲ ಮಾಮೂಲಾಗಿದೆ. ಅದೆಲ್ಲವನ್ನು ಬಿಟ್ಟು ಇದು ಇಡೀ ರಾಷ್ಟ್ರ ಗಮನಿಸುತ್ತಿರುವ ಪ್ರಕರಣವಾಗಿರುವುದರಿಂದ ಇದನ್ನು ಸಿ.ಬಿ.ಐ.ಗೆ ಕೊಟ್ಟು, ಒಳ್ಳೆಯ ಸಂದೇಶವನ್ನು ಕರ್ನಾಟಕಕ್ಕೆ ಕೊಡೋಣ. ಸನ್ಮಾನ್ಯ ಮುಖ್ಯಮಂತ್ರಿಗಳು ಭ್ರಷ್ಟಾಚಾರದ ವಿರುದ್ಧ ಎತ್ತಿದಷ್ಟು ಧ್ವನಿ, ಅವರು ಹೊರಗೆ ಮತ್ತು ಒಳಗೆ ಎರಡೂ ಕಡೆ ದ್ವನಿ ಎತ್ತಿರುತ್ತಾರೆ. ಹಿಂದೆ ವಿರೋಧಪಕ್ಷದ ನಾಯಕರಾಗಿ ತಾವು ಎತ್ತಿದ ಧ್ವನಿಗೆ ಪೂರಕವಾಗಿ ತಮ್ಮಲ್ಲಿ ಬದ್ಧತೆಯಿದ್ದರೆ ಸಿ.ಬಿ.ಐ.ಗೆ ಕೊಡಬೇಕು. ಭ್ರಷ್ಟರು ಯಾರಿದ್ದಾರೆ, ಯಾರ್ಯಾರ ಹೆಸರುಗಳು ಪತ್ರಿಕೆಗಳಲ್ಲಿ ಬಂದಿದೆ, ಅವರ ಕಳಂಕವನ್ನೂ ತೆಗೆಯುವುದು ಅಥವಾ involve ಆಗಿದ್ದರೆ ಅವರುಗಳಿಗೂ ಶಿಕ್ಷೆ

ಆಗಲೇಬೇಕು ಎನ್ನುವ ಬದ್ಧತೆಯಿಂದ, ಇದಕ್ಕೆ ಪೂರಕವಾಗಿ ತಾವು ಹೇಳಿಕೆಯನ್ನು ಕೊಡುವಾಗ, ಸಿ.ಬಿ.ಐ.ಗೆ ಕೊಡಬೇಕು ಎನ್ನುವ ಒತ್ತಾಯವನ್ನು ಮಾಡಿದಾಗ ಮಾತ್ರ ಇಂತಹ ಒಂದು ಪ್ರಾಮಾಣಿಕ ಅಧಿಕಾರಿಗೆ ಒಂದು ಗೌರವವನ್ನು ಕೊಡುವಂತಾಗುತ್ತದೆ ಎನ್ನುವ ಮಾತನ್ನು ಹೇಳಿ, ಮತ್ತೊಮ್ಮೆ ಇದರ ಬಗ್ಗೆ ಸಿ.ಬಿ.ಐ. ತನಿಖೆ ಆಗಲೇಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಚೆಲುವರಾಯಸ್ವಾಮಿ (ನಾಗಮಂಗಲ):- ಮಾನ್ಯ ಅಧ್ಯಕ್ಷರೆ, ಸಾಕಷ್ಟು ಜನ ಸದಸ್ಯರು ಈ ಬಗ್ಗೆ ಚರ್ಚೆ ಮಾಡಿದ್ದಾರೆ. ಹಾಗಾಗಿ ನಾನು ಹೆಚ್ಚಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸಹ ಈ ವಿಚಾರದಲ್ಲಿ ನಮ್ಮ ಚರ್ಚೆಗೆ ವಿರುದ್ಧವಾಗಿರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಕಾರಣ ಅವರು ಇಂತಹದ್ದನ್ನು ಯಾವತ್ತಿಗೂ ಸಹಿಸಿಕೊಂಡು ಬಂದಂತವರಲ್ಲ. ಡಿ.ಕೆ. ರವಿ ಅವರು ಮತ್ತು ಬಹಳಷ್ಟು ಜನ ಪ್ರಾಮಾಣಿಕ ಅಧಿಕಾರಿಗಳು ಕೆಲಸ ಮಾಡಿ ಅನೇಕ ಸಮಸ್ಯೆಗಳನ್ನು ಎದುರಿಸಿದ್ದಾರೆ ಮತ್ತು ಕೆಲವು ಈ ರೀತಿಯ ಘಟನೆಗಳನ್ನು ಸಹ ನೋಡಿದ್ದೇವೆ. ಆದರೆ ನಿನ್ನೆ ಟಿ.ವಿ. ಮುಂದೆ ಕುಳಿತು ಕೊಂಡಾಗ, ಕೋಲಾರ ಜಿಲ್ಲಾ head quarter ನಲ್ಲಿ ಸಂಘಟನೆಗಳು ಮತ್ತು ಪ್ರಮುಖರು ಪ್ರತಿಭಟನೆ ಮಾಡಿಲ್ಲ. ಪ್ರತಿ ಗ್ರಾಮದಲ್ಲಿ ಸಣ್ಣ ಗ್ರಾಮದಿಂದ ದೊಡ್ಡ ಗ್ರಾಮದವರೆಗೂ ಪ್ರತಿಭಟನೆ ಮಾಡುತ್ತಿದ್ದಾರೆಂದು ಟಿ.ವಿ. ಯಲ್ಲಿ ಪ್ರಸಾರವಾದಾಗ ಬಹುಶಃ ಎಲ್ಲರಿಗೂ ಆಶ್ಚರ್ಯವಾಗಿದೆ. ಗುಲ್ಬರ್ಗಾದಲ್ಲಿ Assistant Commissioner ಆಗಿದ್ದಾಗ, ಜಿಲ್ಲಾಧಿಕಾರಿಗಳಾಗಿದ್ದಾಗ ಒಂದು ವರ್ಷದಲ್ಲಿ ಕೋಲಾರ ಜಿಲ್ಲೆಯಲ್ಲಿ ಪ್ರಾಮಾಣಿಕತೆಯಿಂದ ದಕ್ಷತೆಯಿಂದ ಕೆಲಸ ಮಾಡಿರುವಂತಹದ್ದು, ಕಾನೂನು ಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಿದಂತಹ ಪ್ರಾರಂಭದ ದಿನಗಳಲ್ಲಿ, ಚಿಕ್ಕ ವಯಸ್ಸಿನಲ್ಲಿಯೇ ಆ ವ್ಯಕ್ತಿ ಆ ಮಟ್ಟಕ್ಕೆ ಕೆಲಸ ಮಾಡಿರುವುದನ್ನು ನೋಡಿದಾಗ, ಬಹುಶಃ ಅಲ್ಲಿಂದ Commercial Tax Department ಗೆ ಬಂದು ಅದನ್ನೇ ಮುಂದುವರೆಸಿದ್ದಾರೆ. ಈ ಬಗ್ಗೆ ಅವರ ಸಂಬಂಧಿಕರೆಲ್ಲರೂ ಹೇಳಿರುವುದನ್ನು ನೋಡಿದರೆ, ಅವರು ಅವರ ಬೆಳವಣಿಗೆಯಲ್ಲಿ ಯಾವತ್ತಿಗೂ ಅಧೈರ್ಯದಿಂದ ಬೆಳೆದವರಲ್ಲ.

ಧೈರ್ಯವಾಗಿದ್ದುಕೊಂಡು ಅನೇಕರಿಗೆ ಬುದ್ಧಿ ಹೇಳುವಂತಹವರು ಮತ್ತು ಅನೇಕರ ಮನಸ್ಸನ್ನು ಪರಿವರ್ತನೆ ಮಾಡುವ ಪರಿಸ್ಥಿತಿಯಲ್ಲಿದ್ದಂತಹವರು. ಇದ್ದಕ್ಕಿದ್ದಂತೆ ಈ ರೀತಿಯಾಗಿರುತ್ತದೆ. ಉನ್ನತ ಮಟ್ಟದ ಅಧಿಕಾರಿಯಾಗುವ ಎಲ್ಲಾ ಅವಕಾಶಗಳಿದ್ದು, ಪ್ರಾಮಾಣಿಕವಾದಂತಹ ವ್ಯಕ್ತಿ suicide ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲವೆಂದು ಎಲ್ಲರಲ್ಲಿಯೂ ಸಾಮಾನ್ಯವಾಗಿ ಉದ್ಭವವಾಗುವಂತಹ ಪ್ರಶ್ನೆ. ಸರ್ಕಾರ ಅಥವಾ ಮುಖ್ಯಮಂತ್ರಿಗಳು ಇಲ್ಲಿಯ ಅಧಿಕಾರಿಗಳಿಂದಲೇ ನ್ಯಾಯ ಕೊಡಿಸುವುದಕ್ಕೆ ಸಾಧ್ಯತೆ ಇರಬಹುದು. ಅದು ಒಳ್ಳೆಯ ನ್ಯಾಯ, ಪ್ರಾಮಾಣಿಕವಾದ ತನಿಖೆಯಾಗಬಹುದು, ಆದರೆ ಇಡೀ ರಾಜ್ಯ ಆತಂಕಕ್ಕೇನು ಒಳಗಾಗಿದೆ, ಅಧಿಕಾರಿಗಳಿಗೆಲ್ಲಾ ನಾವೆಲ್ಲಾ ಹೇಗೆ ಕೆಲಸ ಮಾಡುವುದು ಎಂಬ ಆತಂಕ ಏನು ಉಂಟಾಗಿದೆ, ಮಾಫಿಯಾಗಳು ಹುಟ್ಟಿಕೊಂಡು ಬೆದರಿಕೆ ಕರೆಗಳನ್ನು ನೀಡಿ ಎದುರಿಸುವಂತಹದ್ದು ಮತ್ತು ಅವರಿಗೆ ಬೇರೆ ಬೇರೆ ರೀತಿಯಲ್ಲಿ ಬೆದರಿಕೆ ಹಾಕುವಂತಹ ಮಾಫಿಯಾಗಳೇನು ಈ ರಾಜ್ಯದಲ್ಲಿ ಹುಟ್ಟುಹಾಕಿಕೊಂಡಿವೆ, ಅವರಿಗೂ ಸಹ ಒಂದು ಎಚ್ಚರಿಕೆ ಗಂಟೆ ಹೋಗಬೇಕು. ಇನ್ನು ಮುಂದೆ ಮಾಫಿಯಾದವರು ನಿಂತು ಕೊಂಡರೆ, ನಿಮ್ಮನ್ನು ಸದೆಬಡಿಯುತ್ತೇವೆ ಎನ್ನುವ ಒಂದು ಸಂದೇಶ ಕೊಡುವುದಕ್ಕಾದರೂ ನಾವು ಒಗ್ಗಟ್ಟಾಗಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ವಿರೋಧ ಪಕ್ಷದವರು ಬಹಳಷ್ಟು ಮಾತನಾಡಿರುವುದಕ್ಕೆ ನಾವು ಸಿ.ಬಿ.ಐ.ಗೆ ಕೊಡಬೇಕೇ ಎನ್ನುವುದು ಅನೇಕ ಸಂದರ್ಭಗಳಲ್ಲಿ ಆಗಿದೆ. ನೀವು ಹೇಳಿದ ಹಾಗೆ ನಾವು ಏಕೆ ಕೊಡಬೇಕು ಮತ್ತು ಹಿಂದೆ ನೀವೇನಾದರೂ ಕೊಟ್ಟಿದ್ದಿರಾ ಎನ್ನುವ ಚರ್ಚೆಗಳು ಸಾಕಷ್ಟು ನಡೆದಿವೆ. ಆದರೆ ಈ ವಿಚಾರದಲ್ಲಿ ಆ ಹಿನ್ನೆಲೆ ಬೇಡ. ಅವರ ಸಾವಿನ ಹಿನ್ನೆಲೆ, ಪ್ರಾಮಾಣಿಕತೆಯನ್ನು ಕಂಡುಹಿಡಿಯುವುದಕ್ಕೆ ರಾಜ್ಯ ಸರ್ಕಾರದ ಏಜೆನ್ಸಿಗಳಲ್ಲಿ ಸಾಧ್ಯತೆಯಿದ್ದರೂ ಕೂಡ, ಬೇರೆ ಬೇರೆ ಮಾಫಿಯಾಗಳಿಗೆ ಎಚ್ಚರಿಕೆ ಕೊಡುವ ದೃಷ್ಟಿಯಿಂದ ಸಿ.ಬಿ.ಐ.ಗೆ ನೀಡಬೇಕು. ಸಿ.ಬಿ.ಐ.ನಲ್ಲಿ ಆಗುವ ತನಿಖೆಯಿಂದ ಎಚ್ಚರಿಕೆಯಾಗುವಷ್ಟು ಬೇರೆ ಏಜೆನ್ಸಿಗಳ ಮೂಲಕ ಸಾಧ್ಯವಾಗುವುದಿಲ್ಲ. ಆದ್ದರಿಂದ ದಯಮಾಡಿ ಈ ಒಂದು ಪ್ರಕರಣವನ್ನು ಸಿ.ಬಿ.ಐ.ಗೆ ನೀಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದೇ

ವಾಕ್ಯದಲ್ಲಿ ಹೇಳುವುದರಿಂದ ಇಡೀ ರಾಜ್ಯದ ಆರು ಕೋಟಿ ಜನರಿಗಾಗಲಿ ಮತ್ತು ಇಡೀ ರಾಷ್ಟ್ರದಲ್ಲಿರುವ ಅಧಿಕಾರಿಗಳಿಗೆ ಕರ್ನಾಟಕ ಸರ್ಕಾರ ಇಂತಹ ಒಂದು ನಿರ್ಧಾರವನ್ನು ಕೊಡುವುದರ ಮೂಲಕ moral ಆಗಿ ಅವರ ಜೊತೆ ನಿಂತುಕೊಳ್ಳುವಂತಹ ಕೆಲಸ ಮಾಡಿದಂತಾಗುತ್ತದೆ. ಹಾಗಾಗಿ ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ ಈ ಪ್ರಕರಣವನ್ನು ಸಿ.ಬಿ.ಐ.ಗೆ ನೀಡುವುದು ಸೂಕ್ತ.

ಶ್ರೀ ಲಕ್ಷ್ಮಣಸಂಗಪ್ಪ ಸವದಿ (ಅಥಣಿ):- ಮಾನ್ಯ ಅಧ್ಯಕ್ಷರೆ, ಇವತ್ತು ಒಬ್ಬ ಪ್ರಾಮಾಣಿಕ ಅಧಿಕಾರಿ ಆತ್ಮಹತ್ಯೆಯಾಗಿರುವ ಸುದ್ಧಿಯನ್ನು ಟಿ.ವಿ. ಮಾಧ್ಯಮಗಳಲ್ಲಿ, ಪತ್ರಿಕೆಗಳಲ್ಲಿ, ನಿನ್ನೆ ಸಂಜೆಯಿಂದಲೂ ಕಾಣುತ್ತಿದ್ದೇವೆ. ಹೀಗೆ ಕಾಣುತ್ತಿರುವ ಸಂದರ್ಭದಲ್ಲಿ ಎಲ್ಲೋ ಒಂದು ಕಡೆ ರವಿ ಅವರು ಆತ್ಮಹತ್ಯೆ ಮಾಡಿಕೊಂಡಿಲ್ಲ, ಸತ್ಯ ಸತ್ತಿದೆ. ಪ್ರಾಮಾಣಿಕ ಅಧಿಕಾರಿಗಳಿಗೆ ಬೆಲೆಯಿಲ್ಲ ಅಥವಾ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸುವಂತಹ ಅಧಿಕಾರಿಗಳಿಗೆ ಭದ್ರತೆಯಿಲ್ಲ ಎನ್ನುವ ಭಾವನೆ ಇವತ್ತು ಇಡೀ ರಾಜ್ಯದ ಜನರಲ್ಲಿ ಬರುತ್ತಿದೆ.

ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಭದ್ರತೆ ಇಲ್ಲ ಎನ್ನುವಂಥ ಭಾವನೆ ಇಡೀ ರಾಜ್ಯದ ಜನರಲ್ಲಿ ಇವತ್ತು ಬರುತ್ತಿದೆ. ಸಾಕಷ್ಟು ಜನ ಮಾನ್ಯ ಸದಸ್ಯರುಗಳು, ನಮ್ಮ ವಿರೋಧ ಪಕ್ಷದ ನಾಯಕರು, ನಮ್ಮ ಜೆ.ಡಿ.ಎಸ್. ಪಕ್ಷದ ನಾಯಕರು ಮತ್ತು ನಮ್ಮ ಪಕ್ಷದ ಹಿರಿಯರೆಲ್ಲರು ಸಹ ಈ ವಿಚಾರವಾಗಿ ಸರ್ಕಾರದ ಗಮನ ಸೆಳೆದಿದ್ದಾರೆ. ಅದರಲ್ಲಿಯೂ ವಿಶೇಷವಾಗಿ ನಮ್ಮ ದತ್ತಾ ಸಾಹೇಬರು ಹೇಳಿದರು, ಸನ್ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಬಹಳಷ್ಟು ಹತ್ತಿರದಿಂದ ನೋಡಿದ್ದೇನೆ. ಅವರ ಪ್ರಾಮಾಣಿಕತೆ, ಅವರಲ್ಲಿರುವಂಥ ಬದ್ಧತೆ, ಪಾರದರ್ಶಕತೆ ಬಗ್ಗೆ ಅವರು ಹೇಳಿದರು. ಅದು prove ಆಗಬೇಕಾದರೆ ದತ್ತಾರವರ ಹೇಳಿಕೆಗೆ ನಾವೆಲ್ಲರೂ ದನಿಗೂಡಿಸಬೇಕಾದರೆ ಇವತ್ತು ನೇರವಾಗಿ ಮುಖ್ಯಮಂತ್ರಿಗಳು ಮಧ್ಯ ಪ್ರವೇಶ ಮಾಡಿ ಅವರೇ statement ಮಾಡಬೇಕು. ಬೇರೆ ಚರ್ಚೆಗೆ ಅವಕಾಶ ಬೇಡ, ಇದನ್ನು ನಾವು CBI ಗೆ ವಹಿಸುತ್ತೇವೆ, ಒಬ್ಬ ಪ್ರಾಮಾಣಿಕ ಅಧಿಕಾರಿಗೆ

ಆಗಿರುವಂಥ ಆಘಾತವನ್ನು ನಾವೆಲ್ಲರೂ ಒಗ್ಗೂಡಿಕೊಂಡು ತನಿಖೆಯನ್ನು ಮಾಡಿಸೋಣ ಎನ್ನುವ ಭಾವನೆಯನ್ನು ಅವರು ಹೊರಹಾಕಬೇಕಾಗಿದೆ.

ಸನ್ಮಾನ್ಯ ಅಧ್ಯಕ್ಷರೆ, ಆ ಪಕ್ಷದಲ್ಲಿರುವಂಥ ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರ ಪ್ರಶ್ನೆ ಅಲ್ಲ ಇದು. ಇಡೀ ರಾಜ್ಯದಲ್ಲಿರುವಂಥ ಪ್ರಾಮಾಣಿಕ ಅಧಿಕಾರಿಗಳ ಬಗ್ಗೆ ರಕ್ಷಣೆಯನ್ನು ಕೊಡುವ ಕೆಲಸವನ್ನು ನಾವೆಲ್ಲರೂ ಸಹ ಮಾಡಬೇಕಾಗಿದೆ. ದಕ್ಷ ಅಧಿಕಾರಿಗಳ ಜೊತೆಗೆ ನಾವಿದ್ದೇವೆನ್ನುವ ಸಂದೇಶವನ್ನು ಕೊಡಬೇಕಾಗಿದೆ. ಆ ಸಂದೇಶ ಹೋಗಬೇಕಾದರೆ, ಯಾವುದೇ ರಾಜ್ಯದ ತನಿಖೆ ಮಾಡುವುದರಿಂದ ಜನರಿಗೆ ಸಂಪೂರ್ಣ ಭರವಸೆ ಮೂಡುವುದಿಲ್ಲ. ಅದಕ್ಕಾಗಿ CBI ತನಿಖೆ ಮಾಡಿದರೆ ಬಹುಶಃ IA.S., cadre ನಲ್ಲಿರುವಂಥ ಪ್ರಾಮಾಣಿಕ ಅಧಿಕಾರಿಗಳಿಗೆ ಒಂದು ವಿಶ್ವಾಸ ಮೂಡುತ್ತದೆ. ಈಗಾಗಲೇ ನಮ್ಮ ಅಶೋಕ್‌ರವರು ಹೇಳಿದರು, ಇಲ್ಲಿರುವಂಥ ಪೊಲೀಸ್ ಅಧಿಕಾರಿಗಳು ಮೇಲ್ನೋಟಕ್ಕೆ ಇದು ಆತ್ಮಹತ್ಯೆ ಎಂದು ಕಾಣುತ್ತದೆಂದು ಹೇಳಿದ್ದಾರೆ, ಅದರ ಜೊತೆಗೆ ಅವರು ಇನ್ನೊಂದು ಸಂಶಯವನ್ನು ವ್ಯಕ್ತಪಡಿಸಿದರು, ಮೇಲ್ನೋಟಕ್ಕೆ ಇದು ಆತ್ಮಹತ್ಯೆಯಾಗಿದ್ದರೆ, ಅದರ ಒಳನೋಟದಲ್ಲಿ ಏನಿದೆ ಎನ್ನುವುದನ್ನು ತಿಳಿದುಕೊಳ್ಳುವಂಥ ಅವಶ್ಯಕತೆಯಿದೆ ಎನ್ನುವುದು, ಇದನ್ನು ತಿಳಿದುಕೊಳ್ಳಬೇಕಾದರೆ CBI ತನಿಖೆಯನ್ನು ಮಾಡಿಸಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಮುಲಾಜಿಗೊಳಗಾಗದೆ, ಯಾವುದೇ ಭ್ರಷ್ಟ ಜನರ ಆಮಿಷಕ್ಕೆ ಒಳಗಾಗದೆ ಅವರು ಅತ್ಯಂತ ಸಮರ್ಥವಾಗಿ 'ಈ ರಾಜ್ಯದ ಮುಖ್ಯಮಂತ್ರಿಯಿದ್ದಾರೆ' ಎನ್ನುವ ಸಂದೇಶವನ್ನು ಕಳುಹಿಸುವುದಕ್ಕೋಸ್ಕರ ಈ ಪ್ರಕರಣವನ್ನು CBI ತನಿಖೆಗೆ ಕಳುಹಿಸುವಂಥ ಕೆಲಸವನ್ನು ಮಾಡಬೇಕು, ಇಡೀ ಸದನದಲ್ಲಿರುವ ನಾವೆಲ್ಲರೂ ಸಹ ಸರ್ವಾನುಮತದಿಂದ ಒಪ್ಪುತೇವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು:- ಪಿ. ರಾಜೀವ್.

ಶ್ರೀ ಪಿ. ರಾಜೀವ್ (ಕುಡುಚಿ):- ಸನ್ಮಾನ್ಯ ಸಭಾಧ್ಯಕ್ಷರೆ, ಡಿ.ಕೆ. ರವಿ 2003ರಲ್ಲಿ ನಾನು Civil Sub Inspector ಆಗಿ, ಅವರು Excise sub Inspector ಆಗಿ select ಆಗಿ ಒಟ್ಟಿಗೆ training period ಅನ್ನು ಮಾಡಿದೆವು. ಆಗಿನಿಂದ ಅವರು ನನಗೆ ಪರಿಚಯ. ಆಗ, I.A.S., Viva ವರೆಗೂ ಹೋಗಿ ಅವರು qualify ಆಗಿರಲಿಲ್ಲ. Preparation ಮಾಡುತ್ತಿದ್ದೇನೆಂದು ಹೇಳಿದರು. ಬಹಳ ಬಡತನದಿಂದ ಬಂದಂಥ ವ್ಯಕ್ತಿ, ನೋವನ್ನು ಅನುಭವಿಸಿದಂಥ ವ್ಯಕ್ತಿ ನಾನು ಅವರ ಜೊತೆಗೆ ಸಂಪರ್ಕಕ್ಕೆ ಇರುವಷ್ಟು ದಿನದಲ್ಲಿ ಆತ್ಮಹತ್ಯೆಯ ಬಗ್ಗೆ ಆಲೋಚನೆ ಮಾಡುವಂಥ ವ್ಯಕ್ತಿ ಆತ ಆಗಿರಲಿಲ್ಲ ಎನ್ನುವುದು ನನ್ನ ಅಭಿಪ್ರಾಯ.

ಸನ್ಮಾನ್ಯ ಸಭಾಧ್ಯಕ್ಷರೆ, ಪ್ರಾಮಾಣಿಕತೆಗೆ, ಹಿತಾಸಕ್ತಿಗೆ ಸಂಘರ್ಷಗಳು ನಡೆಯುತ್ತವೆ. ಈ ಸಂಘರ್ಷ ಕೆಲವೊಬ್ಬರನ್ನು ವಿಧಾನಸೌಧಕ್ಕೆ ಕಳುಹಿಸುತ್ತದೆ. ವಿಧಾನಸೌಧಕ್ಕೆ ಬಂದರೆ ತೊಂದರೆಯಿಲ್ಲ. ಕೆಲವೊಬ್ಬರನ್ನು ಇಹಲೋಕ ತ್ಯಜಿಸುವಂತೆ ಮಾಡುತ್ತದೆಯಲ್ಲ, ಇದು ಬಹಳ ದುರಂತ! ಇದರ ಬಗ್ಗೆ ಈ ಸದನದ 225 ಜನ ಏನು ಆಲೋಚನೆ ಮಾಡುತ್ತೇವೆನ್ನುವುದರ ಬಗ್ಗೆ ಇಡೀ ಕರ್ನಾಟಕಕ್ಕೆ ಸಂದೇಶವನ್ನು ಕೊಡಬೇಕಾಗಿದೆ. ನಾನು ಫೋನ್‌ನಲ್ಲಿ ನನ್ನ ಸ್ನೇಹಿತನ ಜೊತೆಗೆ ಮಾತನಾಡಿದೆ, FIR ದಾಖಲಾಗಿದೆ, 174 CRPC ಗೆ FIR ಆಗಿದೆ ಎಂದು ನನಗೆ ಮಾಹಿತಿ ಬಂತು. 174 CRPC ಎಂದರೆ 'ಅಸಹಜ ಸಾವು'. ಅದು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದೆಂದು ಹೇಳಿ ದೂರು ದಾಖಲಾಗಿದೆ. 174(ಸಿ) ಸಂಶಯವಿದೆಯೆಂದು ವ್ಯಕ್ತವಾಗುತ್ತದೆ. ಅವನೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡರೆ 174, ಯಾರಾದರೂ ಅವನಿಗೆ ತಾನೇ ನೇಣು ಹಾಕಿಕೊಳ್ಳುವಂಥ ವಾತಾವರಣವನ್ನು ಸೃಷ್ಟಿ ಮಾಡಿ, ಅದೇ ವ್ಯಕ್ತಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದರೆ 306 IPC ಗೆ register ಆಗಬೇಕು, ದುಷ್ಪ್ರೇರಣೆಯೊಳಗೆ ಬರುತ್ತದೆ. ಯಾರಾದರೂ ಬಂದು ಅವರೇ ಅವನ ಕುತ್ತಿಗೆಗೆ ಹಗ್ಗವನ್ನು ಬಿಗಿದು ನೇಣು ಹಾಕಿದ್ದರು ಎಂದರೆ, it comes under 302, ಕೊಲೆ ಪ್ರಕರಣವಾಗುತ್ತದೆ. ಇಲ್ಲಿ ಈ ಸಾವಿನ ಒಳಗಡೆ ಇರುವಂಥ

ನಿಗೂಢವನ್ನು ನಾವು ತೆಗೆಯಬೇಕಲ್ಲ, ಪ್ರಥಮ ವರ್ತಮಾನ ವರದಿಯನ್ನು ಬರೆಯಬೇಕಾದರೆ ಅಲ್ಲಿ 3 ಅಂಶಗಳು ಬಹಳ ಮುಖ್ಯ. ಒಂದು ಮೊದಲನೆಯದಾಗಿ motive ಇರಬೇಕು, ಎರಡನೆಯದಾಗಿ preparation ಇರಬೇಕು, ಮೂರನೆಯದಾಗಿ commission ಇರಬೇಕು. Place of occurrence ಇರಬೇಕು, time of occurrence ಇರಬೇಕು. ಇದನ್ನು FIR draft ಮಾಡುತ್ತೇವೆ, ಎಲ್ಲರಿಗೂ ಈ ಮಾಹಿತಿ ಗೊತ್ತಿರುವುದಿಲ್ಲ. ಡಿ.ಕೆ. ರವಿಯವರ ಪತ್ನಿ ದೂರುದಾರರಾಗಿದ್ದರೆ ಆ ಸಂದರ್ಭದಲ್ಲಿ ಆಕೆ ಬಹಳ ಮಾನಸಿಕ ಆಘಾತಕ್ಕೆ ಒಳಗಾಗಿರುತ್ತಾಳೆ. ಯಾವ ರೀತಿ FIRನ್ನು draft ಮಾಡಬೇಕೆಂದು ಗೊತ್ತಿರುವುದಿಲ್ಲ. ಹೇಗೆ ಪೊಲೀಸರು ಅಥವಾ ಮತ್ತೊಬ್ಬರು ಹೇಳುತ್ತಾರೆ ಅದೇ ರೀತಿ draft ಮಾಡಿಬಿಟ್ಟರೆ ಅದು 174ಗೆ ಬಂದು ಬಿಡುತ್ತದೆ. ಪ್ರಥಮ ವರ್ತಮಾನ ವರದಿ ಆಧಾರದ ಮೇಲೆ investigation ನಡೆದು ಬಿಡುತ್ತದೆ. ಇಲ್ಲಿ ಇರುವಂಥ ಒಂದು ಆಲೋಚನೆ, ಕಳಕಳಿ ಏನೆಂದರೆ ಒಬ್ಬ ಪ್ರಾಮಾಣಿಕ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳುವಷ್ಟರ ಮಟ್ಟಕ್ಕೆ situation create ಆಗಿತ್ತೇ ಅಥವಾ ಯಾರೋ ನಾನು Income Tax Officer ಅಥವಾ Sales Tax Officer ಎಂದು ಹೇಳಿ ಮೂರು ಜನ ಒಳಗೆ ಹೋಗಿದ್ದರು, ಆನಂತರ ಯಾರು ಹೊರಗೆ ಬಂದರು ಎನ್ನುವುದು ಗೊತ್ತಿಲ್ಲ. ಅವರೇ ನೇಣನ್ನು ಹಾಕಿದ್ದರೇ? ಈ ಸಂಪೂರ್ಣ ತನಿಖೆಯಾಗುವ ಅಗತ್ಯವಿದೆ.

ಸನ್ಮಾನ್ಯ ಸಭಾಧ್ಯಕ್ಷರೆ, ಒಂದು ಅಂಶ ನನಗಿಂತ ಮಾನ್ಯ ಮುಖ್ಯಮಂತ್ರಿಗಳಿಗೆ ಚೆನ್ನಾಗಿ ಗೊತ್ತಿದೆ. 'Be good and appear to be good', 'ನೀನು ಪ್ರಾಮಾಣಿಕನಾಗಿರು, ಅಷ್ಟೇ ಅಲ್ಲ ನೀನು ಪ್ರಾಮಾಣಿಕ ಎಂದು ಹೇಳಿ ತೋರಿಸಿಕೊಳ್ಳುವ ರೀತಿ, ಪ್ರದರ್ಶನದ ರೀತಿಯಲ್ಲಿ ಇರು' ಎಂದು, ಮುಖ್ಯಮಂತ್ರಿಗಳು ಇಂಥ ಯಾವುದೇ ಸಂಗತಿಯನ್ನು ಒಪ್ಪಿಕೊಳ್ಳುವುದಿಲ್ಲವೆನ್ನುವುದನ್ನು ಇಡೀ ರಾಜ್ಯದ ಜನತೆ ನಿರೀಕ್ಷೆ ಮಾಡುತ್ತಿದೆ. ನಾವು ಇವತ್ತು ಇಡೀ ಸದನ ಅವರ ಮೇಲೆ ಒಕ್ಕೊರಲಿನಿಂದ ಮನವಿ ಮಾಡುವಂಥದ್ದು, yes, 174 CRPC ಕೆಳಗೆ case register ಆಗಿರುವಂಥ ಪ್ರಕರಣವನ್ನು ಸಹ CBI ಗೆ ವಹಿಸುವಂಥ ಮಟ್ಟಿಗೆ ನಾವು ಹೋಗಿಬಿಟ್ಟರೆ. . .

174 ಅಸಹಜ ಸಾವು. Accident ನಲ್ಲಿ, ಅಥವಾ ಇನ್ನೊಂದರಲ್ಲಿ ನದಿಯಲ್ಲಿ ಬಿದ್ದು, ಬಾವಿಯಲ್ಲಿ ಬಿದ್ದು ಅಥವಾ ಪ್ರಾಣಿ ಯಾವುದೋ ತಿಂದು ಆಗಿವಂಥ ಇಂಥಹ ನೂರಾರು, ಸಾವಿರಾರು ಸಾವುಗಳಾಗುತ್ತಿರುತ್ತವೆ. ಇಂಥ 174 CRPC ಯಡಿಯಲ್ಲಿ register ಆಗಿರುವ ಕೇಸ್‌ನ್ನು CBI ಗೆ ವಹಿಸಿಬಿಟ್ಟರೆ ಏನು ಆಗುತ್ತದೆ? ಈ ಆಲೋಚನೆಯನ್ನು ಮುಖ್ಯಮಂತ್ರಿಗಳು ಮಾಡಬಹುದು ಅಥವಾ 174 CRPC ಯಿದ್ದು, ಅದು ನಾಳೆ investigation ನಲ್ಲಿ 302 ಕೊಲೆ ಪ್ರಕರಣಕ್ಕೆ ಬಂದರೂ ಅದನ್ನು ತನಿಖೆ ಮಾಡುವಷ್ಟು ನಮ್ಮ ಕರ್ನಾಟಕ ಪೊಲೀಸರು ಸಶಕ್ತರಲ್ಲವೇ, ಇದನ್ನು ಸಹ ನಾನು CBI ಗೆ ಕೊಡಬೇಕಾಗುತ್ತದೆಯೇ, ಎನ್ನುವ ಆಲೋಚನೆಗಳು ಬರುವುದು ಸಹಜ. ಎಂದರೆ ಕರ್ನಾಟಕದಲ್ಲಿ ಕಾನೂನು, ಸುವ್ಯವಸ್ಥೆ ಆ ಮಟ್ಟಕ್ಕೆ ಬಿದ್ದು ಹೋಗಿದೆಯೇ? ತನಿಖೆ ಮಾಡುವುದಕ್ಕೆ ಆಗದೇ ಇರುವಂತ investigation wing ನ್ನು ಈ ಸರ್ಕಾರ ಇಟ್ಟುಕೊಂಡಿದೆಯೇ ಎನ್ನುವಂಥ ಆರೋಪವನ್ನು ನಾನು ಎದುರಿಸಬೇಕೇ ಎಂದು ಅವರು ಆಲೋಚನೆ ಮಾಡಬಹುದು. ಆದರೆ, ಈ ನಿಗೂಢ ಸಾವಿನ ಹಿಂದೆ ಈ ಕರ್ನಾಟಕದ ಜನತೆಗೆ ಪ್ರಾಮಾಣಿಕ ಅಧಿಕಾರಿಗಳಿಗೆ, ಈ ಸರ್ಕಾರ ಒಂದು ಸಂದೇಶವನ್ನು ಕೊಡಬೇಕಾಗಿದೆ. ಅದು ಯಾವುದೇ ಪ್ರಕರಣವಿರಲಿ, ಆದರೆ ಒಬ್ಬ ಪ್ರಾಮಾಣಿಕ ವ್ಯಕ್ತಿಯ ಹಿಂದೆ ನಿಗೂಢತೆಯಿದೆ, ಅವನ ಸಾವಿನ ಹಿಂದೆ ಸಂಶಯ ಇರುವುದರಿಂದ ಈ ಸರ್ಕಾರ ದಿಟ್ಟವಾಗಿ ತೀರ್ಮಾನ ತೆಗೆದುಕೊಳ್ಳುತ್ತದೆ. ಆ ಒಂದು ಸಂದೇಶ ಕೊಡುವುದಕ್ಕಾಗಿ, ಒಬ್ಬ ಇನ್ನೂ ಎಳೆಯ ವಯಸ್ಸಿನ ಪ್ರಾಮಾಣಿಕ ಅಧಿಕಾರಿ ಆತ್ಮಹತ್ಯೆಯ ಬಗ್ಗೆ ಆಲೋಚನೆ ಮಾಡದೆ ಬಡತನದಲ್ಲಿ ಹುಟ್ಟಿ ಬಂದವನು, ಡಿ.ಸಿ. ಯಾಗಿ ಕೆಲಸ ಮಾಡುತ್ತಿದ್ದಾಗಲೂ ಸಹ ಅವರ ಮನೆಯ ವಾತಾವರಣ ಅದೇ ರೀತಿ ಇತ್ತು, ಬದಲಾಗಿರಲಿಲ್ಲ. ನಾನೂ ಅವರ ಜೊತೆಗೆ ಫೋನ್‌ನಲ್ಲಿ ಮಾತನಾಡಿದ್ದೇನೆ. ಅಂಥ ಒಬ್ಬ ಪ್ರಾಮಾಣಿಕ ವ್ಯಕ್ತಿಯನ್ನು ನಾವು ಕಳೆದುಕೊಂಡರೆ ಆ ಘಟನೆಯನ್ನು ಈ ಸರ್ಕಾರ ಗಂಭೀರವಾಗಿ ಪರಿಗಣಿಸುತ್ತದೆ. ಅದಕ್ಕಾಗಿ ನೀವೆಲ್ಲ ಇಷ್ಟು ಮಾತನಾಡುವುದು ಅವಶ್ಯಕತೆಯಿಲ್ಲ, ಪಿ. ರಾಜೀವ ನೀನೂ ಕುಳಿತುಕೊಳ್ಳಪ್ಪ, ನಾನೇ ಅದನ್ನು ವೈಯುಕ್ತಿಕವಾಗಿ

ನೀವೆಲ್ಲ ಹೇಳುವುದಕ್ಕೆ ಮುಂಚೆಯೇ ನಾನು ಈ investigation ನ್ನು CBI ಗೆ ವಹಿಸಿ ಈ ಕರ್ನಾಟಕಕ್ಕೆ, ಪ್ರಾಮಾಣಿಕ ಅಧಿಕಾರಿಗಳಿಗೆ ಮತ್ತು ಈ ಘಟನೆಯ ಹಿಂದೆ ಸರ್ಕಾರದ ತೀರ್ಮಾನದ ನಿರೀಕ್ಷೆಯಲ್ಲಿರುವಂಥ ಜನತೆಗೆ ನಾನೊಂದು ಸಂದೇಶವನ್ನು ಕೊಡಬೇಕಾಗಿದೆ. ಅದು 'CBI ಗೆ ವಹಿಸುತ್ತೇನೆ' ಎನ್ನುವ ಸಂದೇಶವನ್ನು ಮಾನ್ಯ ಮುಖ್ಯಮಂತ್ರಿಗಳು ಇವತ್ತು ಘೋಷಣೆ ಮಾಡಲಿ ಎಂದು ಹೇಳುತ್ತಾ ಡಿ.ಕೆ. ರವಿಯಂಥ ಪ್ರಾಮಾಣಿಕ ವ್ಯಕ್ತಿಯ ಸಾವಿನ ಸತ್ಯ, ಒಂದು ವೇಳೆ ಅದು ಕೊಲೆಯೂ ಆಗಿರಲಿಕ್ಕಿಲ್ಲ, ಆತ್ಮಹತ್ಯೆಯೇ ಆಗಿತ್ತು ಎಂದರೆ, yes ಇಷ್ಟು ಸಣ್ಣ ವಯಸ್ಸಿನಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿ ಏನು ನಿರ್ಮಾಣವಾಗುತ್ತಿದೆ ಅದನ್ನು ಯಾವ ರೀತಿ ನಾವು ಬದಲಾವಣೆ ಮಾಡಬಹುದು ಎನ್ನುವಂಥ ಮಾಹಿತಿ ಸ್ಪಷ್ಟವಾಗಿಯಾದರೂ ನಮಗೆ ಗೊತ್ತಾಗಲಿ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದನ್ನು CBI ಗೆ ವಹಿಸಬೇಕೆಂದು ಮನವಿ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ಇವತ್ತು ಡಿ.ಕೆ. ರವಿಯವರು ಏನು ಸಾವಿಗೀಡಾಗಿದ್ದಾರೆ, ನಾನು ಆ ತಾಲ್ಲೂಕಿನಲ್ಲಿ ಎಂ.ಎಲ್.ಎ. ಆಗಿದ್ದಾಗ Probationary E.O. ಆಗಿ ಕೆಲಸ ಮಾಡಿದ್ದಾರೆ. ಬಹಳ ಸರಳ ಸಜ್ಜನಿಕೆಯ ವ್ಯಕ್ತಿ. ಅವರು ಐ.ಎ.ಎಸ್ ಅಧಿಕಾರಿ ಎಂದು ನಮಗೆ ಯಾರಿಗೂ ಗೊತ್ತಾಗುತ್ತಿರಲಿಲ್ಲ. ಅವರು ಅಲ್ಲಿ ಏನು probationary ಕೆಲಸ ಮಾಡಿದರು, ಮೂರೇ ಮೂರು ತಿಂಗಳ ಆ ಅವಧಿಯಲ್ಲಿ ಇಡೀ ಒಂದು ತಾಲ್ಲೂಕು ಪಂಚಾಯತಿ control ಗೆ ತಂದರು. ಅವರು, ಅಲ್ಲಿ ಯಾರ್ಯಾರು ಯಾವ ರೀತಿ ಇರಬೇಕು, ಹೇಗೆ ಇರಬೇಕು, ಯಾರು ಏನೇನು ಮಾಡಬೇಕು ಎನ್ನುವುದನ್ನು ಶಿಸ್ತುಬದ್ಧವಾಗಿ ಕೆಲಸವನ್ನು ಕಲಿಸಿದಂತಹ ಒಬ್ಬ ಪ್ರಾಮಾಣಿಕವಾದಂತಹ ಅಧಿಕಾರಿ. ನಾನು ಅವರ ಜೊತೆ ಯಾವಾಗಲೂ ಕುಳಿತುಕೊಂಡು ಚರ್ಚೆ ಮಾಡುತ್ತಿದ್ದೆ. ಅವರು ಐ.ಬಿ. ಯಲ್ಲಿ ಇರುತ್ತಿದ್ದರು, ನಾನು ಅವರ ಹತ್ತಿರ ವಿಚಾರಗಳನ್ನು ತಿಳಿದುಕೊಳ್ಳುವುದಕ್ಕೋಸ್ಕರ ಹೋಗುತ್ತಿದ್ದೆ. ಅವರಲ್ಲಿ ಇದ್ದಂತಹ ಪ್ರಾಮಾಣಿಕತೆಯನ್ನು ನೋಡಿದರೆ, ಅವರಲ್ಲಿ ಡಬ್ ಇರಲಿಲ್ಲ. ಅವರಲ್ಲಿ ಯಾವ ರೀತಿ ಸರಳತೆ ಇತ್ತು, ವಿಷಯ

ಏನಿತ್ತು, ನಾನು ಯಾವ ರೀತಿ ಕಷ್ಟಪಟ್ಟು ಓದಿದೆ, ಈಗ ಯಾವ ಹಂತಕ್ಕೆ ಬಂದಿದ್ದೇನೆ ಎನ್ನುವುದನ್ನು ಮನಬಿಚ್ಚಿ ಮಾತನಾಡುತ್ತಿದ್ದರು. ಅವರು ನನಗೂ ಕೂಡ guide ಮಾಡುತ್ತಿದ್ದರು. ನೀವು ರಾಜಕಾರಣಿಗಳು ಹೀಗೆಯೇ ಇರಬೇಕು, ಇಲ್ಲದಿದ್ದರೆ ನೋಡಿ ಜನರೆಲ್ಲ ಒಂದು ದಿನ ಎದ್ದು ಓಡಾಡಿಸಿಕೊಂಡು ಹೊಡೆಯುತ್ತಾರೆ ಎಂದು ಎಲ್ಲಾ ವಿಚಾರಗಳನ್ನು ಹೇಳುತ್ತಿದ್ದರು. ಅಂತಹ ವ್ಯಕ್ತಿ ಬಹಳ ಪ್ರಾಮಾಣಿಕವಾಗಿದ್ದು, ಚಿಕ್ಕ ವಯಸ್ಸಿನಲ್ಲಿ ಸಾವಿಗೀಡಾಗಿದ್ದಾರೆ. ಅವರ ಸಾವಿನ ಸುದ್ದಿ ಕೇಳಿ ನಿಜವಾಗಲೂ ನನಗೆ ಬಹಳ ಆಘಾತವಾಯಿತು. ರಾತ್ರಿಯೆಲ್ಲ ನನಗೆ ಒಂದು ರೀತಿ ಬೇಜಾರಾಗಿ ಹೋಯಿತು. ಆ ರೀತಿ ಇದ್ದಂಥವರು, ಅವರು ಆಗಾಗ್ಗೆ ಸಂಪರ್ಕ ಮಾಡುತ್ತಿದ್ದರು. ನಾನು ಚುನಾವಣೆಯಲ್ಲಿ ಗೆದ್ದಾಗ ನನ್ನ ಜೊತೆ ಮಾತನಾಡಿ congrats ಹೇಳಿದ್ದರು. ಅಂತಹವರು ಇವತ್ತು ನಮ್ಮ ಮುಂದೆ ಇಲ್ಲ, ನನಗೆ ಬಹಳ ದುಃಖವಾಗುತ್ತದೆ. ಈಗ ಇರುವಂತಹ ಈ ಸನ್ನಿವೇಶದಲ್ಲಿ ಈ ಸಾವು ಏಕೆ ಬಂತು, ಹೇಗೆ ತಂದುಕೊಟ್ಟಿತು ಎನ್ನುವುದರ ಬಗ್ಗೆ ಇಡೀ ಕರ್ನಾಟಕದ ಜನ ಸರ್ಕಾರದ ಕಡೆ ಕಣ್ಣಿಟ್ಟು ನೋಡುತ್ತಿದ್ದಾರೆ. ಅದರಲ್ಲೂ ಸಿದ್ದರಾಮಯ್ಯನವರ ಸರ್ಕಾರ ಏನು ಮಾಡುತ್ತದೆ? ಇದರ ಬಗ್ಗೆ ಯಾವ ರೀತಿ ತೀರ್ಮಾನ ತೆಗೆದುಕೊಳ್ಳುತ್ತಾರೆ? ರಾತ್ರಿ ಟಿ.ವಿ. ಮಾಧ್ಯಮದಲ್ಲಿ ನಾನಾ ತರದ ಗೊಂದಲಗಳನ್ನು ಸೃಷ್ಟಿ ಮಾಡಿಬಿಟ್ಟರು. ಒಂದು ಟಿ.ವಿ. ನಲ್ಲಿ ಡೆತ್ ನೋಟ್ ಸಿಕ್ಕಿದೆ ಎಂದು ತೋರಿಸುತ್ತಿದ್ದರು, ಇನ್ನೊಂದು ಟಿ.ವಿ. ನಲ್ಲಿ ಡೆತ್ ನೋಟ್ ಸಿಕ್ಕಿಲ್ಲ ಎಂದು ತೋರಿಸುತ್ತಿದ್ದರು. ನಾವು ಆ ಚಾನೆಲ್‌ನಿಂದ ಈ ಚಾನೆಲ್‌ಗೆ change ಮಾಡುವುದು, ಈ ಚಾನೆಲ್‌ನಿಂದ ಆ ಚಾನೆಲ್‌ಗೆ change ಮಾಡುವ ಕೆಲಸವನ್ನು ಮಾಡುತ್ತಿದ್ದೆವು. ಆಮೇಲೆ ಅವರಿಗೆ ಫೋನ್ ಸಂಪರ್ಕ ಮಾಡಿ, ಏನಪ್ಪ ನೀವು ಈ ರೀತಿ ತೋರಿಸುತ್ತಿದ್ದೀರಿ, ಅವರು ಆ ರೀತಿ ತೋರಿಸುತ್ತಿದ್ದಾರೆಂದು ಕೇಳೋಣವೆಂದು ಪ್ರಯತ್ನ ಪಟ್ಟೆವು. ಆಮೇಲೆ ನಮ್ಮ ಪೊಲೀಸ್ ಅಧಿಕಾರಿಗಳು ಮಾತನಾಡಿದ ಹಾಗೆ ಒಂದು ಗೊಂದಲವನ್ನು ಸೃಷ್ಟಿ ಮಾಡಿದರು. ಇದು ಮೇಲ್ನೋಟಕ್ಕೆ ಆತ್ಮಹತ್ಯೆ ಎಂದು ಗೊತ್ತಾಗುತ್ತಿದೆ, ಇದು ಆತ್ಮಹತ್ಯೆ ಎಂದು ಪೊಲೀಸ್ ವರಿಷ್ಠಾಧಿಕಾರಿಗಳು statement release

ಮಾಡಿದರು. ಈ ರೀತಿ ಗೊಂದಲಮಯವಾದಂತಹ ವಾತಾವರಣವನ್ನು ಕರ್ನಾಟಕ ರಾಜ್ಯದ ಜನತೆಗೆ ಒಂದು ಕಡೆ ಸೃಷ್ಠಿ ಮಾಡಿದಿರಿ. ಇದನ್ನು ಜನ ಬಹಳ ಸಹಜವಾಗಿ ತೆಗೆದುಕೊಂಡಿದ್ದಾರೆ. ಒಬ್ಬ ಅಧಿಕಾರಿ ಬಹಳ ಪ್ರಾಮಾಣಿಕವಾಗಿ ಮತ್ತು ದಕ್ಷವಾಗಿ ಕೆಲಸ ಮಾಡಿದಾಗ, ಕೋಲಾರದಲ್ಲಿರುವಂತಹ ಜನ ರಾತ್ರಿಯೆಲ್ಲ ಟೈರ್ ಸುಟ್ಟುಕೊಂಡು ಹೈವೆಯನ್ನು ಬಂದ್ ಮಾಡಿಕೊಂಡು ಕುಳಿತುಕೊಂಡಿರುವುದನ್ನು ನೋಡಿದಾಗ ಅವರು ತೋರಿಸಿರುವಂತಹ ಕೃತಜ್ಞತೆ ಬಹಳ ಸಹಜವಾಗಿರುವಂಥಾದ್ದು, ಅವರ ಪ್ರೀತಿ ವಿಶ್ವಾಸಕ್ಕೆ ಅರ್ಹವಾಗಿರುವಂಥಾದ್ದು. ನೀವು ಪೊಲೀಸ್ ಇಲಾಖೆಯಿಂದಲೇ ತನಿಖೆ ಮಾಡಿಸಿ. ಇದು ಉಳಿಯುತ್ತದೆ. ನೀವು ಸೆಂಟ್ರಲ್ ನಿಂದ ಸಿಬಿಐ ತನಿಖೆ ಮಾಡಿಸುತ್ತೀರಿ ಎಂದರೆ ಜನರಿಗೆ ಏನೋ ಸಿಬಿಐ ಒಂದು ದೊಡ್ಡ ಸಂಸ್ಥೆ, ಕರ್ನಾಟಕ ರಾಜ್ಯದ ಮಟ್ಟಿಗೆ ಸಿಬಿಐ ನಿಂದ ನ್ಯಾಯ ಸಿಕ್ಕಿದೆ ಎಂದು ಕೆಲವು ಪ್ರಕರಣಗಳ ತನಿಖೆಯಿಂದ ಗೊತ್ತಾಗಿಬಿಟ್ಟಿದೆ. Mining ಪ್ರಕರಣದಲ್ಲಿ, ಆ ಪ್ರಕರಣ, ಈ ಪ್ರಕರಣದಲ್ಲಿ ಸಿಬಿಐ ತನಿಖೆ ಎನ್ನುವುದು ಉತ್ತಮವಾದಂತಹ investigation ಸಂಸ್ಥೆ. ಸಿ.ಒ.ಡಿ., ಸಿ.ಐ.ಡಿ. ಎಲ್ಲಾ ಮುಚ್ಚಿ ಹಾಕಿಬಿಡುತ್ತಾರೆ ಎಂದು ಜನರಿಗೆ ಭಾವನೆ ಬಂದಿದೆ. ಆ ಭಾವನೆಯಿಂದ ಜನರೇ ರೊಚ್ಚಿಗೆದ್ದು, ಸಿ.ಬಿ.ಐ. ಕೇಳುತ್ತಾರೆಂದರೆ ಜನರಿಂದ ಬಂದಿರುವಂತಹ ನಾವುಗಳು, ಇಲ್ಲಿ ಕುಳಿತು ನಿರ್ಣಯ ಮಾಡಬೇಕಾಗಿದೆ. ನಾನು ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ. ದಯಮಾಡಿ ಇವತ್ತಿನ ದಿವಸ ಜನರ ಭಾವನೆ ಏನಿದೆ, ನಾವು ಇಲ್ಲಿ ಕುಳಿತುಕೊಂಡು ಆ ಪ್ರಕಾರ ಈಡೇರಿಸುವಂಥಾದ್ದು ನಮ್ಮ ಕರ್ತವ್ಯ. ಅದಕ್ಕೋಸ್ಕರ ನೀವು ಸಿ.ಬಿ.ಐ. ತನಿಖೆಗೆ ಕೊಟ್ಟು, ನಿಜವಾಗಲೂ ಕರ್ನಾಟಕ ರಾಜ್ಯದ ಜನತೆಯ ಮನಸ್ಸಿನಲ್ಲಿ ಹಾಗೂ ತಲೆಯಲ್ಲಿ ಸಂಶಯಾತ್ಮಕವಾದಂತಹ ವಿಚಾರ ಏನು ಅವರ ತಲೆಯಲ್ಲಿ ಮೂಡಿದೆ, ಅದನ್ನು ಹೊರಗೆಡವುದಕ್ಕೋಸ್ಕರ ನೀವು ಸಿ.ಬಿ.ಐ. ತನಿಖೆಗೆ ಕೊಡುವುದು ಸೂಕ್ತ. ಇದರಿಂದ ಮಾನ್ಯ ಸಿದ್ದರಾಮಯ್ಯನವರಿಗೂ ಒಳ್ಳೆಯ ಹೆಸರು ಬರುತ್ತದೆ. ಈ ಪ್ರಕರಣವನ್ನು ಸಿ.ಬಿ.ಐ. ಗೆ ಕೊಟ್ಟರು, ಒಂದು ಉತ್ತಮವಾದಂತಹ ಕೆಲಸವನ್ನು ಮಾಡಿದರು ಎನ್ನುವ ನೆಮ್ಮದಿ ಆಗುತ್ತದೆ. ಜನರಲ್ಲಿರುವ ಆಕ್ರೋಶ ಕಡಿಮೆ

ಮಾಡುವುದಕ್ಕೋಸ್ಕರ ನೀವು ಸಿಬಿಐಗೆ ಕೊಟ್ಟರೆ ಜನ ಸಮಾಧಾನ ಪಡಬಹುದು. ಅದಕ್ಕೋಸ್ಕರ ನೀವು ದಯವಿಟ್ಟು ಮಾಡಬೇಕು. ಅದೆಲ್ಲಕ್ಕಿಂತ ಹೆಚ್ಚಾಗಿ ಇವತ್ತು ಐ.ಎ.ಎಸ್., ಅಧಿಕಾರಿಗೆ ಆಗಿರುವುದು ರಾಜ್ಯದ ಆಡಳಿತದ ವ್ಯವಸ್ಥೆ ಮೇಲೆ ಬರೆ ಬಿದ್ದಿದೆ. ಈ ವಿಚಾರವನ್ನು ಬಹಳ ಲಘುವಾಗಿ ತೆಗೆದುಕೊಳ್ಳಬೇಡಿ. ಆಡಳಿತದ ಯಂತ್ರ ಕುಸಿಯುತ್ತದೆ. ಆಡಳಿತ ಯಂತ್ರ ಭ್ರಷ್ಟಾಚಾರ ಮುಕ್ತವಾಗಿ, ಪ್ರಾಮಾಣಿಕವಾಗಿ, ಐ.ಎ.ಎಸ್., ಅಧಿಕಾರಿಗಳು ಕೆಲಸ ಮಾಡಬೇಕೆಂದಿದ್ದರೆ ಇದರ ಬಗ್ಗೆ ಪ್ರಾಮಾಣಿಕವಾಗಿ ತನಿಖೆಯಾಗಬೇಕಾಗುತ್ತದೆ. ಇಲ್ಲವೆಂದರೆ ಡಿ.ಕೆ. ರವಿಗೆ ಏನಾಯಿತು ಗೊತ್ತಾ ಎಂದು ಮಾಫಿಯಾಗಳು ಹೇಳುವ ಹಾಗೆ ಮಾಡಬೇಡಿ. ಇದನ್ನು ಮಾಫಿಯಾಗಳು ಉದಾಹರಣೆಗೆ ತೆಗೆದುಕೊಂಡು ಹೇಳುತ್ತಾರೆ. ಡಿ.ಕೆ. ರವಿ ಬಹಳ ನಿಷ್ಠಾವಂತ ಎಂದು ಮೆರೆಯುತ್ತಿದ್ದ, ಅವನಿಗೆ ಏನಾಯಿತು ಗೊತ್ತೇ ಎನ್ನುವ ಹಾಗೆ ಮಾಫಿಯಾಗಳಿಗೆ ಗಾದೆ ಮಾತು ಮಾಡಿ ಕೊಡಬೇಡಿ. ಡಿ.ಕೆ. ರವಿಗೆ ಮಾಡಿದವರಿಗೆ ಏನಾಯಿತು ಗೊತ್ತೆ ಎನ್ನುವ ರೀತಿಯಲ್ಲಿ ಸರ್ಕಾರ ಮುತುವರ್ಜಿ ವಹಿಸಿ, ಇದರ ಬಗ್ಗೆ ಸ್ಪಷ್ಟವಾದಂತಹ ನಿರ್ಧಾರವನ್ನು ತೆಗೆದುಕೊಂಡು ಸರಿಯಾದ ನಿರ್ಣಯವನ್ನು ತೆಗೆದುಕೊಳ್ಳದೆ ಹೋದರೆ ರಾಜ್ಯದ ಆಡಳಿತ ವ್ಯವಸ್ಥೆಗೆ ಬರೆ ಬೀಳುತ್ತದೆ, ಈಗಾಗಲೇ ಬರೆ ಬಿದ್ದಿದೆ. ಮತ್ತೆ ಆಡಳಿತ ವ್ಯವಸ್ಥೆ ಮುಂದೆ ಕೂಡ ಕುಸಿಯುತ್ತದೆ, ಕುಸಿಯುವಂತಹ ವ್ಯವಸ್ಥೆಗೆ ಅವಕಾಶವನ್ನು ಮಾಡಿಕೊಡಬೇಡಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಸರ್ಕಾರ ನಿಜವಾಗಲೂ ಮನಸ್ಸು ಮಾಡುತ್ತದೆ ಎಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಬಿ. ನಿಂಗಯ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಬಹಳಷ್ಟು ನಮ್ಮ ಸ್ನೇಹಿತರು ಈ ವಿಚಾರದ ಬಗ್ಗೆ ಮಾತನಾಡಿದ್ದಾರೆ. ನಿನ್ನೆ ರಾತ್ರಿ 7.30 ರಿಂದ 11.30 ವರೆಗೆ ನಾನು ಎಲ್ಲಾ ಟಿ.ವಿ. channel ಗಳಲ್ಲಿ ನೋಡುತ್ತಿದ್ದೆ. ಒಬ್ಬ ಅಧಿಕಾರಿಗೆ ಇಂತಹ ಸ್ಥಿತಿ ಬಂದಿರುವುದು ನಮ್ಮೆಲ್ಲರಿಗೂ ದುಃಖ ಮತ್ತು ಆಘಾತದ ಜೊತೆಗೆ ಬಹಳ ನೋವುಂಟು ಮಾಡಿದೆ. ನಾನು ರಾತ್ರಿ 11.30 ತನಕ ಟಿ.ವಿ. ನೋಡಿ ಮಲಗಿದೆ.

ಇವತ್ತು ಅದರ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಕೂಡ ವರದಿಯಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಬಹಳಷ್ಟು ನಿದರ್ಶನಗಳನ್ನು ಹೇಳಿ ಈ ಸಮಸ್ಯೆಯ ಆಳವನ್ನು ಅವರು ತೆಗೆದಿಟ್ಟಿದ್ದಾರೆ ಹಾಗೂ ನಮ್ಮ ಎಲ್ಲಾ ಸ್ನೇಹಿತರು ಕೂಡ ಈ ವಿಚಾರದಲ್ಲಿ ಮಾತನಾಡಿದ್ದಾರೆ. ಮಾನ್ಯ ರಾಜೀವ್‌ರವರು ಹೇಳಿದ ಹಾಗೆ ಈ ರಾಜ್ಯಕ್ಕೆ ಒಂದು ಸಂದೇಶ ಹೋಗಬೇಕಾಗಿದೆ. ನಾವು ಆಡಳಿತ ಯಂತ್ರಕ್ಕೆ ಧೈರ್ಯವನ್ನು ತುಂಬಬೇಕಾಗಿದೆ. ಇಲ್ಲದೆ ಹೋದರೆ ನಮ್ಮ ಶಿವಲಿಂಗೇಗೌಡರು ಹೇಳಿದ ಹಾಗೆ ಅವರಿಗಾದ ಪರಿಸ್ಥಿತಿ ನಿಮಗೂ ಬರುತ್ತದೆ ಎಚ್ಚರಿಕೆ ಎನ್ನುವ ಮಾತನಾಡಿ, ಬಹುಶಃ ಇಡೀ ಆಡಳಿತ ವ್ಯವಸ್ಥೆಯ ಬಲವನ್ನು ಕುಗ್ಗಿಸತಕ್ಕಂಥ ಕೆಲಸವಾಗುತ್ತದೆ. ಇದು ಆಗಬಾರದು. ಅವರ ಸರಳ ಸಜ್ಜನಿಕೆ ಮತ್ತು ಆದರ್ಶ ಬದುಕನ್ನು ನೋಡಿದಾಗ ಅವರು ತುಂಬಾ ಪ್ರಾಮಾಣಿಕರು, ದಕ್ಷರಾಗಿದ್ದರು. ಇಂತಹ ಅಧಿಕಾರಿಗಳಿಗೆ ನಾವು ಇದ್ದೇವೆ, ನೀವು ಧೈರ್ಯವಾಗಿ ಮುನ್ನುಗ್ಗಿ, ಇಂತಹವರನ್ನು ಬಗ್ಗು ಬಡಿಯುತ್ತೇವೆ ಎನ್ನುವ ಸಂದೇಶವನ್ನು ನೀಡುವ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳುವಂತಹ ನಿರ್ಧಾರ ಇರಬೇಕು ಎನ್ನುವ ವಿನಂತಿಯನ್ನು ಮಾಡುತ್ತೇನೆ. ಅವರು ಬಹಳಷ್ಟು ಬಡತನದಲ್ಲಿ ಬಂದವರು, ನಾವೂ ಕೂಡ ಬಡತನದಲ್ಲಿ ಬಂದವರು. ಅಂತಹ ಅಪರೂಪದ ಅಧಿಕಾರಿಯನ್ನು ಉಳಿಸಿಕೊಳ್ಳುವುದಕ್ಕೆ ಆಗುವುದಿಲ್ಲವೆನ್ನುವುದಾದರೆ, ಲಾಬಿ ಮಾಡುವಂತಹ ಶಕ್ತಿ ಎಷ್ಟು ಬೆಳೆದಿದ್ದಾರೆ, ಅವರ ಸಾವು ಅಸಹಜ ಎಂದು ಟಿ.ವಿ. ಗಳಲ್ಲಿ ಬಿತ್ತರಿಸುತ್ತಿದ್ದಾಗ, ಅದರ ಅಭಿಪ್ರಾಯ ಬೇರೆ ಬಂತು ಎನ್ನುವ ವಿಚಾರವನ್ನು ಬಹಳ ಜನ ಪ್ರಸ್ತಾಪ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರ ಈ ವಿಚಾರದಲ್ಲಿ ಬಹಳ ಗಂಭೀರ ಎಂದು ಪರಿಗಣಿಸಿ, ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ರಷೀದ್ ಕೊಲೆಯಾದಾಗ ಮಾನ್ಯ ದತ್ತಾರವರು ಮಾತನಾಡುತ್ತಾ ಹೇಳಿದರು. ಆಗ ಈ ಮನೆ ಒಂದು ನಿರ್ಧಾರಕ್ಕೆ ಬಂತು. There is a precedent like this. ತಾವೂ ಕೂಡ ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಮಂತ್ರಿಯಾಗಿದ್ದಿರಿ. ಇದು ಅಂತಾಹುದೆ ಸಂದರ್ಭ. ಹಾಗಾಗಿ ಈ ವಿಚಾರದಲ್ಲಿ ತಾವು ಅತ್ಯಂತ ಗಂಭೀರ ಎಂದು ಪರಿಗಣಿಸಿ,

ಇಡೀ ರಾಜ್ಯಕ್ಕೆ ಮತ್ತು ಆಡಳಿತ ವರ್ಗಕ್ಕೆ ಮತ್ತು ಈ ಮನೆಗೆ ಗೌರವ ಬರಬೇಕು ಆ ರೀತಿಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದರ ಮೂಲಕ ಸಿ.ಬಿ.ಐ. ಗೆ ಒಪ್ಪಿಸಿ ಜನರ ವಿಶ್ವಾಸಕ್ಕೆ ಪಾತ್ರರಾಗುವಂತಹ ಕೆಲಸವನ್ನು ಮಾಡಬೇಕು. ಅದರಲ್ಲಿ ನ್ಯಾಯ ಸಿಗಬೇಕು ಮತ್ತು ಅವರ ಕುಟುಂಬಕ್ಕೆ ಆಗಿರುವಂತಹ ದುಃಖವನ್ನು ಭರಿಸುವಂತಹ ಕೆಲಸವಾಗುತ್ತದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ಅಧ್ಯಕ್ಷರೆ, ಡಿ.ಕೆ. ರವಿ ಹಾಗೂ ನನ್ನ ಅಣ್ಣನ ಮಗ ದೆಹಲಿಯಲ್ಲಿ ಓದಿದವರು. ಐ.ಎ.ಎಸ್., ಓದುವುದಕ್ಕೆ ಎಂದು ಹೋದಾಗ ರಮೇಶ ಕೋನರೆಡ್ಡಿ ಎನ್ನುವ ತಹಶೀಲ್ದಾರ್ ಹಾಗೂ ರವಿಯವರು ಒಂದೇ ಕೋಣೆಯಲ್ಲಿದ್ದರು. ಅವರು ನನಗೆ uncle ಎಂದು ಕರೆಯುತ್ತಿದ್ದರು. ಈ ಪ್ರಕರಣ ನೋಡಿದರೆ ಜಿಲ್ಲಾ ಮಟ್ಟದಿಂದ ಹಿಡಿದು ರಾಜ್ಯ ಮಟ್ಟದಲ್ಲಿ ಹೇಗೆ ವ್ಯಾಪಿಸಿದೆ ಎನ್ನುವ ಮಾತನ್ನು ಹೇಳುತ್ತೇನೆ. ಇವತ್ತು ರವಿಯವರ ಪ್ರಕರಣದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ಮಾನ್ಯ ಮುಖ್ಯಮಂತ್ರಿಯವರು ನಿರ್ಧಾರ ತೆಗೆದುಕೊಳ್ಳಬೇಕು. ನಮ್ಮೆಲ್ಲ ಸದಸ್ಯರ ಒತ್ತಾಯ, ತಾಲ್ಲೂಕು ಮಟ್ಟದಿಂದ ಹಿಡಿದು ಜಿಲ್ಲಾ ಮಟ್ಟ ಮತ್ತು ರಾಜ್ಯ ಮಟ್ಟದಲ್ಲಿ ಈ ರೀತಿ ಆಗದ ಹಾಗೆ ಏನು ಮಾಡಬೇಕು? ಈ ರೀತಿ ಪ್ರಕರಣ ಏಕೆ ಆಗುತ್ತವೆ ಎಂದರೆ ಜಿಲ್ಲೆಯಲ್ಲಿ ಕೆಲವು ಜನ real estate ನವರು ಅಧಿಕಾರಿಗಳಿಗೆ ಒಳಗಡೆ ಕೂರಿಸಿ ಕೊಡುವಂತಹ VIP treatment ನಿಂದ ನಾವೇ ಎಂ.ಎಲ್.ಎ. ಗಳು, ನಾವೇ powerful ಎಂದು ತೋರಿಸಿಕೊಳ್ಳುವಂತಹ ವ್ಯವಸ್ಥೆ ಪ್ರಾರಂಭವಾಗಿದೆ. ಇದರ ಜೊತೆಗೆ ಬಹಳ strong ಆಗಿ ಇದ್ದಂಥ ಅಧಿಕಾರಿಗಳನ್ನು Non-Executive post ಗಳಿಗೆ ಹಾಕುವಂಥ ಪ್ರಸಂಗಗಳು ಇವೆ. ಈಗ ಒಳ್ಳೆಯ ಅಧಿಕಾರಿ, ಶ್ರೀಮತಿ ರಶ್ಮಿಯವರ ಪ್ರಕರಣ ಹೇಳಿದರು. ಅವರು ಪಿ.ಯು.ಸಿ. ಇಲಾಖೆಯನ್ನು ಯಾವ ರೀತಿ ಅಭಿವೃದ್ಧಿ ಮಾಡಬೇಕೆಂಬ ಬಗ್ಗೆ ಒಂದು check list ready ಮಾಡಿದರು. ಆ ಚೆಕ್ ಲಿಸ್ಟ್ ಅನ್ನು ಯಾರು ನೋಡಲೇ ಇಲ್ಲ. ಅದೇ ರೀತಿ

ಶ್ರೀಶಿಖಾ ಎಂದು ಮೈಸೂರು ಡಿ.ಸಿ. ಇದ್ದಾರೆ. ಅವರು ಕೂಡ ನಮ್ಮ ಧಾರವಾಡ ಜಿಲ್ಲೆಯಲ್ಲಿ flood ಆದಾಗ ಬಂದು, ಇದನ್ನು ಸರಿ ಮಾಡುವುದಕ್ಕೆ ಏನು ಮಾಡಬೇಕೆಂಬ ಬಗ್ಗೆ ವ್ಯವಸ್ಥೆ ಮಾಡಿದರು. ಅವರು ಮಾಡಿದ ವ್ಯವಸ್ಥೆಯ ಬಗ್ಗೆಯೂ ಯಾರೂ ನೋಡಲಿಲ್ಲ. ಧಾರವಾಡದಲ್ಲಿ ಸಂಜಯ್ ಪಾಟೀಲ್ ಎಂದು ಒಬ್ಬ ಎ.ಸಿ.ಪಿ ಇದ್ದರು. ಅವರು ಬರೀ ಬೆದರಿಸಿದರೆಂದು ಹೇಳಿ ವರ್ಗಾವಣೆ ಮಾಡಿದರು. ಅಂದರೆ ನಾವೆಲ್ಲಾ ಜಿಲ್ಲಾ ಮಟ್ಟದಲ್ಲಿ ಯಾವ ರೀತಿ ಆಗುತ್ತದೆನ್ನುವಂಥ ವಾತಾವರಣದ ಬಗ್ಗೆ ನಾನು ಎರಡು ಮಾತುಗಳನ್ನು ಹೇಳಬೇಕೆಂದು ತಮ್ಮ ಅನುಮತಿಯನ್ನು ಪಡೆದುಕೊಂಡಿದ್ದೇನೆ. ಬಂಡೆ ಪ್ರಕರಣ ಆಯಿತು, ಅದು ದೊಡ್ಡ ಪ್ರಚಾರ ಪಡೆಯಿತು. ಅದನ್ನು ಒಂದು ರೀತಿಯಲ್ಲಿ ಮುಚ್ಚಿ ಹಾಕಲಾಯಿತು. ನಾನು ತಮ್ಮಲ್ಲಿ ಕೈ ಮುಗಿದು ಪ್ರಾರ್ಥನೆ ಮಾಡುವಂಥದ್ದು, ಇವತ್ತು ಮಂತ್ರಿಗಳಿರಬಹುದು, ಐ.ಎ.ಎಸ್. ಅಧಿಕಾರಿಗಳಿರಬಹುದು. ತಾವು ಏನು ತಮ್ಮ ಸಂಬಂಧಗಳನ್ನು ಬೇರೆಯವರ ಜೊತೆಯಲ್ಲಿ ಬೆಳೆಸುತ್ತಿದ್ದೀರಿ. ಅಲ್ಲಿ ಎಂ.ಎಲ್.ಎ. ಗಳಾದ ನಾವು ಹೊರಗಡೆ ಕುಳಿತಿರುತ್ತೇವೆ, ಅವರು ಒಳಗಡೆ ಆರಾಮವಾಗಿ ಕುಳಿತಿರುತ್ತಾರೆ. ಅವರ ಕೆಲಸ ಮುಗಿದ ನಂತರ ನಮ್ಮನ್ನು ಒಳಗಡೆ ಕರೆಯುತ್ತೀರಿ. ಇವೆಲ್ಲಾ ನಮಗೆ ಸ್ವತಃ ಅನುಭವ ಆಗಿರುವಂಥ ಉದಾಹರಣೆಗಳಾಗಿವೆ. ಅದಕ್ಕೆ ಯಾರನ್ನು ಯಾವ ರೀತಿಯಲ್ಲಿ ಎಲ್ಲಿ ಹದ್ದುಬಸ್ತಿನಲ್ಲಿಡಬೇಕೆನ್ನುವ ಬಗ್ಗೆ ಈ ಸದನದಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದರಲ್ಲೂ ವಿಶೇಷವಾಗಿ ನಾನು ಒಂದು ಸಾರಿ ಒಬ್ಬ ಮಂತ್ರಿಯವರ ಹತ್ತಿರ ಹೋಗಿದ್ದೆ, ನಾನು ಇಲ್ಲಿ ಯಾರ ಹೆಸರನ್ನು ಹೇಳುವುದಿಲ್ಲ. ಅವರು ಯಾರು ಒಳಗಡೆ ಹೋದವರು, ಅವರು ಇಷ್ಟು ಹೊತ್ತು ಕುಳಿತು ಚರ್ಚೆ ಮಾಡಿದರಲ್ಲಾ ಎಂದು ಕೇಳಿದೆ. ಅದಕ್ಕೆ ಇಬ್ಬರು real estate ನವರು ಕುಳಿತ್ತಿದ್ದಾರೆ. ನಿಮಗೆ ಇನ್ನು 45 ನಿಮಿಷಗಳು ಭೇಟಿ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದರು. ಆಗ ನಾನು ಸೀದಾ ಎದ್ದು ಹೊರಗಡೆ ಬಂದೆ. ಅಂದರೆ ಆ ರಿಯಲ್ ಎಸ್ಟೇಟ್‌ನವರು ಎಂ.ಎಲ್.ಎ. ಗಳಿಗಿಂತ ಹೆಚ್ಚು ಆಗಿದ್ದಾರೆ. ನಾನು ಒಬ್ಬ ಐ.ಎ.ಎಸ್. ಆಫೀಸರ್ ಹತ್ತಿರ ಹೋಗಿದ್ದೆ, ಅಲ್ಲೂ ಕೂಡ ಅದೇ ರೀತಿ ಆಯಿತು.

ಬೆಂಗಳೂರಿನಲ್ಲಿ ಆಫೀಸ್‌ಗಳಿಗೆ ಹೋದಾಗ ಇಂಥ ಪ್ರಕರಣಗಳು ನಡೆಯುತ್ತಿವೆ. ಅದಕ್ಕೆ ಈ ರೀತಿ ಆಗುತ್ತಿರುವುದಕ್ಕೆ ಕಟ್ಟಳೆ-ಕಾನೂನುಗಳು ಏನು? ಈ ರೀತಿ ತಾಲ್ಲೂಕು ಮಟ್ಟದಲ್ಲೂ ಕೂಡ ನಡೆಯುತ್ತಿದೆ. ಮತ್ತೆ ಭಲೋ ಆಫೀಸರ್‌ಗಳನ್ನು non executive ಗೆ ಹಾಕಿದರೆ ಅವರು executive ಗೆ ಬರುವ ಹಾಗೆ ಇಲ್ಲ. ಇನ್ನು ರಿಯಲ್ ಎಸ್ಟೇಟ್‌ನವರು ಎಲ್ಲಿಗೆ ಬಂದಿದ್ದಾರೆಂದರೆ, ಇಲ್ಲೇ ಮಾನ್ಯ ಕೆ.ಬಿ. ಕೋಳಿವಾಡ್‌ರವರು ಕುಳಿತ್ತಿದ್ದಾರೆ. ಇಲ್ಲಿಂದ ಅಲ್ಲಿಗೆ ಚುನಾವಣೆಗೆ ನಿಲ್ಲುವುದಕ್ಕೆಂದು ಬಂದಿದ್ದರು. ಮಾನ್ಯ ಬಿ.ಆರ್. ಯಾವಗಲ್‌ನವರ ಕ್ಷೇತ್ರಕ್ಕೂ ಬೆಂಗಳೂರಿನಿಂದ ಒಬ್ಬರು ಚುನಾವಣೆಗೆ ನಿಲ್ಲಲು ಬಂದಿದ್ದರು. ಅಂದರೆ ದುಡ್ಡು ಇದ್ದವರು ಬೇಕಾದ್ದು ಮಾಡಬಹುದು, ಇಂಥ ಮರ್ಡರ್ ಮಾಡಿಸಬಹುದಾದಂಥ ವಾತಾವರಣ ರಾಜ್ಯದಲ್ಲಿ start ಆಗಿದೆ. ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ನಾವು ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಸರ್ಕಾರ ಇದಕ್ಕೆ ಒಂದು ಕಾನೂನು-ಕಟ್ಟಳೆ ಮಾಡಬೇಕು. ಜಿಲ್ಲಾ ಮಟ್ಟದಲ್ಲಿ ಯಾರಾದರೂ ಗುಂಡಾಗಿರಿ ಮಾಡಿದರೆ, ಯಾರಾದರೂ ಒಂದು ಕಚೇರಿಯನ್ನು ಪ್ರವೇಶ ಮಾಡಿದರೆ, ಅಧಿಕಾರಿಯನ್ನು ಎದರಿಸಿದರೆ, ಮೊನ್ನೆ ಬೆಳಗಾಂನಲ್ಲಿ ಮಾನ್ಯ ಫಿರೋಜ್ ಶೇಠ್‌ರವರ ಕಚೇರಿಗೆ ಹಿಗ್ಗಾಮುಗ್ಗಾ ಹೋಗಿದ್ದಾರೆ. ಅದನ್ನು ಯಾರು ಕೇಳಿಲ್ಲ. ರಾಜ್ಯದಲ್ಲಿ ಈ ರೀತಿ ಶಾಸಕರಿಗೆ ಆದರೆ ಇದು ಎಲ್ಲಿಗೆ ಬಂತು? ಯಾವ ರೀತಿ ಬಾಳ್ವೆ ಮಾಡುವುದಕ್ಕೆ ಸಾಧ್ಯವಿದೆ? ಇದರ ಬಗ್ಗೆ ಗಂಭೀರವಾಗಿ ಚಿಂತೆ ಮಾಡಬೇಕು. ಒಬ್ಬರಿಗಿಂತ ಒಬ್ಬರೂ stalwarts ಇದ್ದಾರೆ, ಈ ರಾಜ್ಯದ ಬಗ್ಗೆ ಚಿಂತನೆ ಮಾಡುವವರಿದ್ದಾರೆ. ಇದರ ಬಗ್ಗೆ ಏನು ನಡೆಯುತ್ತದೆನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಜಿಲ್ಲಾ ಮಟ್ಟದಲ್ಲಿ ಎಸ್.ಪಿ.ಗಳು, ಕಮೀಷನರ್‌ಗಳಿರುತ್ತಾರೆ. ಆಯಾ ಜಿಲ್ಲೆಗಳಲ್ಲಿ ಗುಂಡಾಗಿರಿಯನ್ನು ಮಟ್ಟ ಹಾಕಿಕೊಂಡು ಬಂದರೆ, ಇಂಥ ಪ್ರಕರಣಗಳು ಎಲ್ಲೂ ಆಗುವುದಿಲ್ಲ. ಅದಕ್ಕೆ ಡಿ.ಕೆ. ರವಿಯವರ ಪ್ರಕರಣವನ್ನು ಒಂದು ಉದಾಹರಣೆಯಾಗಿಟ್ಟುಕೊಂಡು, ಬಂಡೆ ಪ್ರಕರಣವನ್ನು ಮುಚ್ಚಿ ಹಾಕುತ್ತೇವೆ, ರಶ್ಮಿ ಪ್ರಕರಣವನ್ನು ಮುಚ್ಚಿ ಹಾಕುತ್ತೇವೆಂದರೆ, ಒಬ್ಬೊಬ್ಬ ಅಧಿಕಾರಿಗಳು ಒಂದೊಂದು ಹೇಳಿಕೆಯನ್ನು ಕೊಟ್ಟರು. ನಾನು ರಾತ್ರಿ 7.30

ಗಂಟೆಯಿಂದ ಬೆಳಗಿನವರೆಗೂ ನೋಡಿದೆ. ಈಗ ನಾನು ಶವವನ್ನು ನೋಡಬೇಕೆಂದು ಆಸ್ಪತ್ರೆಗೆ ಹೋಗಿದ್ದೆ, ಅಲ್ಲಿ ಇನ್ನೂ post mortem ನಡೆಯುತ್ತಿತ್ತು, ಒಳಗಡೆ ಹೋಗಬಾರದೆಂದು ಹೊರಗಡೆ ಬಂದೆ. ಅದು ಏನು ಗಬ್‌ಚಿಪ್ ಆಗಿ ತಾವು (ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸಿರುತ್ತಾರೆ) ತಾವೇ ಪೊಲೀಸರೇ ನೋಡುವುದು, ಇದು ಒಂದು ವಿಚಿತ್ರವಾಗಿ ಬಿಡುತ್ತದೆ. ಇದರಲ್ಲಿ ಹೆಚ್ಚು ನೋಡುವ ಅವಶ್ಯಕತೆ ಇಲ್ಲವೆಂದು, ನಾನು ಸದನಕ್ಕೆ ಬಂದೆ. ಅದಕ್ಕೆ ನಾನು ಪೊಲೀಸ್ ಅಧಿಕಾರಿಗಳ ಬಗ್ಗೆ negative ಆಗಿ ಮಾತನಾಡುವುದಿಲ್ಲ. ಹಿಂದೆ ಹುಬ್ಬಳ್ಳಿ-ಧಾರವಾಡದಲ್ಲಿ ಎಂಥ ಪ್ರಕರಣ ನಡೆದರೂ tough ಆಗಿ ಕೆಲಸ ಮಾಡಿದಂಥ ಏನು ಆಗುತ್ತಿರಲಿಲ್ಲ, ಇತ್ತೀಚೆಗೆ ಕೆಲವು ಜನರು ಹೇಳುತ್ತಿದ್ದಾರೆ. ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಬೆಂಗಳೂರಿನವರು ಇಲ್ಲಿಂದ ಅಲ್ಲಿಗೆ ಬರುತ್ತಿದ್ದಾರೆ, ಈ ರೀತಿ ಆಗಬಾರದು. ಈಗ ಡಿ.ಕೆ. ರವಿಯವರ ಪ್ರಕರಣವನ್ನು ಸಿ.ಬಿ.ಐ.ಗೆ ವಹಿಸುತ್ತಿರೋ, ಸರ್ಕಾರ ಏನು ಮಾಡುತ್ತಿರೋ, ಪೊಲೀಸ್ ಇಲಾಖೆಗೆ ವಹಿಸುತ್ತೀರೋ? ಈ ರಿತಿ ಇಡೀ ರಾಜ್ಯದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಬೆಂಗಳೂರನ್ನು ಪಾಯಿಂಟ್ ಮಾಡಿಕೊಂಡು branch office ಮಾಡುವುದಕ್ಕೆ ಹೊರಟ್ಟಿದ್ದಾರೆ. ಇಂಥ ಪ್ರಕರಣವನ್ನು ಮುಚ್ಚಿ ಹಾಕುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ಕುಮಾರಸ್ವಾಮಿಯವರೆ, ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ):- ಮಾನ್ಯ ಅಧ್ಯಕ್ಷರೆ, ಈಗಾಗಲೇ ನಿನ್ನೆ ಸಾಯಂಕಾಲ ನಡೆದಿರುವಂಥ ಈ ಒಂದು ಘಟನೆಯಿಂದ ಬಹುಶಃ ಆಘಾತದಿಂದ ನಾನು ಇನ್ನೂ ಹೊರಗೆ ಬಂದಿಲ್ಲವೆನ್ನುವ ವಿಚಾರವನ್ನು ಮೊದಲು ಹೇಳಬಯಸುತ್ತೇನೆ. ಈ ರಾಜ್ಯದಲ್ಲಿ ಕಳೆದ 8-10 ದಿವಸಗಳಿಂದ ಒಂದು ಕುಟುಂಬದಲ್ಲಿ ಆರು ಜನರು ಆತ್ಮಹತ್ಯೆ ಮಾಡಿಕೊಂಡರು. ಕೋಲಾರದಲ್ಲಿ ನಾಲ್ಕು ಜನರು ಜನ್ಮ ಕೊಟ್ಟ ತಾಯಿಯೇ ಮಕ್ಕಳ ಸಮೇತ ಆತ್ಮಹತ್ಯೆ ಮಾಡಿಕೊಂಡಂಥ ಘಟನೆಗಳು ನಡೆದಿವೆ. ಪ್ರತಿನಿತ್ಯ

ಆತ್ಮಹತ್ಯೆ ಪ್ರಕರಣಗಳು ನಡೆಯುವಂಥದ್ದನ್ನು ನೋಡುತ್ತಿದ್ದೇವೆ. ಆದರೆ ನಿನ್ನೆ ಸಂಜೆ ಆಗಿರುವಂಥದ್ದು ಈ ರಾಜ್ಯದ ಒಬ್ಬ ದಕ್ಷ, ಪ್ರಾಮಾಣಿಕ, ನಿಷ್ಠಾವಂತ ಅಧಿಕಾರಿ ನಿನ್ನೆ ನಿಧನ ಹೊಂದಿರುವ ಘಟನೆ ಬಹುಶಃ ರಾಜ್ಯದ ಜನತೆ ಈ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದಾರೆ. ಆತ್ಮಹತ್ಯೆ ಪ್ರಕರಣಗಳು ನಡೆದಾಗ ನಾವು ಒಂದೆರಡು ನಿಮಿಷಗಳು ಅನುಕಂಪ ಸೂಚಿಸುವ ಮಾನವೀಯತೆ ಇಟ್ಟುಕೊಂಡಿರುವಂಥ ನಮಗೆ ಆ ಒಂದು ಭಾವನೆ ಬರುತ್ತದೆ ಅಷ್ಟೆ. ಆದರೆ ಈ ಪ್ರಕರಣ ಎಲ್ಲೋ ಒಂದು ಕಡೆ ದೊಡ್ಡ ದೊಡ್ಡ ಮಟ್ಟದ ಸಂಶಯಗಳು, ಅನುಮಾನಗಳು ಎಲ್ಲಾ ರೀತಿಯ ಚರ್ಚೆಗಳು ನಡೆಯುತ್ತಿದೆ. ನಾನು ನಿನ್ನೆ ಸಾಯಂಕಾಲ ಚನ್ನಪಟ್ಟಣದ ಬೇವೂರು ಗ್ರಾಮದಲ್ಲಿದ್ದಾಗ 7.00 – 7.30 ಗಂಟೆಗೆ ಈ ಅಧಿಕಾರಿ ಮರಣ ಹೊಂದಿದ ವಿಷಯ ತಿಳಿಯಿತು. ನಿನ್ನೆ ಬೆಳಿಗ್ಗೆ ಸದನದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಮತ್ತು ಹಲವಾರು ಸ್ನೇಹಿತರು ತಂದಂಥ Rule 69ಗೆ convert ಮಾಡಿ ಅವಕಾಶ ಕೊಟ್ಟಿದ್ದೀರಿ. ಇಲ್ಲಿ ನೀರಿನ ವಿಷಯದಲ್ಲಿ ದೊಡ್ಡ ಗಲಾಟೆ ನಡೆಯುತ್ತಿತ್ತು, ಮತ್ತೆ ನಮ್ಮ ಕೋಲಾರದ ಶಾಸಕರೆಲ್ಲಾ ಅವರ ಒಂದು ಆಕ್ರೋಶವನ್ನು ವ್ಯಕ್ತಪಡಿಸಿ ನಡೆದಂಥ ಘಟನೆ ಒಂದು ಕಡೆ ಆಗಿದೆ. ನನಗೆ ವೈಯುಕ್ತಿಕವಾಗಿ ನನ್ನನ್ನು ಆಯ್ಕೆ ಮಾಡಿರುವಂಥ ನನ್ನ ಜನರ ಪರವಾಗಿ ನಿನ್ನೆ 20 ಕಿ.ಮೀ. ಪಾದಯಾತ್ರೆ ಮಾಡಬೇಕಾದಂಥ ಅನಿವಾರ್ಯ ಪರಿಸ್ಥಿತಿ ಬಂತು. ನಾನು ಆ 20 ಕಿ.ಮೀ. ಪಾದಯಾತ್ರೆ ಮಾಡಿ, ಚನ್ನಪಟ್ಟಣದ ಒಂದು ಕಾರ್ಯಕ್ರಮಕ್ಕೆ ಹೋದಾಗ ಈ ಘಟನೆ ನನ್ನ ಗಮನಕ್ಕೆ ಬಂತು. ನಾನು ಅಲ್ಲಿಂದ ನೇರವಾಗಿ ಆ ಫ್ಲಾಟ್‌ಗೆ ಹೋದೆ, ಅಷ್ಟರಲ್ಲಿ ನಮ್ಮ ಹಲವಾರು ಗೌರವಾನ್ವಿತ ಮಂತ್ರಿಗಳು ಭೇಟಿ ಕೊಟ್ಟು ಅಲ್ಲಿಂದ ನಿರ್ಗಮಿಸಿದ್ದರು. ಅಲ್ಲಿಯ ಪರಿಸ್ಥಿತಿಯನ್ನು ನೋಡಿದಾಗ ಒಂದು ರೀತಿ ಕರುಳು ಕಿತ್ತು ಬರುವಂಥ ಪರಿಸ್ಥಿತಿ ಇತ್ತು. ಫ್ಲಾಟ್‌ನ ಹೊರಗಡೆ ಜನರು ತುಂಬಿದ್ದಾರೆ, ಒಳಗಡೆ ನಮ್ಮ ಹಿರಿಯ ಅಧಿಕಾರಿಗಳು ಬಹಳ ಜನ ಬಂದಿದ್ದಾರೆ. ಎಲ್ಲರ ಮುಖದಲ್ಲೂ ಒಂದು ರೀತಿಯ ಗಾಭರಿ ಇದೆ, ಎಲ್ಲರೂ ಆಘಾತಕ್ಕೆ ಒಳಗಾಗಿದ್ದಾರೆ. ನಾನು ಅಲ್ಲಿ ಪ್ರವೇಶ ಮಾಡಿದಾಗ ಹಲವಾರು ಹಿರಿಯ ಅಧಿಕಾರಿಗಳು, ಇವರ

colleagues, ಇವರ ಬಾಲ್ಯ ಜೀವನದಲ್ಲಿ ಜೊತೆಗೆ ಬೆಳೆದು ಬಂದಿರುವವರು, ಹಲವಾರು ಜನರು ಆ ಸ್ಥಳದಲ್ಲಿದ್ದರು. ಅಲ್ಲಿ ಅವರೆಲ್ಲರ ಒಂದೇ ಅಭಿಪ್ರಾಯವೆಂದರೆ, ಈ ವ್ಯಕ್ತಿ ಯಾವ ಕಾರಣಕ್ಕೂ ಜೀವನದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವಂಥ ಮನೋಭಾವನೆಯಿಂದ, weak mind ನಿಂದ ಇರತಕ್ಕಂಥ ವ್ಯಕ್ತಿ ಅಲ್ಲವೆಂದು, ಅವರ ಜೊತೆಯಲ್ಲಿ ಬೆಳೆದು ಬಂದಂಥವರು ಹೇಳುತ್ತಾರೆ. ಆಮೇಲೆ ಆ ವ್ಯಕ್ತಿ ರಾಜ್ಯಾಂಗದ ವ್ಯವಸ್ಥೆಯಲ್ಲಿ ಕೆಲಸಕ್ಕೆ ಸೇರ್ಪಡೆಯಾದ ನಂತರ ಅವರ ಕಾರ್ಯ ವೈಖರಿಗಳು, ಅವರಲ್ಲಿದ್ದಂಥ ದಿಟ್ಟವಾದಂಥ ನಿರ್ಧಾರಗಳನ್ನು ತೆಗೆದುಕೊಳ್ಳುವಂಥದ್ದು, ಇದೆಲ್ಲವನ್ನೂ ನೋಡಿದರೆ ಯಾರಿಗೆ ಆಗಲಿ, ಆ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದರೆ ಯಾರಿಗೂ ನಂಬುವುದಕ್ಕೆ ಸಾಧ್ಯವಿಲ್ಲ. ಇಲ್ಲೇ ಇದು ಒಂದು ರೀತಿಯಲ್ಲಿ ರಾಜ್ಯದ ಜನತೆಯಲ್ಲಿ, ಮಾಧ್ಯಮಗಳಲ್ಲಿ, ಇಲ್ಲಿರುವಂಥ ಹಲವಾರು ಶಾಸಕ ಮಿತ್ರರಲ್ಲಿ ಅನುಮಾನದ ಸಂಶಯದ ಹುತ್ತ ಉದ್ಭವವಾಗಿದೆ. ಈ ಒಂದು ಕುಟುಂಬದ ಹಿನ್ನೆಲೆಯನ್ನು ನೋಡಬೇಕು. ನಾವು ಈ ಸದನದಲ್ಲಿ ಮಾತನಾಡಬೇಕಾದರೆ, ನಮ್ಮ ಅಧಿಕಾರಿಗಳ ಬಗ್ಗೆ ಲಘುವಾಗಿಯೂ ಮಾತನಾಡುತ್ತೇವೆ, ಅಧಿಕಾರಿಗಳೆಲ್ಲರೂ ಭ್ರಷ್ಟರು ಎಂದು ಎಲ್ಲಾ ಮಾತನಾಡುತ್ತೇವೆ. ಆದರೆ ಈ ಒಂದು ಪ್ರಕರಣವನ್ನು ಅತ್ಯಂತ ನೋವಿನಿಂದ ಏನು ಚರ್ಚೆ ಮಾಡಬೇಕಾಗಿದೆ. ಈ ಕುಟುಂಬ ಬಂದಂಥ ಪರಿಸ್ಥಿತಿಯ ಬಗ್ಗೆ ಬೆಳಿಗ್ಗೆ ಮಾನ್ಯ ನಾಗರಾಜಯ್ಯನವರು ಮಾತನಾಡಿರಬೇಕು, ಅವರು ಅವರ ಕ್ಷೇತ್ರದವರಾಗಿದ್ದಾರೆ. ನಾನು ಈ ಕುಟುಂಬದ ಹಿನ್ನೆಲೆಯನ್ನು ಈ ರಾಜ್ಯದ ಜನತೆಗೆ ಈ ಸದನದ ಮುಖಾಂತರ ನನಗೆ ಸಿಕ್ಕಂಥ ಮಾಹಿತಿಯನ್ನು ಸದನದ ಮುಂದಿಡಬೇಕಾಗಿದೆ. ಇವರ ತಂದೆ-ತಾಯಿ ಬಂದಂಥ ಹಿನ್ನೆಲೆ, ಅವರು ಒಂದು ಸಣ್ಣ ಗ್ರಾಮದಲ್ಲಿ, ಆ ಕುಟುಂಬದಲ್ಲಿ ಆದಂಥ ಅನುಭವವನ್ನು ಈ ಸದನದ ಮುಂದಿಡಬೇಕು. ಈ ರವಿ ಓದಬೇಕಾದರೆ ಅವರ ತಂದೆ ಮಗನನ್ನು ಬಿ.ಸಿ.ಎಂ. ಹಾಸ್ಟೆಲ್‌ಗೆ ಸೇರಿಸಬೇಕು.

ಅದಕ್ಕೆ ರೆವಿನ್ಯೂ ಇನ್ಸ್‌ಪೆಕ್ಟರ್‌ರವರ ಹತ್ತಿರ ಒಂದು ಸರ್ಟಿಫಿಕೇಟ್ ಕೇಳಲು ಹೋಗುತ್ತಾರೆ. ಆಗ ಆ ರೆವಿನ್ಯೂ ಇನ್ಸ್‌ಪೆಕ್ಟರ್ ನೀನು ಹೀಗೆಲ್ಲ

ಕೇಳಿದರೆ ಸರ್ಟಿಫಿಕೇಟ್ ಕೊಡುವುದಕ್ಕೆ ಆಗುತ್ತದೆಯೇ ಎಂದು ಹೇಳಿ ಅವರನ್ನು ಕರೆದುಕೊಂಡು ಹೋಗಿ ಒಂದು ಮಿಲಿಟರಿ ಹೋಟೆಲಿನಲ್ಲಿ ಚೆನ್ನಾಗಿ ಊಟ ಮಾಡುತ್ತಾನೆ, ಆ ರೆವಿನ್ಯೂ ಇನ್ಸ್‌ಪೆಕ್ಟರ್ ತನ್ನ ಜೊತೆ ಇನ್ನೂ ಇಬ್ಬರನ್ನು ಊಟಕ್ಕೆ ಕರೆದುಕೊಂಡು ಹೋಗಿರುತ್ತಾನೆ. ಇದೆಲ್ಲ ಆದಮೇಲೆಯೇ ನಿನಗೆ ಸರ್ಟಿಫಿಕೇಟ್ ಕೊಡುವುದು ಎಂದು ಹೇಳಿ, ಹೋಟೆಲ್‌ನಲ್ಲಿ ಚೆನ್ನಾಗಿ ಊಟ ಮಾಡಿ, ದುಡ್ಡನ್ನು ನೀನು ಕೊಡು ಎಂದು ಅವರ ತಂದೆಗೆ ಹೇಳುತ್ತಾನೆ. ಆಗ ಅವರ ಹತ್ತಿರ ದುಡ್ಡು ಇರಲಿಲ್ಲ. ಅವರು ಆ ಹೋಟೆಲ್ ಮಾಲೀಕರ ಕಾಲು ಹಿಡಿದುಕೊಳ್ಳುತ್ತಾರೆ. ನನ್ನ ಮಗನನ್ನು ವಸತಿ ಶಾಲೆಗೆ ಸೇರಿಸಲು ಒಂದು ಸರ್ಟಿಫಿಕೇಟ್ ತೆಗೆದು ಕೊಳ್ಳಬೇಕಾಗಿತ್ತು, ಅದಕ್ಕೆಂದು ಬಂದಾಗ ಇವರು ಹಿಂಸೆ ಕೊಟ್ಟು ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದು ಊಟ ಮಾಡಿಸಿಬಿಟ್ಟರು. ಈಗ ದುಡ್ಡು ಕೊಡಲು ನನ್ನ ಹತ್ತಿರ ದುಡ್ಡಿಲ್ಲ. ಏನಾದರೂ ಮಾಡಿ ನಾಳೆ ನಾಡಿದ್ದರಲ್ಲಿ ದುಡ್ಡನ್ನು ತಂದುಕೊಡುತ್ತೇನೆ, ಈಗ ನನ್ನ ಮರ್ಯಾದೆ ಉಳಿಸಿ ಎಂದು ಹೋಟೆಲ್ ಮಾಲೀಕನ ಕಾಲು ಹಿಡಿದುಕೊಳ್ಳುತ್ತಾರೆ. ಇಂಥ ಕುಟುಂಬದಿಂದ ಬಂದಂಥ ಆ ಅಧಿಕಾರಿ, ಜೀವನದಲ್ಲಿ ನಾನು ಬಡತನದಿಂದ ಮುಂದೆ ಬಂದಿದ್ದೇನೆ, ನಾನು ಈ ಸಮಾಜಕ್ಕೆ ಏನಾದರೂ ಕೊಡುಗೆ ಕೊಡಬೇಕು ಎನ್ನುವ ಭಾವನೆಯನ್ನು ಹೃದಯದಲ್ಲಿಟ್ಟುಕೊಂಡು ಈ ಹುದ್ದೆಗೆ ಸೇರುತ್ತಾರೆ. ಮೊದಲು ಕೆ.ಎ.ಎಸ್. ಪರೀಕ್ಷೆ ಬರೆದು ಎಕ್ಸೈಸ್ ಇಲಾಖೆಯಲ್ಲಿ ಎಕ್ಸೈಸ್ ಇನ್ಸ್‌ಪೆಕ್ಟರ್ ಆಗುತ್ತಾರೆ. ನಂತರ ಕಷ್ಟಪಟ್ಟು ಓದಿ ಐ.ಎ.ಎಸ್. ಪಾಸ್ ಮಾಡಿಕೊಂಡು ಐ.ಎ.ಎಸ್. ಅಧಿಕಾರಿಯಾಗಿ ತಮ್ಮ probationary period ಅವಧಿಯಲ್ಲಿ ಗುಲ್ಬರ್ಗ, ಕೊಪ್ಪಳ ಹೀಗೆ ಹಲವಾರು ಕಡೆ ಕೆಲಸ ಮಾಡಿ ನಂತರ ಕೋಲಾರಕ್ಕೆ ಬಂದರು. ಕೋಲಾರದಲ್ಲಿ ಅವರು ಮಾಡಿದಂಥ ಕೆಲಸದ ಬಗ್ಗೆ ಇವತ್ತಿಗೂ ಅಲ್ಲಿಯ ಜನ ನೆನಪಿಸಿಕೊಳ್ಳುತ್ತಾರೆ. ಅವರ ಸಾವಿನ ಪ್ರಕರಣವನ್ನು ನೋಡಿ ಅಲ್ಲಿಯ ಜನ ಮರುಗುತ್ತಿದ್ದಾರೆ. ಕೋಲಾರದಲ್ಲಿ ಎಷ್ಟೋ ಕುಟುಂಬಗಳಲ್ಲಿ ನಿದ್ದೆ ಮಾಡಿಲ್ಲ. ಒಬ್ಬ ಅಧಿಕಾರಿ ಒಬ್ಬ ದಲಿತರ ಮನೆಗೆ ಹೋಗಿ ದಲಿತ ಕುಟುಂಬದ ಹೆಣ್ಣುಮಗಳು ಕೊಟ್ಟಂಥ ಊಟವನ್ನು ಮಾಡಿ, ತುಳಿತಕ್ಕೆ

ಒಳಗಾಗಿರುವಂಥ ವರ್ಗದ ಜನತೆಯಲ್ಲಿ ಒಂದು ಆಶಾಕಿರಣವನ್ನು ಮೂಡಿಸಿದಂಥ ಒಬ್ಬ ನಿಷ್ಠಾವಂತ ಅಧಿಕಾರಿ ಅವರು. ಒಂದು ಬಾರಿ ಎಂಭತ್ತು ವರ್ಷದ ಒಬ್ಬ ಮುದುಕಿ ಸಾರ್ವಜನಿಕವಾಗಿ ಅವರ ಕಾಲು ಹಿಡಿದುಕೊಳ್ಳುತ್ತಾಳೆ. ಏಕೆಂದರೆ, ಸುಮಾರು 30–40 ವರ್ಷಗಳಿಂದ ಅಧಿಕಾರಿಗಳು ಆಕೆಗೆ ಒಂದು ಖಾತೆ ಮಾಡಿಕೊಟ್ಟಿರುವುದಿಲ್ಲ. ಅದರ ನಂತರ ಅವರು ಒಂದು ಪೋಡಿ ಕಾರ್ಯಕ್ರಮವನ್ನು ಅಲ್ಲಿ ಪ್ರಾರಂಭ ಮಾಡಿದರು. ಅವರೇ ಖುದ್ದು ಸ್ಥಳ ಪರಿಶೀಲನೆ ಮಾಡಿಕೊಂಡು ಹೊರಟುಬಿಟ್ಟರು. ಹಲವಾರು ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಿಕೊಟ್ಟರು. ಉತ್ತಮವಾಗಿ ಕೆಲಸ ಮಾಡುವಂಥ ಅಂಥ ಅಧಿಕಾರಿಯನ್ನು ಸರ್ಕಾರ ವರ್ಗಾವಣೆ ಮಾಡಿತು. ಒಬ್ಬ ಅಧಿಕಾರಿಯನ್ನು ಸ್ಥಳ ನಿಯುಕ್ತಿಗೊಳಿಸುವುದು ಮುಖ್ಯಮಂತ್ರಿಗಳ prerogative rights. ನಾನು ಅದನ್ನು ತಪ್ಪು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಆ ಅಧಿಕಾರಿಯನ್ನು ವರ್ಗಾವಣೆ ಮಾಡಿದ ದಿವಸ ಕೆಲವರು ಜಿಲ್ಲಾ ಕಚೇರಿಗೆ ಹೋಗಿ ಸ್ವೀಟ್ ಹಂಚುತ್ತಾರೆ. ಇದು ಈ ಸಮಾಜ. ಏಕೆ ನಾನು ಈ ಆಘಾತದಿಂದ ಇನ್ನೂ ಹೊರಗೆ ಬಂದಿಲ್ಲ ಎನ್ನುವುದಕ್ಕೆ ಇದನ್ನು ಹೇಳುತ್ತಿದ್ದೇನೆ. ಅವರ ವರ್ಗಾವಣೆಯನ್ನು ವಿರೋಧಿಸಿ ಕೋಲಾರದ ಜನ ಬಂದ್ ಮಾಡಿದರು. ಆದರೆ ಅವರು ಇಲ್ಲಿ ಇಲ್ಲವೆಂದರೆ ಇನ್ನೊಂದು ಕಡೆ ಕೆಲಸ ಮಾಡುತ್ತೇನೆ ಎಂದು ಹೋದರು. ನಾನು ಹುಟ್ಟಿದಂಥ ಜಿಲ್ಲೆ, ನನಗೆ ಜನ್ಮ ಕೊಟ್ಟಿರುವಂಥ ಜಿಲ್ಲೆಯಾದ ತುಮಕೂರಿನಲ್ಲಾದರೂ ಕೆಲಸ ಮಾಡಲಿಕ್ಕೆ ಅವಕಾಶ ಕೊಡಿ ಎಂದು ಅವರು ಮುಖ್ಯಮಂತ್ರಿಗಳನ್ನು ಕೇಳಿದ್ದಾರೆ, ಇದು ನನಗಿರುವಂಥ ಮಾಹಿತಿ. ನಾನು ಕೆಲಸದಲ್ಲಿ ಇರುವಾಗ, ನನಗೆ ಜನ್ಮ ಕೊಟ್ಟಿರುವಂಥ ಜಿಲ್ಲೆಯಲ್ಲಿರುವ ಸಮಸ್ಯೆಗಳನ್ನು ಪರಿಹರಿಸಲು ಅವಕಾಶ ಕೊಡಿ, ನಾನು ಪ್ರಾಮಾಣಿಕವಾಗಿ ಆ ಜಿಲ್ಲೆಗೆ ಋಣ ತೀರಿಸಬೇಕು ಎಂದು ಕೇಳಿಕೊಂಡಿದ್ದಾರೆ. ಆದರೆ ಅವರನ್ನು ಇಲ್ಲಿಗೆ ಹಾಕಿದರು. ನಾನು ಬಜೆಟ್ ಮೇಲೆ ಮಾತನಾಡುವಾಗ ಕೆಲವು ವಿಷಯಗಳನ್ನು ಹೇಳುತ್ತೇನೆ, ಅದನ್ನೆಲ್ಲ ಈಗ ಮಾತನಾಡಲು ಹೋಗುವುದಿಲ್ಲ, ಕಳೆದ ಒಂದು ತಿಂಗಳಿಂದ ಅವರು ಕೆಲಸ ಮಾಡುತ್ತಿದ್ದಂಥ ಇಲಾಖೆಯಲ್ಲಿ ದಿಟ್ಟವಾದ ಕೆಲಸ ಮಾಡಲು ಪ್ರಾರಂಭ

ಮಾಡಿದುದನ್ನು ಕಳೆದ 15-20 ದಿವಸಗಳಿಂದ ನಾವು ಮಾಧ್ಯಮಗಳಲ್ಲಿ ಗಮನಿಸುತ್ತಿದ್ದೇವು. ತೆರಿಗೆ ಪಾವತಿಯಲ್ಲಿ ಸರ್ಕಾರಕ್ಕೆ ಮೋಸ ಮಾಡುತ್ತಿದ್ದ ಹಲವಾರು ದೊಡ್ಡ ದೊಡ್ಡ ಬಿಲ್ಡರ್‌ಗಳು, ದೊಡ್ಡದೊಡ್ಡ ಜ್ಯುವೆಲ್ಲರಿ ಶಾಪ್‌ಗಳನ್ನು ನಡೆಸುವಂಥವರ ಸಂಸ್ಥೆಗಳ ಮೇಲೆ ದಾಳಿ ಮಾಡಿ, ಸರ್ಕಾರದ ಖಜಾನೆಗೆ ಬರದೇ ಸೋರಿಕೆಯಾಗುತ್ತಿದ್ದಂಥ ಹಣವನ್ನು ಸರ್ಕಾರದ ಖಜಾನೆಗೆ ತುಂಬಿಸುವಂಥ ಕೆಲಸವನ್ನು ಮಾಡಿದರು. ಇಂಥ ಒಬ್ಬ ವ್ಯಕ್ತಿ ಆತ್ಮಹತ್ಯೆಗೆ ಶರಣಾಗುವಂಥ ಘಟನೆ ನಿನ್ನೆ ನಡೆದಿದೆ ಎಂದರೆ ಸಹಜವಾಗಿಯೇ ಎಲ್ಲರಲ್ಲಿಯೂ ಈ ಸಾವಿಗೆ ಬೇರೆ ರೀತಿಯ ಕಾರಣಗಳು ಇವೆ ಎಂದು ಅನಿಸುತ್ತದೆ. ಇವತ್ತು ಈ ಬಗ್ಗೆ ಮಾತನಾಡಿರುವಂಥ ಎಲ್ಲರೂ ಇದನ್ನು ಸಿ.ಬಿ.ಐ.ಗೆ ಕೊಡಿ ಎಂದು ಹೇಳಿದ್ದಾರೆ. ಅವರು ನಡೆದು ಬಂದಂಥ ದಾರಿಯನ್ನು ನೋಡಿದಾಗ, ಅವರು ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಕೆಟ್ಟ ನಿರ್ಧಾರ ಮಾಡುವ ನಡವಳಿಕೆಯ ಹಿನ್ನೆಲೆಯಲ್ಲಿ ಬಂದಂಥ ವ್ಯಕ್ತಿಯಲ್ಲ. ದೃಢವಾದಂಥ ಕಠಿಣವಾದಂಥ ರೀತಿಯಲ್ಲಿ ಕೆಲಸವನ್ನು ಮಾಡುವಂಥ ಮನೋಭಾವನೆಯನ್ನು ಬೆಳೆಸಿಕೊಂಡು ಬಂದಂಥ ವ್ಯಕ್ತಿ ಅವರು. ನಾನು ಬಂದಿರುವಂಥ ಬಡತನದ ಹಿನ್ನೆಲೆಯಲ್ಲಿ, ನಾನು ನನ್ನ ಕೈಲಾದ ಮಟ್ಟಿಗೆ ಈ ರಾಜ್ಯಕ್ಕೆ ಉತ್ತಮವಾದಂಥ ಕೆಲಸ ಮಾಡಬೇಕು ಎನ್ನುವ ಒಂದು ಮನೋಭಾವವನ್ನು ಉದ್ಯೋಗಕ್ಕೆ ಸೇರಿಕೊಳ್ಳುವ ಸಂದರ್ಭದಲ್ಲಿ ಮಾಡಿಯೇ ಅಲ್ಲಿಗೆ ಪ್ರವೇಶ ಮಾಡಿದ್ದಾರೆ. ನಿನ್ನೆಯ ದಿವಸ ಇಂಥ ರೀತಿಯಲ್ಲಿ ಅವರ ಜೀವನದ ಅಂತ್ಯವಾಗುತ್ತದೆ ಎಂದರೆ ನಾವು ಅದನ್ನು ನಂಬಲು ಸಾಧ್ಯವಿಲ್ಲ. ಇಲ್ಲಿರುವಂಥ ಪ್ರಶ್ನೆ ಎಂದರೆ, ಯಾವುದಾದರೊಂದು ಕುಟುಂಬದಲ್ಲಿ ಯಾರಾದರೂ ಆತ್ಮಹತ್ಯೆ ಮಾಡಿಕೊಳ್ಳುವುದು ಕುಟುಂಬದಲ್ಲಿನ ಸಮಸ್ಯೆಗಳಿಂದಾಗಿ ಉದ್ವೇಗಕ್ಕೆ ಒಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇಲ್ಲವೆಂದರೆ ಆ ರೀತಿ ಆತ್ಮಹತ್ಯೆ ಮಾಡಿಕೊಳ್ಳುವಂಥ ಸನ್ನಿವೇಶಗಳು ಬರುವುದಿಲ್ಲ. ನನಗಿರುವಂಥ ಮಾಹಿತಿ ಪ್ರಕಾರ, ಅವರಿಗೆ ಅಂಥ ಯಾವುದೇ ಕುಟುಂಬದ ಸಮಸ್ಯೆ ಇರಲಿಲ್ಲ. ನಿನ್ನೆ ಅವರ ತಂದೆತಾಯಿಗಳು ಮತ್ತು ಅವರನ್ನು ಮದುವೆಯಾದ ಹೆಣ್ಣುಮಗಳು ದುಃಖದ ಮಡುವಿನಲ್ಲಿದ್ದುದನ್ನು

ನೋಡಿದರೆ ಎಂಥವರಿಗೂ ಕರುಳು ಕಿತ್ತುಬರುತ್ತದೆ. ಈ ವಿಷಯದಲ್ಲಿ ಸರ್ಕಾರದವರು ಯಾವುದೇ ರೀತಿಯ ಪ್ರತಿಷ್ಠೆಗೆ ಒಳಗಾಗಬೇಡಿ. ನನಗಿರುವಂಥ ಮಾಹಿತಿ ಎಂದರೆ, ಕಳೆದ 15–20 ದಿವಸಗಳಿಂದ ಆ ಅಧಿಕಾರಿ ಕಟ್ಟುನಿಟ್ಟಾದ ನಿರ್ಧಾರಗಳನ್ನು ಮಾಡಿ ದಾಳಿ ನಡೆಸಿದರು, ಕೆಲವು ಪ್ರಭಾವಿ ವ್ಯಕ್ತಿಗಳು ಅವರ ಮೇಲೆ ಒತ್ತಾಯ ಹಾಕಿದ್ದಾರೆ. ಕೆಲವರು ಸರ್ಕಾರಕ್ಕೆ ತೆರಿಗೆಯನ್ನು ಕಟ್ಟದೇ ಮರೆಮಾಚಿದ್ದರು, ಮರೆಮಾಚಿರುವುದನ್ನು ಇವರು ಕಂಡುಹಿಡಿದು ಅವರಿಗೆ ದಂಡ ವಿಧಿಸಿ ಇಷ್ಟು ಹಣ ಕಟ್ಟಲೇಬೇಕು ಎನ್ನುವ ನೋಟಿಸ್ ಕೊಟ್ಟಾಗ ಅದನ್ನು ಕಡಿಮೆ ಮಾಡಬೇಕು ಎಂದು ಅವರ ಮೇಲೆ ಒತ್ತಾಯ ಹಾಕಿರುವುದೂ ಉಂಟು. ಈಗ ನಾನು ಅದರ ಬಗ್ಗೆ ಚರ್ಚೆ ಮಾಡಿದರೆ ತಪ್ಪಾಗುತ್ತದೆ, ಈಗ ನಾನು ಅದನ್ನೆಲ್ಲ ಹೇಳುವುದಿಲ್ಲ. ಕಳೆದ ಒಂದು ತಿಂಗಳಿಂದ ನಡೆದಿರುವ ಅವರ ಕಾರ್ಯಚಟುವಟಿಕೆಗಳನ್ನು ನೋಡಿದರೆ, ನಿನ್ನೆ ಅವರ ಸಹಪಾಠಿಗಳು ಹೇಳುತ್ತಾರೆ, ನಾವು ಇವತ್ತು ದೇಶವನ್ನು ರಕ್ಷಣೆ ಮಾಡಬೇಕೆಂದು ಅಭಿಮಾನದಿಂದ, ದೇಶಭಕ್ತಿಯಿಂದ ಕೆಲಸ ಮಾಡಬೇಕು ಎಂದು ಕೆಲಸ ಮಾಡಬೇಕೆಂದು ಉದ್ಯೋಗಕ್ಕೆ ಸೇರುವ ನಮ್ಮಂಥ ಯುವಕರಿಗೆ ಈ ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಕೆಲಸ ಮಾಡಲು ಸಾಧ್ಯವೇ? ಏತಕ್ಕೆ ನಾವು ಆ ರೀತಿ ಕೆಲಸ ಮಾಡಬೇಕು? ಎಂದು ಆಕ್ರೋಶದಿಂದ ನಿನ್ನೆ ನಾನು ಅಲ್ಲಿಗೆ ಹೋದಾಗ ಅವರ ಸಹಪಾಠಿಗಳು ಹೇಳುತ್ತಾರೆ. ಈ ಬಗ್ಗೆ ಅವರ ಸಹಪಾಠಿಗಳು, ಅಧಿಕಾರಿವರ್ಗದವರು ದುಃಖದಿಂದ ಮಾತನಾಡುತ್ತಾರೆ. ಅಧಿಕಾರಿಗಳು ಕೆಲಸ ಮಾಡಲು ಸಾಧ್ಯವಾಗದೇ ಇರುವಂಥ ಪರಿಸ್ಥಿತಿ ಇದರಿಂದ ನಿರ್ಮಾಣವಾಗುತ್ತದೆ. ಕೆಲವೇ ಕೆಲವು ಮಂದಿ ನಿಷ್ಠಾವಂತ ಅಧಿಕಾರಿಗಳಿದ್ದಾರೆ. ಎಲ್ಲರೂ ಹಾಗಿದ್ದಾರೆ ಎಂದು ನಾನು ಹೇಳುವುದಿಲ್ಲ. ಅವರನ್ನೂ ಇವತ್ತು ನೀವು ನಿಷ್ಠೆಯಿಂದ ಕೆಲಸ ಮಾಡುವಂಥ ಪರಿಸ್ಥಿತಿಯಿಂದ ದೂರ ತಳ್ಳುತ್ತೀರಿ. ಏಕೆಂದರೆ, ನನಗೂ ಇದರ ಅನುಭವವಾಗಿದೆ. ನಾನು ಸಹ ಆಕಸ್ಮಿಕವಾಗಿ 20 ತಿಂಗಳು ಮುಖ್ಯಮಂತ್ರಿಯಾಗಿ ಕೆಲಸ ಮಾಡಿದಂಥವನು. ಆಗ ಅಂದಿನ ಚಿಕ್ಕಮಗಳೂರಿನ ಜಿಲ್ಲಾಧಿಕಾರಿ ಮತ್ತು ಎಸ್.ಪಿ. ಬಿಗಿಯಾದಂಥ ರೀತಿಯಲ್ಲಿ ಕೆಲಸ ಮಾಡುತ್ತಿದ್ದರು. ಈ

ಪ್ರಕರಣವನ್ನು ಹೇಳಿಕೊಳ್ಳಲು ನನಗೇನೂ ಸಂಕೋಚವಿಲ್ಲ. ಅವರಿಬ್ಬರನ್ನು ತೆಗೆಯಲೇ ಬೇಕು ಎಂದು ಎಲ್ಲರೂ ಸೇರಿ ನನ್ನ ಮೇಲೆ ಒತ್ತಡ ಹಾಕಿದರು. ಕೊನೆಗೆ ನಾನು ಆ ಇಬ್ಬರು ಅಧಿಕಾರಿಗಳನ್ನು ನನ್ನ ಛೇಂಬರಿಗೆ ಕರೆದೆ. ಇವತ್ತು ನಾನು ನನ್ನದೇ ಆದಂಥ ಒಂದು ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ, ನೀವು ಪ್ರಾಮಾಣಿಕ ಅಧಿಕಾರಿಗಳು ಎನ್ನುವುದು ನನಗೆ ಗೊತ್ತಿದ್ದೂ ನಿಮ್ಮನ್ನು ಅಲ್ಲಿಂದ disturb ಮಾಡಬೇಕಾಗಿದೆ, ದಯವಿಟ್ಟು ನನ್ನನ್ನು ಕ್ಷಮಿಸಿ ಎಂದು ಮುಖ್ಯಮಂತ್ರಿಯಾಗಿ ನಾನು ಅವರನ್ನು ಕೇಳಿಕೊಂಡಿದ್ದೇನೆ. ಈ ಸಿಸ್ಟಂಗಳು ಯಾವ ರೀತಿ ನಡೆಯುತ್ತದೆ ಎಂದು ಎಲ್ಲರಿಗೂ ಗೊತ್ತಿದೆ. ಆದರೆ ಇವತ್ತು ಈ ಪ್ರಕರಣದಲ್ಲಿ ಇಂಥ ಒಂದು ವಾತಾವರಣ ಏನು ನಿರ್ಮಾಣವಾಗಿದೆ, ಈ ಪ್ರಕರಣವನ್ನು CBI ಗೆ ವಹಿಸಬೇಕೆಂದು ನಾನು ನಿನ್ನೆ ರಾತ್ರಿಯೂ ಮಾಧ್ಯಮದ ಸ್ನೇಹಿತರ ಮುಂದೆ ಹೇಳಿದ್ದೇನೆ. ಏತಕ್ಕೆಂದರೆ, ಈ ರಾಜ್ಯದಲ್ಲಿ ಹಲವಾರು ಪ್ರಕರಣಗಳು ನಡೆದುಕೊಂಡು ಬಂದಿವೆ. ಏನೇನಾಗಿದೆ ಎಂದು ಗೊತ್ತಿದೆ. ನಾನು ಶ್ರೀಮತಿ ರಶ್ಮಿಯವರ case, ಬಂಡೆರವರ case ಬಗ್ಗೆ ಹೇಳಲಿಕ್ಕೆ ಹೋಗುವುದಿಲ್ಲ. ಇದು ಅತ್ಯಂತ ಸೂಕ್ಷ್ಮವಾದ ಘಟನೆ. ಇದಾಗಬಾರದಾಗಿತ್ತು. ಆದ್ದರಿಂದ, ಈ ವಿಷಯದಲ್ಲಿ ಇವತ್ತು ರಾಜ್ಯದ ಜನತೆಯಲ್ಲಿರುವ ಸಂಶಯಗಳು ಹೋಗಬೇಕಾದರೆ ಆ official gallery ಯಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕಂಥವರು ಪ್ರಾಮಾಣಿಕವಾಗಿ ಕೆಲಸ ಮಾಡಲಿಕ್ಕೆ ಅವರಿಗೆ ಆತ್ಮಸ್ಥೈರ್ಯವನ್ನು ತುಂಬಬೇಕಾದರೆ ಈ case ಅನ್ನು CBI ಗೆ ವಹಿಸಬೇಕಾಗುತ್ತದೆ. ಇದರಲ್ಲೇನೂ ರಾಜಕೀಯ ಇಲ್ಲ. ಅಥವಾ ನಿಮ್ಮ ಸರ್ಕಾರಕ್ಕೆ ಮುಜುಗರ ಆಗತಕ್ಕಂಥ ಪ್ರಕರಣ ಏನೂ ಇಲ್ಲ. ಆದ್ದರಿಂದ, ಈ ಒಂದು ವಿಷಯವನ್ನು CBI ಗೆ ವಹಿಸಲಿಕ್ಕೆ ಯಾವ ಪ್ರತಿಷ್ಠೆಗೂ ಒಳಗಾಗಬೇಡಿ. ಇವತ್ತು ಈ ರಾಜ್ಯದ ಜನತೆಯಲ್ಲಿ ಮೂಡಿರತಕ್ಕಂಥ ಆ ಸಂಶಯ ಹೊರಗೆ ಬರಬೇಕಾದರೆ, ದೂರವಾಗಬೇಕಾದರೆ ಆ ಕುಟುಂಬದ ಹೆಣ್ಣುಮಕ್ಕಳು, ಆ ಅಮಾಯಕ ತಂದೆತಾಯಿಯಂದಿರು, ಆ ಜನ್ಮ ಕೊಟ್ಟಂಥ ತಾಯಿ ನಿನ್ನೆ ಅಳುತ್ತಿದ್ದಂಥ ಪ್ರಕರಣ, ಅವರ ಅಕ್ಕನ ಮಗನಾದ ಒಬ್ಬ ಮೂಗ

ಹುಡುಗ ನಾನು ಹೋದರೆ ಅವನು ಕೈಸನ್ನೆ ಮಾಡಿ ಹೇಳುತ್ತಾನೆ, ಒಬ್ಬ ಮಗಳು ಹೇಳುತ್ತಾಳೆ, 'ಅಣ್ಣಾ, ನೀನೂ KAS ಬರಿ, ನಾನು ಪಾಠ ಹೇಳಿಕೊಡುತ್ತೇನೆಂದು' ನಮ್ಮ ಅಣ್ಣ ಹೇಳುತ್ತಿದ್ದ. ನನ್ನ ಅಣ್ಣನಿಗೆ ಇವತ್ತು ಆಗಿರತಕ್ಕಂಥ ಪರಿಸ್ಥಿತಿ ನೋಡಿದಾಗ ನನ್ನ ಅಣ್ಣ IAS officer ಆಗುವುದೂ ಬೇಡ, ಮುಂದುವರೆಯುವುದೂ ಬೇಡ, ಅವನ ಪ್ರಾಣ ತಂದುಕೊಟ್ಟುಬಿಡಿ ನಮಗೆ ಸಾಕು ಎಂದು ಆ ಹೆಣ್ಣುಮಗಳು ನನ್ನ ಎರಡೂ ಕೈ ಹಿಡಿದುಕೊಂಡು ಗೋಳಾಡುತ್ತಾಳೆ. ಆದ್ದರಿಂದ, ಇವತ್ತು ಈ ಸಂಶಯಗಳು ಸರಿಯಾಗಬೇಕಾದರೆ, ನಿಮ್ಮ ಸರ್ಕಾರಕ್ಕೇನಾದರೂ ಗೌರವ ಉಳಿಯಬೇಕಾದರೆ, ಆ ಹೆಣ್ಣು ಮಗಳ ಕಣ್ಣೀರು ಏನಿದೆ, ಆ ಹೆಣ್ಣು ಮಗಳಿಗೆ ನೀವು ವಿಶ್ವಾಸ ಮೂಡಿಸಬೇಕೆನ್ನುವುದಿದ್ದರೆ ಇವತ್ತು ಈ case ಅನ್ನು CBI ಗೆ ವಹಿಸಲೇಬೇಕೆನ್ನುವಂಥದ್ದು ಬಹುಶಃ ಇವತ್ತು ಎಲ್ಲರೂ, ನಮ್ಮ ಆ ಭಾಗದ (ಆಡಳಿತ ಪಕ್ಷ) ಸದಸ್ಯರೂ ಇದಕ್ಕೆ ಒಪ್ಪಿಗೆ ಕೊಡುತ್ತೀರಿ ಎನ್ನುವುದು ನನ್ನ ಅಭಿಪ್ರಾಯ. ಆದ್ದರಿಂದ, ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಈ ಪ್ರಕರಣದ ಜೊತೆ ಯಾವುದೇ ರೀತಿಯ ಜನಗಳ ಭಾವನೆ ಏನು ಮೂಡಿದೆ ಅದನ್ನು ಹೋಗಲಾಡಿಸಬೇಕೆಂದರೆ, ಆ ಸಂಶಯಗಳು ಹೋಗಬೇಕೆಂದರೆ CBI ಗೆ ವಹಿಸಬೇಕೆನ್ನುವುದನ್ನು ನಾನು ವಿನಯಪೂರ್ವಕವಾಗಿ ಹೇಳಿ ಸರ್ಕಾರಕ್ಕೆ ಆಗ್ರಹ ಪಡಿಸುತ್ತೇನೆ, ನಿಮಗೆ ನನ್ನ ವಂದನೆಗಳು.

ಅಧ್ಯಕ್ಷರು:- ಕಾರಜೋಳರವರೆ, ಮಾತನಾಡಿ. ಈ ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮದು ಕೊನೆಯ ಮಾತು.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):- ಮಾನ್ಯ ಅಧ್ಯಕ್ಷರೆ, ಇಡೀ ದೇಶದಲ್ಲಿ ಕರ್ನಾಟಕ ಅತ್ಯುತ್ತಮ ಆಡಳಿತಕ್ಕೆ ಹೆಸರಾದಂಥ ರಾಜ್ಯ. ಬೇರೆ ಬೇರೆ ರಾಜ್ಯಗಳಿಂದ IAS ಅಧಿಕಾರಿಗಳು, IPS ಅಧಿಕಾರಿಗಳು ಸೇವೆ ಸಲ್ಲಿಸಲಿಕ್ಕೆ ಕೇಳಿಕೊಂಡು ಕರ್ನಾಟಕಕ್ಕೆ ಬರುತ್ತಾರೆ. ಇಂಥ ಒಂದು ಅತ್ಯುತ್ತಮವಾದಂಥ ರಾಜ್ಯ ಕರ್ನಾಟಕ. ಅಷ್ಟೇ ಅಲ್ಲ, ನಾನು ಕನ್ನಡ ಸಂಸ್ಕೃತಿ ಇಲಾಖೆಯ ಮಂತ್ರಿಯಾಗಿದ್ದಂಥ ಸಮಯದಲ್ಲಿ All India Service ಗೆ ಕನ್ನಡಿಗರು ಯಾರ್‍ಯಾರು selection ಆಗಿದ್ದಾರೆ, ಅವರನ್ನು Conference Hall

ಗೆ ಕರೆದು ಒಂದು ಲಕ್ಷ ರೂಪಾಯಿಗಳ ಪ್ರೋತ್ಸಾಹಧನವನ್ನು ಅವರಿಗೆ ನೀಡಿ, ಸನ್ಮಾನಿಸತಕ್ಕಂಥ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದೆವು. ಒಂದು ಕಡೆ ಅಂಥ ಸತ್‌ಸಂಪ್ರದಾಯವನ್ನು ಹಾಕಿಕೊಂಡಂಥ ರಾಜ್ಯ ಇದು. ನಿನ್ನೆಯ ದಿವಸ IAS ಅಧಿಕಾರಿಯಾದ ಶ್ರೀ ಡಿ.ಕೆ. ರವಿಯವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಬೆಂಗಳೂರು ನಗರ ಪೋಲೀಸ್ ಆಯುಕ್ತರು certificate ಕೊಟ್ಟೇಬಿಟ್ಟರು. Certificate ಕೊಟ್ಟಮೇಲೆ ಅವರ ಕೈಕೆಳಗೆ ಇರತಕ್ಕಂಥ ಅಧಿಕಾರಿಗಳು ಇದನ್ನು ತನಿಖೆ ಮಾಡಲಿಕ್ಕೆ ಸಾಧ್ಯವೇ? ಇದರ ಬಗ್ಗೆ ನಾವು ಆಲೋಚನೆ ಮಾಡಬೇಕು. ಇವತ್ತು 6 ಕೋಟಿ ಕನ್ನಡಿಗರಲ್ಲಿ ಸಂಶಯ ವ್ಯಕ್ತವಾಗಿದೆ. IAS ಅಧಿಕಾರಿ ರವಿಯವರ ಸಾವು ಸಹಜ ಅಲ್ಲ, ಇದೊಂದು ಕೊಲೆ ಎನ್ನತಕ್ಕಂಥ ಸಂಶಯ ಮೂಡಿದೆ. ನಾನು ಈ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ಇಡೀ ಸದನವೇ ಈ ಬಗ್ಗೆ ಮಾತನಾಡಿದೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ನಾನು ಇಷ್ಟೇ ಸಲಹೆ ಮಾಡಲಿಕ್ಕೆ ಬಯಸುತ್ತೇನೆ. ಸರ್ಕಾರ ಒಂದು ವೇಳೆ ತಾನು ನಿಷ್ಪಕ್ಷಪಾತಿ ಎನ್ನತಕ್ಕಂಥದ್ದನ್ನು 6 ಕೋಟಿ ಕನ್ನಡಿಗರಿಗೆ ಸಾಬೀತು ಮಾಡಿ ತೋರಿಸಬೇಕೆಂದರೆ ಇದನ್ನು ತಕ್ಷಣ CBI ಗೆ ವಹಿಸಿಕೊಡಬೇಕು. 11–00 ಗಂಟೆಗೆ ಸದನ ಪ್ರಾರಂಭ ಆಗುವುದಕ್ಕೆ ಮುಂಚೆಯೇ ಗೃಹ ಮಂತ್ರಿಗಳಾಗಲಿ ಅಥವಾ ಮುಖ್ಯಮಂತ್ರಿಗಳಾಗಲಿ ಈ case ಅನ್ನು CBI ಗೆ ವಹಿಸಿದ್ದೇವೆ ಎನ್ನುವ ಸಂದೇಶ ನೀಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ನೀಡಿಲ್ಲ, ದುರ್ದೈವದ ಸಂಗತಿ. ಅದಕ್ಕೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಕೂಡಲೇ ಈ ಕ್ಷಣದಲ್ಲಿ ಏನೂ ವಿವರಣೆ ನೀಡತಕ್ಕಂಥ ಅವಶ್ಯಕತೆ ಇಲ್ಲ. ಇದನ್ನು ನಿಷ್ಪಕ್ಷಪಾತವಾಗಿ ತನಿಖೆ ಮಾಡಿಸುವುದರಲ್ಲಿ ಸರ್ಕಾರ ಸಿದ್ಧವಿದೆ ಎಂದು CBI ಗೆ ವಹಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು:– ಲೋಬೋರವರೆ ಎರಡೇ ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು. ಏಕೆಂದರೆ, ನಾನು ಇದೇ ಕೊನೆಯದೆಂದು ಹೇಳಿದ್ದೇನೆ ಮತ್ತು ಈಗ ನೀವು ಚೀಟಿ ಕಳುಹಿಸುತ್ತಿದ್ದೀರಿ. ಮುಂಚೆಯೇ ಕಳುಹಿಸಬೇಕು.

ಶ್ರೀ ಜೆ.ಆರ್. ಲೋಬೋ (ಮಂಗಳೂರು ನಗರ) (ದಕ್ಷಿಣ):- ಮಾನ್ಯ ಅಧ್ಯಕ್ಷರೆ, IAS ಅಧಿಕಾರಿಯಾಗಿರುವಂಥ ಶ್ರೀ ಡಿ.ಕೆ. ರವಿಯವರ ಅಸಹಜ ಮರಣದ ವಾರ್ತೆಯು ನಮಗೆಲ್ಲ ದಿಗಿಲು ಬಡಿದಂತೆ ಮಾಡಿದೆ. ಈ ವಿಚಾರವನ್ನು ತಿಳಿದಾಗ ಆಡಳಿತ ಯಂತ್ರದಲ್ಲಿ ಕೆಲಸ ನಿರ್ವಹಿಸುವಂಥ ಅಧಿಕಾರಿಗಳಿಗೆ ನಾವು, ಎಲ್ಲ ರಾಜಕಾರಣಿಗಳು ಎಲ್ಲರೂ ಸೇರಿ ಯಾವ ರೀತಿಯ ರಕ್ಷಣೆ ಕೊಡಲಿಕ್ಕೆ ಸಾಧ್ಯತೆ ಇದೆ ಎನ್ನುವ ಬಗ್ಗೆ ಬಹಳ ಆಳವಾಗಿ ಚಿಂತನೆ ಮಾಡಬೇಕಾಗಿದೆ. ಶ್ರೀ ಡಿ.ಕೆ. ರವಿರವರ ಕಾರ್ಯವೈಖರಿ ಬಗ್ಗೆ ಯಾರಿಗೂ ಸಂಶಯವಿಲ್ಲ. ಬಹಳ ಉನ್ನತ, ಪ್ರಾಮಾಣಿಕ ಅಧಿಕಾರಿ ಅವರಾಗಿದ್ದರು. ಯಾವುದೇ ಹುದ್ದೆಯಲ್ಲಿ ಯಾವುದೇ ಸಮಯದಲ್ಲಿ ಕೆಲಸ ನಿರ್ವಹಿಸುವಾಗ ಬಡವರ ಬಗ್ಗೆ ಎಲ್ಲರ ಬಗ್ಗೆ ಕಾಳಜಿ ಇಟ್ಟುಕೊಂಡು ಉತ್ತಮವಾಗಿ ಕೆಲಸ ನಿರ್ವಹಿಸಿದ್ದ ಅಧಿಕಾರಿ. ಇವರ ಅಸಹಜ ಮರಣದ ಸಮಯದಲ್ಲಿ ಇನ್ನೊಂದು ವಿಚಾರವನ್ನು ನಾವು ಬಹಳ ಆಳವಾಗಿ ಚಿಂತನೆ ಮಾಡಬೇಕು. ಪ್ರಾಮಾಣಿಕವಾಗಿ ಸರ್ಕಾರದ ಸೇವೆ ಮಾಡತಕ್ಕಂಥ ಅಧಿಕಾರಿಗಳಿಗೆ ಸಮಾಜವು ಈ ರೀತಿಯ ಒಂದು ವ್ಯವಸ್ಥೆಯನ್ನು ಕಲ್ಪಿಸಿದಾಗ ಸರ್ಕಾರ, ನಾವು ಯಾವ ರೀತಿಯಲ್ಲಿ ರಕ್ಷಣೆ ಕೊಡಲಿಕ್ಕೆ ಸಾಧ್ಯತೆ ಇದೆ? ಇವತ್ತಿಗೆ ಬಹುಶಃ ನನಗನ್ನಿಸುತ್ತದೆ, ಇಡೀ ಸರ್ಕಾರದ ಯಂತ್ರವಾಗಿರುವಂಥ ಸರ್ಕಾರವನ್ನು ನಡೆಸುವಂಥ, ನಮ್ಮ ಧೋರಣೆ ಮತ್ತು ಆದೇಶಗಳನ್ನು ಕಾರ್ಯಗತ ಮಾಡುವಂಥ ಆಡಳಿತ ಯಂತ್ರದ ಅಧಿಕಾರಿ, ಸಿಬ್ಬಂದಿ ವರ್ಗದವರು ಬಹುಶಃ ಅವರಿಗೆ ಅವರ ಆತ್ಮಸ್ಥೈರ್ಯ ಕುಂದುವಂಥ ವ್ಯವಸ್ಥೆ ಆಗುವಂಥ ಸ್ಥಿತಿಯಲ್ಲಿ ಬಂದಿದೆ. ನಾವು ಅವರಿಗೆ ಆತ್ಮಸ್ಥೈರ್ಯವನ್ನು ತುಂಬಬೇಕಾಗಿದೆ. ಪ್ರಾಮಾಣಿಕವಾಗಿ ಕೆಲಸ ಮಾಡಿದಾಗ ನಾವು ಅವರ ಜೊತೆಯಲ್ಲಿ ಇದ್ದೇವೆನ್ನುವ ಸಂದೇಶವನ್ನು ಒಂದು ವೇಳೆ ನಾವು ಅವರಿಗೆ ಕೊಡಲಿಕ್ಕೆ ವಿಫಲರಾದರೆ ನಮ್ಮ ಆಡಳಿತ ಯಂತ್ರವೇ ಕುಸಿಯುವಂಥ ಸಾಧ್ಯತೆ ಇದೆ. ಆದ್ದರಿಂದ ಶ್ರೀ ಡಿ.ಕೆ. ರವಿಯವರ ಅಸಹಜ ಮರಣದ ಸಮಯದಲ್ಲಿ ಅವರ ಕುಟುಂಬಕ್ಕೆ ನಾವು ಸಾಂತ್ವಾನ ಹೇಳುವ ಸಮಯದಲ್ಲಿ ಅವರ ಪ್ರಾಮಾಣಿಕ ಕೆಲಸವನ್ನು ನಾವು ಕೊಂಡಾಡುವಂಥ ಸಮಯದಲ್ಲಿ

ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುವಂಥ ಸರ್ಕಾರಿ ಅಧಿಕಾರಿಗಳಿಗೆ ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸಲಿಕ್ಕೆ ನಾವು ಆ ಒಂದು ವಾತಾವರಣವನ್ನು ಕಲ್ಪಿಸಿಕೊಡುವಂಥ ಅವಕಾಶ ಇವತ್ತು ಇದೆ. ಅವರಿಗೆ ನಾವು ರಕ್ಷಣೆ ಕೊಡಬೇಕಾಗಿದೆ. ಅಧಿಕಾರಿಗಳ ಜೊತೆಯಲ್ಲಿ ನಾವು ರಕ್ಷಣೆ ಕೊಡಲಿಕ್ಕೆ ವಿಫಲರಾಗಿಬಿಟ್ಟರೆ ನಾವು ಯಾವುದೇ ರೀತಿಯ ಆಡಳಿತ ಮಾಡಲಿಕ್ಕೆ ಅಸಾಧ್ಯವಾಗಬಹುದು. ನಾವು ಎಷ್ಟು ತೀರ್ಮಾನಗಳನ್ನು ತೆಗೆದುಕೊಳ್ಳಲಿಕ್ಕೆ, policy ಗಳನ್ನು ಮಾಡಲಿಕ್ಕೆ ಜವಾಬ್ದಾರರೋ, ಅಷ್ಟೇ ಮಟ್ಟಕ್ಕೆ ಅವರೂ ಕೂಡ ನಮ್ಮ ತೀರ್ಮಾನಗಳನ್ನು ಕಾರ್ಯಗತ ಮಾಡುವಂಥ ಜವಾಬ್ದಾರಿ ಹೊಂದಿಕೊಂಡಿರುವಂಥ ಅವರಿಗೆ ಅದೇ ರೀತಿಯ ಒಂದು ಪ್ರಾಮಾಣಿಕ ಸಹಕಾರವನ್ನು ನೀಡಬೇಕಾಗಿದೆ. ಉತ್ತರ ಪ್ರದೇಶದಲ್ಲಿ ಕೆಲವು ವರ್ಷಗಳ ಹಿಂದೆ ನಮ್ಮ ಕೋಲಾರದ Indian Oil Officer ಒಬ್ಬರು ಇದೇ ರೀತಿಯಲ್ಲಿ ಅಸಹಜ ಮರಣಕ್ಕೆ ಸೇರಿದಾಗ ಇಡೀ ಆ ಸಂಸ್ಥೆ ಅವರ ಬೆನ್ನೆಲುಬಾಗಿ ನಿಂತಿತ್ತು, ಸರ್ಕಾರ ನಿಂತಿತ್ತು. ಹಾಗೆಯೇ ಇವತ್ತು ನಾವು ಶ್ರೀ ಡಿ.ಕೆ. ರವಿಯವರ ಕುಟುಂಬದ ಜೊತೆಯಲ್ಲಿ ನಾವು ನಿಂತಾಗ, ನಿಲ್ಲುವುದು ಮಾತ್ರವಲ್ಲ ಪ್ರಾಮಾಣಿಕ ಒಳ್ಳೆಯ ಕೆಲಸ ಮಾಡುವಂಥ ಎಲ್ಲ ಅಧಿಕಾರಿಗಳ ಜೊತೆಯಲ್ಲಿ ನಾವು ಇರಬೇಕಾಗಿದೆ. ನಾವು ಇಲ್ಲಿ ಎಷ್ಟೇ criticize ಮಾಡಿದರೂ ಕೂಡ ಅವರ ಸೇವೆಯನ್ನು ನಾವು ಮರೆಯಲಿಕ್ಕೆ ಆಗುವುದಿಲ್ಲ ಎಂಬ ಮಾತನ್ನು ಹೇಳಿ, ಶ್ರೀ ಡಿ.ಕೆ. ರವಿ ರವರ ಕುಟುಂಬಕ್ಕೆ, ಅವರ ಆತ್ಮಕ್ಕೆ ಭಗವಂತನು ಶಾಂತಿ ದಯಪಾಲಿಸಲಿ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಅಧ್ಯಕ್ಷರು:– ಉತ್ತರ ಹೇಳಿ.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು):– ಸನ್ಮಾನ್ಯ ಸಭಾಧ್ಯಕ್ಷರೆ,

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಈ ಸದನದಲ್ಲಿಯೇ ಇದ್ದಾರೆ. ಬಹಳ sensitive ಆದ case. ಇದರ ಬಗ್ಗೆ ಇಡೀ ಸದನದಲ್ಲಿ ಎಲ್ಲರೂ

ಮಾತನಾಡಿದ್ದಾರೆ. ಇದು ಬಹಳ ಗಂಭೀರವಾದ ವಿಚಾರ, ಇದಕ್ಕೆ ಸ್ಪಷ್ಟವಾದಂಥ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳೇ ಕೊಡಬೇಕು. ಅವರ ಇಲಾಖೆಗೆ ಸೇರಿದಂಥ ಒಬ್ಬ IAS ಅಧಿಕಾರಿ ಮೃತಪಟ್ಟಿರುವಂಥದ್ದು. ನಿಗೂಢತೆ ಇದೆ. ಇದು ಬಹಳ sensitive ಆಗಿದೆ. ಇಡೀ ರಾಜ್ಯದ ಜನತೆ ಗಮನಿಸುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಏನು ಹೇಳುತ್ತಿದ್ದಾರೆಂದರೆ ರಾಜ್ಯದ ಇಡೀ ಜನತೆ ಗಮನಿಸುತ್ತಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಗೃಹಸಚಿವರಿಗಿಂತ ಮುಖ್ಯಮಂತ್ರಿಯವರು ಉತ್ತರ ಕೊಡಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು):- ಮೊದಲು ಗೃಹ ಸಚಿವರು ಉತ್ತರ ಕೊಡಲಿ. ಆ ಮೇಲೆ ನೋಡೋಣ.

ಶ್ರೀ ಜಗದೀಶ್ ಶೆಟ್ಟರ್:- ಆಗಲ್ಲ. ತಾವು ಹೇಳಿ ಸನ್ಮಾನ್ಯ ಸಭಾಧ್ಯಕ್ಷರೆ.

(ಗೊಂದಲ)

ಶ್ರೀ ಸಿ.ಟಿ. ರವಿ:- ಇದು ಸಾಮಾನ್ಯ ವಿಷಯವಲ್ಲ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್:- ಸನ್ಮಾನ್ಯ ಸಭಾಧ್ಯಕ್ಷರೆ, ಇದು ಯಾವುದೋ ಒಂದು law and order problem ವಿಚಾರ ಅಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:- ಮುಖ್ಯಮಂತ್ರಿಯವರಿಗೇ ಈ ವಿಚಾರದಲ್ಲಿ ಗಂಭೀರ ಭಾವನೆ ಇಲ್ಲ ಎನ್ನುವುದು ಇದರಿಂದ ತೋರುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ತಾವು ಹೇಳಿದರೆ ಅದಕ್ಕೊಂದು ಮಹತ್ವ ಬರುತ್ತದೆ. ತಾವು ತಕ್ಷಣವೇ ಆ ವಿಚಾರಕ್ಕೆ response ಮಾಡಬೇಕು. ಪ್ರಕರಣ ಬಹಳ ಗಂಭೀರವಿದೆ ಎಂದು ತಿಳಿದುಕೊಳ್ಳಬಹುದು.

(ಗೊಂದಲ)

ಶ್ರೀ ಸಿ.ಟಿ. ರವಿ:– ಮುಖ್ಯಮಂತ್ರಿಗಳು ಉತ್ತರ ಕೊಡುವುದಿಲ್ಲ ಎನ್ನುವುದೇ ಅವರಿಗೆ ಇನ್ನೂ ಆ ಭಾವನೆ ಇಲ್ಲ ಅಂತ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಇಲ್ಲಿ ಪ್ರಶ್ನೆ law and order ದ್ದು ಅಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:– ಇದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಇಲ್ಲಿ law and order ಪ್ರಶ್ನೆಯಾಗಿದ್ದರೆ ಗೃಹ ಮಂತ್ರಿಗಳು ಉತ್ತರ ಕೊಡಲಿ. ಇಲ್ಲಿ ಪ್ರಶ್ನೆ ಬಂದಿರುವುದು ಸರ್ಕಾರದ ಒಬ್ಬ ಹಿರಿಯ ಅಧಿಕಾರಿಯದು. ಇದು ಸರ್ಕಾರದ ಒಬ್ಬ ಹಿರಿಯ ಅಧಿಕಾರಿಯ ಸಾವಿನ ಘಟನೆ. ನಾವು ಇಲ್ಲಿಯವರೆಗೆ ಹಲವಾರು ಘಟನೆಗಳಲ್ಲಿ ಗೃಹ ಸಚಿವರಿಗೆ ಅವಕಾಶ ಕೊಟ್ಟಿದ್ದೇವೆ. ಇದು ನೇರವಾಗಿ ಸರ್ಕಾರ ಉತ್ತರ ಕೊಡುವಂಥದ್ದು, ಮುಖ್ಯಮಂತ್ರಿಗಳ ಇಲಾಖೆಗೆ ಸಂಬಂಧಪಟ್ಟಂಥ ಒಬ್ಬ ಅಧಿಕಾರಿಯ ಸಾವು ಇದು. ಮುಖ್ಯಮಂತ್ರಿಗಳು ನಿರ್ವಹಣೆ ಮಾಡತಕ್ಕಂಥ ಇಲಾಖೆಗೆ ಸಂಬಂಧಪಟ್ಟಂಥ ಅಧಿಕಾರಿಯ ಸಾವಿನ ವಿಷಯದಲ್ಲಿ ಗೃಹ ಸಚಿವರಲ್ಲ ಉತ್ತರ ಕೊಡಬೇಕಾಗಿರುವುದು, ಈ ಸರ್ಕಾರಕ್ಕೆ ಜವಾಬ್ದಾರಿ ಇದ್ದರೆ ಇದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆನ್ನುವಂಥದ್ದು ನಮ್ಮೆಲ್ಲರ ಭಾವನೆ. ಇದು ಹುಡುಗಾಟಿಕೆಯ

ವಿಷಯವಲ್ಲ. ಅತ್ಯಂತ ಗಂಭೀರವಾದ ವಿಚಾರ. ನಾನು ಕೆಲವು ವಿಚಾರಗಳನ್ನು ಹೇಳಲಿಲ್ಲ. ನಾನು ಅಲ್ಲಿಗೆ ಹೋದರೆ ಕೆಲವು ಅಧಿಕಾರಿಗಳು ನನಗೆ ಹೇಳುತ್ತಾರೆ. ನನ್ನ ಮೇಲೆ ಬಂದಿರುವ ಒತ್ತಡದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆನ್ನುವ ಭಾವನೆ ಇದ್ದರೂ ಸಹಕಾರ ಇಲ್ಲದಿದ್ದಾಗ ನಾನು ಏತಕ್ಕೆ ಬದುಕಿರಬೇಕು ಎನ್ನುವಂಥ ವಿಚಾರವನ್ನು ಅವರು ಅವರ ಸ್ನೇಹಿತರ ಜೊತೆಗೆ ಚರ್ಚೆ ಮಾಡಿರತಕ್ಕಂಥ ವಿಷಯಗಳನ್ನು ನಿನ್ನೆ ಅಧಿಕಾರಿಗಳು ನನಗೆ ಹೇಳುತ್ತಾರೆ. ಅದಕೋಸ್ಕರವಾಗಿಯೇ ಇದು ಅತ್ಯಂತ ಗಂಭೀರವಾದ ವಿಚಾರ ಎನ್ನತಕ್ಕಂಥದ್ದು. ಈ ವಿಷಯದಲ್ಲಿ ಗೃಹ ಸಚಿವರು ಉತ್ತರ ಕೊಡುವ ಅವಶ್ಯಕತೆಯಿಲ್ಲ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಇದು ಗಂಭೀರವಾದಂಥ ವಿಚಾರ. ಇದರ ಬಗ್ಗೆ ಬಹಳ ಗಂಭೀರವಾಗಿ ಚರ್ಚೆಯಾಗಿದೆ. ಇದು DPAR ಗೆ ಸಂಬಂಧಪಟ್ಟಂಥ ವಿಚಾರ, ಕಾನೂನು ಸುವ್ಯವಸ್ಥೆಗೆ ಸಂಬಂಧಪಟ್ಟಂಥ ವಿಚಾರ ಅಲ್ಲ ಎನ್ನತಕ್ಕಂಥದ್ದು ಬರುವುದಿಲ್ಲ. ಹಾಗದರೆ investigation ಮಾಡುವವರು ಯಾರು? Police ನವರು ಅಲ್ಲವೆ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಯಾವ police ನವರಿಂದ ಮಾಡಿಸುತ್ತೀರಿ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್:- ಇದು investigation ಪ್ರಶ್ನೆ ಅಲ್ಲ ಸಾರ್. ಸರ್ಕಾರದ ನಿಲುವಿನ ಪ್ರಶ್ನೆ, ಸರ್ಕಾರದ policy ಯ ಪ್ರಶ್ನೆ ಇದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಸರ್ಕಾರದ ಪರವಾಗಿ ಉತ್ತರ ಕೊಡಬೇಕು. You are the head of the Government.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನೀವು ಹೇಳುವ ರೀತಿ ನೋಡಿದರೆ, ಇದು DPAR ಗೆ ಸಂಬಂಧಪಟ್ಟಿದ್ದು Home Department ಗೆ ಸಂಬಂಧಪಟ್ಟಿದ್ದಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಗೃಹ ಇಲಾಖೆಯಿಂದ ತೀರ್ಮಾನಕ್ಕೆ ಬಂದು ಬಿಟ್ಟಿದ್ದೀರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನಿಮ್ಮ police ನವರು ಈಗಾಗಲೇ ಹೇಳಿ ಬಿಟ್ಟಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನಮಗೂ ಜವಾಬ್ದಾರಿ ಇದೆ. ನಾನು ಅದಕೋಸ್ಕರವೇ ಇವರು ಮಾತನಾಡುವಾಗ ನಾನು ಬಂದು ಇಲ್ಲಿ ಕುಳಿತು ಕೇಳುತ್ತಿದ್ದೇನೆ. ನಮಗೂ ಜವಾಬ್ದಾರಿ ಇರುವುದರಿಂದಲೇ ನಾನು ಇಲ್ಲಿ ಬಂದು ಕುಳಿತಿರುವುದು, ಅವರು ಉತ್ತರ ಕೊಡಲಿ, ಅಗತ್ಯ ಬಿದ್ದರೆ ನಾನು ಮಾತನಾಡುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇದನ್ನು ಯಾವ ರೀತಿಯಾಗಿ ಲಘುವಾಗಿ ಕಾಣುತ್ತೀರಿ ಎನ್ನುವುದಕ್ಕೆ ಇದೊಂದು ಉದಾಹರಣೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಇದಕ್ಕಿಂತ ಅಗತ್ಯ ಇನ್ನೇನು ಬೇಕು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- Police Commissioner ಈಗಾಗಲೇ suicide ಎಂದು ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರೆ, ಈಗ ಸ್ವಲ್ಪ ಕೇಳಿ. ತಾವು ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದವರು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇದು ನನಗೆ ಅರ್ಥವಾಗುತ್ತಿಲ್ಲ. ನಿಜವಾಗಿಯೂ Home Minister ಬಿಟ್ಟು ಮುಖ್ಯಮಂತ್ರಿಗಳು voluntary ಆಗಿ, ನಾವು ಹೇಳುವುದು ಬೇಕಾಗಿಲ್ಲ, ನಾನು ಇದನ್ನು insist ಮಾಡುವುದು ಬೇಡ, ಮುಖ್ಯಮಂತ್ರಿಗಳೇ ಇದರ ಜವಾಬ್ದಾರಿ ತೆಗೆದುಕೊಂಡು ಹೇಳಬೇಕಾಗಿತ್ತು.

(ಗೊಂದಲ)

ಅಧ್ಯಕ್ಷರು:- ನಾನು ಒಪ್ಪುತ್ತೇನೆ. ಈಗ ಈ ವಿಷಯ ಗೃಹ ಮಂತ್ರಿಗೆ ಸಂಬಂಧಪಟ್ಟಿದ್ದಲ್ಲವೇ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಈ ವಿಷಯದಲ್ಲಿ ಸರ್ಕಾರ ಪ್ರತಿಷ್ಠೆಯನ್ನಾಗಿ ಮಾಡಿಕೊಳ್ಳಬಾರದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಸ್ವಯಂಪ್ರೇರಿತರಾಗಿ ಅವರೇ ಹೇಳಬೇಕಾಗಿತ್ತು. In the interest of the state. ಒಬ್ಬ IAS ಅಧಿಕಾರಿ ನಿಗೂಢವಾಗಿ ಸಾವನಪ್ಪಿದ್ದಾನೆ. ಅವರೇ ಸ್ವಯಂಪ್ರೇರಿತವಾಗಿ ಹೇಳಬೇಕಾಗಿತ್ತು.

(ಗೊಂದಲ)

ಶ್ರೀ ಸಿ.ಟಿ. ರವಿ:– ಹೀಗೆ ಮಾತನಾಡಿ ಜನಗಳಿಗೆ ನಾವು ಏನು message ಕೊಡುತ್ತೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಅವರೇ ಜವಾಬ್ದಾರಿ ತೆಗೆದುಕೊಂಡು ಇದನ್ನು ಹೇಳಬೇಕಾಗಿತ್ತು. ಗೃಹ ಮಂತ್ರಿಗಳು ಬೇಡವೆಂದಲ್ಲ. ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟಂತೆ ಉತ್ತರ ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಹಕ್ಕಿದೆ. ಇದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ನಾನು ನಿನ್ನೆ ಸಂಜೆಯಿಂದ ಗಮನಿಸುತ್ತಿದ್ದೇನೆ. ಕಳೆದ 15 ದಿನಗಳಿಂದ commercial tax ನಲ್ಲಿ graph ಏನು ಬಿದ್ದಿದೆ, ಪ್ರಾಮಾಣಿಕವಾಗಿ ಇಂದು ಹಣ ಸಂಗ್ರಹಣೆ ಮಾಡುವುದಕ್ಕೆ ನಿಷ್ಠೆಯಿಂದ ಕೆಲಸ ಮಾಡಿದಂಥ ಒಬ್ಬ ಅಧಿಕಾರಿಯ ಸಾವು ಆದರೂ ತಕ್ಷಣ, ಈ ಸರ್ಕಾರಕ್ಕೆ ಏನಾದರೂ ಜವಾಬ್ದಾರಿ ಇದ್ದರೆ, ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಬೇಕಾಗಿತ್ತು.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಹೋಗಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಗೃಹ ಸಚಿವರು ಹೋಗಿದ್ದಾರೆ. ಅವರ ಇಲಾಖೆಗೆ ನಿಷ್ಠೆಯಿಂದ ಕೆಲಸ ಮಾಡಿದಂಥ ಒಬ್ಬ ಅಧಿಕಾರಿಯ ಸಾವು.

(ಗೊಂದಲ)

ಅಧ್ಯಕ್ಷರು:– ರೀ ಕುಮಾರಸ್ವಾಮಿ ಇಲ್ಲಿ ಕೇಳಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಈಗ ಮುಖ್ಯಮಂತ್ರಿಗಳು ಹೇಳಿದರು. ಗೃಹ ಸಚಿವರು ಉತ್ತರ ಕೊಡುತ್ತಾರೆ ಆಮೇಲೆ ಬೇಕಾದರೆ ನಾನು ಉತ್ತರ ಕೊಡುತ್ತೇನೆಂದರೆ ಇದಕ್ಕೆ ಅರ್ಥ ಇದೆಯೆ? ಇದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗಿರುವುದು ಅವರ ಜವಾಬ್ದಾರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಇದರಲ್ಲಿ ರಾಜಕೀಯ ಮಾಡತಕ್ಕಂಥ ಅಗತ್ಯ ಇಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಅದಕ್ಕೆ ಹೇಳಿದ್ದು, ರಾಜಕೀಯ ಏನಿಲ್ಲ ಇದರೊಳಗೆ.

(ಗೊಂದಲ)

SRI SIDDARAMAIAH:- Is he not a responsible man?

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:- ಇದರಲ್ಲಿ ರಾಜಕೀಯ ಇಲ್ಲ.

(ಗೊಂದಲ)

SRI SIDDARAMAIAH:- Is he not a responsible man? It is a collective responsibility. He is capable of replying.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಸುಮ್ಮನೆ ಏನೋ ಎಲ್ಲದಕ್ಕೂ ರಾಜಕಾರಣ ನೀವು ಮಾಡಿದರೆ there is no end to this.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- ರಾಜಕಾರಣ ಮಾಡುವುದಲ್ಲ ಸಾರ್.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನಾನು ಕೂಡ ನಿಮ್ಮ ಎಲ್ಲರ ಮಾತುಗಳನ್ನು ಕೇಳಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ರಾಜಕೀಯ ಮಾಡಿದ್ದೆ ನೀವು ಇಲ್ಲಿ, ನಾವು ರಾಜಕೀಯ ಮಾಡಿಲ್ಲ. ನಾವು ರಾಜಕೀಯ ಮಾಡುತ್ತಿದ್ದೇವೆಯೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಇನ್ನೇನು ಮತ್ತೆ ಇದು ರಾಜಕಾರಣ ಅಲ್ಲವೆ? ಇದನ್ನೇ ರಾಜಕಾರಣ ಎಂದು ಕರೆಯುವುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಸರ್ಕಾರದಲ್ಲಿ ಕೆಲಸ ಮಾಡುವಂಥ ಒಬ್ಬ ವ್ಯಕ್ತಿ ಸತ್ತರೆ ಅದಕ್ಕೆ ನೇರವಾಗಿ ನೀವು ಉತ್ತರ ಕೊಡಬೇಕಾಗಿತ್ತು. Home minister ಬೇಡ ಯಾರೂ ಬೇಡ, ನಾನೇ ಉತ್ತರ ಕೊಡುತ್ತೇನೆಂದು ತಾವು ಉತ್ತರ ಕೊಡಬೇಕಾಗಿತ್ತು.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಜಿಲ್ಲಾಧಿಕಾರಿಗಳನ್ನು transfer ಮಾಡಿಸಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ sweet ಹಂಚಿಸಿದಿರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನೀವು ಹೋಗಿ ನೋಡಬೇಕೆಂದು ಈಗ ನೀವು ಹೇಳಲಿಲ್ಲವೆ, ಇದನ್ನೇ ರಾಜಕಾರಣ ಎಂದು ಹೇಳುವುದು. ನಾನು ಹೋಗಿಲ್ಲವೆ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನಾವಲ್ಲ ರಾಜಕೀಯ ಮಾಡಿರುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಸುಮ್ಮನೆ ಏನು ರಾಜಕಾರಣ ಮಾಡುತ್ತೀರಿ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ರಾಜಕಾರಣ ಮಾಡುವುದು, ಇದೆಲ್ಲಾ ಬೆರಸುವುದು.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಇಲ್ಲಿ ರಾಜಕೀಯ ಮಾಡಿಕೊಂಡಿರುವುದು ನೀವುಗಳು. ವರ್ಗಾವಣೆ ಮಾಡಿ sweet ಹಂಚಿಸುತ್ತೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಸುಮ್ಮನೆ ಕುಳಿತುಕೊಳ್ಳಿ. ಏನೇನು ಹೇಳುವುದು, ರಾಜಕಾರಣ ಮಾಡಬೇಕಾದರೆ ಹೊರಗಡೆ ಹೋಗಿ ಮಾಡೋಣ. ಹೊರಗಡೆ ಹೋಗಿ ರಾಜಕಾರಣ ಮಾಡಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನಿಷ್ಠಾವಂಥ ಅಧಿಕಾರಿಯನ್ನು ವರ್ಗಾವಣೆ ಮಾಡಿ ಸಿಹಿ ಹಂಚಿಸಿದಂಥ ಸರಕಾರ ಇದು.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಅಲ್ಲಿ ಬನ್ನಿ ರಾಜಕಾರಣ ಮಾಡೋಣ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ರಾಜಕೀಯ ನಾವೇನು ಮಾಡಿದ್ದೇವೆ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:- ಸರ್ಕಾರದ ಒಬ್ಬ ನಿಷ್ಠಾವಂತ IAS ಅಧಿಕಾರಿ ಸತ್ತಿರುವುದು. ಇದರಲ್ಲಿ ಯಾರಿಗೂ ರಾಜಕೀಯ ಮಾಡುವ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- IAS ಅಧಿಕಾರಿಯೊಬ್ಬರು ನಿಗೂಢವಾಗಿ ಸತ್ತಿದ್ದಾರೆ, ಅದರ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ಆದರೆ, ಇದನ್ನು ಸರ್ಕಾರ ಪ್ರತಿಷ್ಠೆಯನ್ನಾಗಿ ಮಾಡುತ್ತದೆ ಎಂದರೆ, ನಾವು ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಇಷ್ಟು ಗಂಭೀರವಾದಂಥ ವಿಚಾರ,

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ಈಗಾಗಲೇ ಅವರು ಸಾಕಷ್ಟು ಮಾತನಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಅದನ್ನು ಆಮೇಲೆ ನೋಡೋಣ. ಬಜೆಟ್ ಮೇಲೆ ಮಾತನಾಡುವಾಗ ಅದನ್ನು ಮಾತನಾಡಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ವಿರೋಧ ಪಕ್ಷದ ನಾಯಕರು ಈಗಾಗಲೇ ಅವರು ಸಾಕಷ್ಟು ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನಾವು ಒತ್ತಾಯ ಮಾಡುತ್ತೇವೆ, ಇದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ಅವರು ಇಂಥದ್ದನ್ನು ಪ್ರತಿಷ್ಠೆಯನ್ನಾಗಿ ಮಾಡಿಕೊಳ್ಳಬಾರದು.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಸಚಿವರೆ, ಅವರು ಉತ್ತರ ಕೊಡುತ್ತಾರೆ ತಾವು ಕುಳಿತುಕೊಳ್ಳಿ ಸಾರ್.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಿಜವಾಗಿಯೂ ಅವರೇ ಎದ್ದು ನಿಂತು voluntary ಆಗಿ ನಾನೇ ಈ ಬಗ್ಗೆ ಉತ್ತರ ಕೊಡುತ್ತೇನೆಂದು ಹೇಳಬೇಕಾಗಿತ್ತು. ಇದು ಬಹಳ ಗಂಭೀರವಾದಂಥ ವಿಚಾರ. ಇಡೀ ರಾಜ್ಯದ ಜನರು ನೋಡುತ್ತಿದ್ದಾರೆ. ನಾನೇ ಉತ್ತರ ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗಿತ್ತು. ಏಕೆ ಇದನ್ನು ಪ್ರತಿಷ್ಠೆಯನ್ನಾಗಿ ತೆಗೆದುಕೊಳ್ಳುತ್ತಾರೊ ಗೊತ್ತಿಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ನಮಗೇಕೆ ಪ್ರತಿಷ್ಠೆ. ಪ್ರತಿಯೊಂದಕ್ಕೂ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕಾಗುತ್ತದೆಯೆ?

(ಗೊಂದಲ)

ಅಧ್ಯಕ್ಷರು:– ಈ ವಿಚಾರ ಗೃಹ ಮಂತ್ರಿಗೆ ಸಂಬಂಧಪಟ್ಟಿದ್ದು. ಅವರು ಉತ್ತರ ಕೊಡುತ್ತೇವೆಂದಾಗ ನಾವು ಬೇಡ ಎಂದು ಹೇಳುವುದಕ್ಕಾಗುತ್ತದೆಯೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಅವರು ಏಕೋ ಇದನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಅವರೇ voluntary ಆಗಿ ಎದ್ದು ಉತ್ತರ ಕೊಡಬೇಕಾಗಿತ್ತು.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ವಿಶೇಷ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ, ಎಲ್ಲಾ ಸಂದರ್ಭದಲ್ಲಿ ಅವರು ಉತ್ತರ ಕೊಡುವುದಕ್ಕೆ ಆಗುತ್ತದೆಯೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇದೇನಿದು ಸುಮ್ಮನೆ ಅವರು ಹೇಳುತ್ತಾರೆಂದರೆ ಹೇಗೆ?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನಾವು ಸಚಿವ ಸಂಪುಟದ ಸಚಿವರಾಗಿದ್ದು ನಮಗೂ responsibility ಇದೆ. ನಾನು Home Minister ಇದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಖಂಡಿತವಾಗಿಯೂ responsibility ಇದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಯಾವುದೇ ಸಮಸ್ಯೆ ಬರಲಿ ಯಾವ ರೀತಿ ಆಗಿದೆ ಎಲ್ಲವೂ ಗೊತ್ತಿದೆ ಬಿಡಿ. ನೀವು ಏನು ಮಾಡಿದಿರಿ ಎಂಬುದು ಎಲ್ಲಾ ಗೊತ್ತಿದೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನಿಮಗೆ ಉತ್ತರ ಬೇಕಿಲ್ಲವೆಂದು ಕಾಣುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಕಾನೂನು ಸುವ್ಯವಸ್ಥೆಯ ಸಮಸ್ಯೆ ಬಂದಾಗ ನೀವು ಉತ್ತರ ಕೊಡುವುದಕ್ಕೆ ನಾವು ಬೇಡ ಎಂದು ಹೇಳಿಲ್ಲ.

(ಗೊಂದಲ)

ಅಧ್ಯಕ್ಷರು:– ವಿರೋಧ ಪಕ್ಷದ ನಾಯಕರೆ ಇಂಥವರೆ ಉತ್ತರ ಕೊಡಬೇಕೆಂದರೆ ಹೇಗೆ?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ಮುಖ್ಯಮಂತ್ರಿಗಳೇ ಉತ್ತರ ಕೊಡಬೇಕೆಂದು ಎಲ್ಲೂ ಇಲ್ಲ. ನಾವು ಗೃಹ ಮಂತ್ರಿಗಳಾಗಿ ಉತ್ತರ ಕೊಡುತ್ತೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಕಾನೂನು ಸುವ್ಯವಸ್ಥೆ, ಮತ್ತೊಂದು ಪ್ರಕರಣ, ಮಲ್ಲಿಕಾರ್ಜುನ ಬಂಡೆ ಪ್ರಕರಣಗಳು ಬಂದಾಗ ನಾವು ಗೃಹ ಸಚಿವರಿಂದ ಉತ್ತರ ಕೇಳಿದ್ದೇವೆ. ನಾವು ಇಲ್ಲವೆಂದು ಹೇಳುವುದಿಲ್ಲ. ಆದರೆ, ಈ ಒಂದು ಘಟನೆ ಏನೀದೆ ಈ ಒಂದು ಪರಿಸ್ಥಿತಿ ಏನಿದೆ, ಬಹಳ ಗಂಭೀರವಾದ ಘಟನೆ. ನಿಗೂಢವಾಗಿ ಸಾವಾಗಿರುವಂಥದ್ದು. ಇಡೀ ರಾಜ್ಯದ ಜನ ನೋಡುತ್ತಿದ್ದಾರೆ. ಮುಖ್ಯಮಂತ್ರಿಗಳು ಉತ್ತರ ಕೊಟ್ಟರೆ ಇಡೀ ರಾಜ್ಯದ ಜನತೆ ನೋಡುತ್ತಿರುತ್ತಾರೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಶೆಟ್ಟರ್‌ರವರೆ ಅವರು ಉತ್ತರ ಕೊಡಲಿ ಬಿಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಇಂಥ ಗಂಭೀರವಾದ ವಿಚಾರಕ್ಕೆ ಅವರು ಉತ್ತರ ಕೊಡುತ್ತಾರೆಂದರೆ ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ನನ್ನ ಇಲಾಖೆಗೆ ಸಂಬಂಧಪಟ್ಟದ್ದು ನಾನು ಉತ್ತರ ಕೊಡುತ್ತೇನೆ, ಆಮೇಲೆ ಅವರು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಅವರು ಉತ್ತರ ಕೊಟ್ಟಮೇಲೆ ನಾನು ಕೊಡುತ್ತೇನೆ. ಅವರು ಹೇಳಿದ ಮೇಲೆ ನಾನು ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು:– ವಿರೋಧ ಪಕ್ಷದ ನಾಯಕರೆ, ಅವರು ಉತ್ತರ ಕೊಟ್ಟ ಮೇಲೆ ಇವರು ಉತ್ತರ ಕೊಡುತ್ತಾರೆ ಬಿಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಅವರು ಹೇಳಿಬಿಟ್ಟರೆ ಇದು ಮುಗಿದು ಹೋಗುತ್ತದೆ.

(ಗೊಂದಲ)

ಶ್ರೀ ಆರ್. ಅಶೋಕ್:– ಅವರು ಇಲ್ಲಿಯೇ ಇದ್ದಾರೆ ಅವರು ಉತ್ತರ ಕೊಡಲಿ ಸಾರ್.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಅವರು ಬೆಳಿಗ್ಗೆ intelligence ನಿಂದ ಮಾಹಿತಿ ತೆಗೆದುಕೊಂಡು ಸಭೆ ಮಾಡಿದ್ದಾರೆ. ಅವರಿಗೆ ಎಲ್ಲವೂ ಗೊತ್ತಿರುವಂಥ ವಿಚಾರ. ಇದನ್ನು ಒಣಪ್ರತಿಷ್ಠೆಯನ್ನಾಗಿ ಮಾಡಿಕೊಳ್ಳುವುದು ಬೇಡ. ಇದು ಗಂಭೀರವಾದ ವಿಚಾರ. ಮುಖ್ಯಮಂತ್ರಿಗಳು ಎದ್ದು ಅವರೇ ನಾನು ಉತ್ತರ ಕೊಡುತ್ತೇನೆಂದು ಹೇಳಬೇಕಾಗಿತ್ತು. ನಾವು ಇಷ್ಟು ಒತ್ತಾಯ ಮಾಡುವ ಅವಶ್ಯಕತೆನೆ ಇಲ್ಲ.

(ಗೊಂದಲ)

ಅಧ್ಯಕ್ಷರು:– ವಿಷಯ ಗಂಭೀರವಾಗಿದೆ ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಇಡೀ ಸದನ ಅತ್ಯಂತ ಕುತೂಹಲದಿಂದ ಈ ಚರ್ಚೆಯನ್ನು ಕೇಳಿದೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- ಕಾಗೇರಿಯವರೆ, ಅವರು ಮೊದಲು ಉತ್ತರ ಕೊಡಲಿ ಬಿಡಿ.

(ಗೊಂದಲ)

ಅಧ್ಯಕ್ಷರು:- ಆದ್ದರಿಂದ, ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಉತ್ತರ ಹೇಳುವುದಕ್ಕೆ ಆಗಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ಅವರು ಹೇಳಿದ ಉತ್ತರದಲ್ಲಿ ಕೊರತೆಯಾದರೆ ಮುಖ್ಯಮಂತ್ರಿಗಳು ಕೊಡುತ್ತಾರೆ. ಆದರೆ, ಮುಖ್ಯಮಂತ್ರಿಗಳು ನಾನೇ ಕೊಡುತ್ತೇನೆಂದರೆ, ಯಾರೂ ಅದರಲ್ಲಿ ಆತಂಕ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಸಭಾಧ್ಯಕ್ಷರೆ, ಗೃಹ ಮಂತ್ರಿಗಳು ಉತ್ತರ ಕೊಡಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನಾವು ಇದನ್ನು ಪ್ರತಿಷ್ಠೆಯನ್ನಾಗಿ ತೆಗೆದುಕೊಳ್ಳುವುದಿಲ್ಲ. ನಮಗೆ ಒಂದು ಉತ್ತರ ಬರಲಿ. ಸರಕಾರದ ನಿಲುವು ಏನೆಂದು ಗೊತ್ತಾಗಲಿ.

(ಗೊಂದಲ)

ಅಧ್ಯಕ್ಷರು:- ದತ್ತಾರವರೆ ಅವರ ಉತ್ತರ ಬರಲಿ ಆಮೇಲೆ ನೋಡೋಣ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ಇಡೀ ಸದನ ಅದರಲ್ಲಿ ವಿರೋಧ ಪಕ್ಷದ ನಾಯಕರುಗಳು, ಸಾಕಷ್ಟು ಜನ ಹಿರಿಯ ನಾಯಕರುಗಳು ಈ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದಾರೆ. ಬಹುಶಃ ಅವರ ಅನಿಸಿಕೆ, ನನಗೆ ಗೊತ್ತಿರುವ ಹಾಗೆ ಡಿ.ಕೆ. ರವಿ ಯವರು ಒಬ್ಬ ದಕ್ಷ,

ಪ್ರಾಮಾಣಿಕ IAS ಅಧಿಕಾರಿಯಾಗಿದ್ದರು. ನನಗೆ ನೇರವಾಗಿ ಅವರ ಪರಿಚಯವಿದೆ. ಅವರು ಕೋಲಾರದಲ್ಲಿ DC ಇದ್ದಾಗ ನಾನು ಗೃಹ ಸಚಿವನಾಗಿ ಅಲ್ಲಿಗೆ ಹೋಗಿ review ಮಾಡಿದ್ದೆ. ಆಗ ಅವರು DC ಆಗಿದ್ದರು. ನಂತರ ಅವರನ್ನು ಇಲ್ಲಿಗೆ Commercial Tax (Enforcement) ಗೆ Additional Commissioner ಆಗಿ ಮುಖ್ಯಮಂತ್ರಿಗಳು ನೇಮಿಸಿದರು. ತದನಂತರ ಅವರು ಯಾವ ರೀತಿಯಾಗಿ ಕೆಲಸ ಮಾಡಿದರು ಎಂಬುದನ್ನು ನಾವು ನೋಡುತ್ತಿದ್ದೇವೆ.

ತಾವು ಹೇಳಿದ ಹಾಗೆ ದೊಡ್ಡ ದೊಡ್ಡ ಬಿಲ್ಡರ್ ಮತ್ತು ಜ್ಯುವೆಲರ್ ಅಂಗಡಿಗೆ ಹೋಗಿ ರೈಡ್ ಮಾಡಿ ಸರ್ಕಾರದ ಬೊಕ್ಕಸಕ್ಕೆ ಸಾಕಷ್ಟು ಹಣಕಾಸು ಜೋಡಿಸುವಂಥ ದಕ್ಷವಾದ ಮತ್ತು ಉತ್ತಮವಾದ ಕೆಲಸವನ್ನು ಅವರು ಮಾಡುತ್ತಾ ಬಂದಿದ್ದರು. ಅವರು ಇವತ್ತು ಯಾವ ರೀತಿಯಾಗಿ ಸಂಶಯಾಸ್ಪದ ರೀತಿಯಲ್ಲಿ ಮರಣ ಹೊಂದಿರುವ ಬಗ್ಗೆ ಇಡೀ ರಾಜ್ಯದಲ್ಲಿ ಒಂದು ರೀತಿಯ ಶೋಕದ ವಾತಾವರಣ ಆಗಿದೆ. ಈ ಬಗ್ಗೆ ಏನು ವಿಚಾರ ಇದೆಯೋ ಅದನ್ನು ಸದನ ಗಮನಕ್ಕೆ ತರತಕ್ಕಂಥದ್ದು ನಮ್ಮ ಸರ್ಕಾರದ ಕರ್ತವ್ಯವಾಗಿದೆ. ಇವತ್ತು ಪ್ರಾಮಾಣಿಕನಾದ ಒಬ್ಬ ಅಧಿಕಾರಿಗೆ ರಕ್ಷಣೆ ಕೊಡುವಂಥ ಕೆಲಸವನ್ನು ಸರ್ಕಾರ ಮಾಡಿಕೊಂಡು ಬಂದಿದೆ. ಅವರನ್ನು transfer ಮಾಡಲಾಗಿತ್ತೆಂದು ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡುವಂಥ ಸಂದರ್ಭದಲ್ಲಿ ಹೇಳಿದ್ದರು. ಅವರನ್ನು transfer ಮಾಡಿ ಇನ್ನೊಂದು ಒಳ್ಳೆಯ ಹುದ್ದೆಯನ್ನು ನೀಡಲಾಗಿತ್ತು...ಈ ರೀತಿಯಾಗಿ ನೀವೆಲ್ಲ ನಗಾಡಿದರೆ ನಾನೇನು ಮಾಡಲಿ? ನೀವೆಲ್ಲರೂ ಮಾತನಾಡುವಾಗ ನಿಮ್ಮೆಲ್ಲರ ಭಾಷಣವನ್ನು ಸಂಪೂರ್ಣವಾಗಿ ಕೇಳಿಕೊಂಡು ಬಂದಿದ್ದೇನೆ. ಆ ಸಂದರ್ಭದಲ್ಲಿ ಒಂದೇ ಒಂದು ಮಾತು ಕೂಡ ಆ ಸಂದರ್ಭದಲ್ಲಿ ನಮ್ಮ ಕಡೆಯಿಂದ ಬರಲಿಲ್ಲ. ದಯವಿಟ್ಟು ನಾನು ಹೇಳುವುದನ್ನು ಕೇಳಿ. ಅವರನ್ನು transfer ಮಾಡಿ Additional Commissioner post ಕೊಡಲಾಗಿತ್ತು. ಇದರ ಜೊತೆಗೆ ಅವರಿಗೆ Public Land Corporation ನಲ್ಲಿ additional charges ಸಹ ಕೊಡಲಾಗಿತ್ತು. ಅವರ ಬಗ್ಗೆ ನನ್ನ ವೈಯಕ್ತಿಕ ವಿಚಾರ ಹೇಳಬೇಕಾದರೆ, ನನ್ನ ಕ್ಷೇತ್ರದಲ್ಲಿ ಬಾಣಸವಾಡಿ ಕೆರೆ

ಇದೆ. ಅಲ್ಲಿ ಏನಾಗಿತ್ತದೆಂದರೆ, ಕೆಲವು ದಾಖಲೆಗಳನ್ನು forgery ಮಾಡಿದ್ದರು. ಈ ವಿಷಯ ಮಾನ್ಯ ಸುರೇಶ್ ಕುಮಾರ್‌ರವರಿಗೆ ಗೊತ್ತಿದೆ. ಅವರು ಕಾನೂನು ಸಚಿವರಾಗಿದ್ದಂಥ ಸಂದರ್ಭದಲ್ಲಿ ನಾನು ಎಂಎಲ್‌ಎ ಆಗಿ ಅವರ ಹತ್ತಿರ ಹೋಗಿ ಈ ಬಗ್ಗೆ ಸಭೆ ಮಾಡಿದ್ದೆ. ಈ ವಿಷಯ ಕೋರ್ಟ್‌ಗೆ ಬಂದಿದೆ. ಆದರೆ, ನಮ್ಮ ಲಾಯರ್‌ಗಳು ಸರಿಯಾಗಿ argument ಮಾಡುತ್ತಿಲ್ಲ. ಬಹುಶಃ ಅವರು ಯಾರು forgery ಮಾಡಿದ್ದಾರೆಯೋ ಅವರ ಪರವಾಗಿ ಮಾಡುತ್ತಿದ್ದಾರೆಂದು ನಮ್ಮಲ್ಲಿರುವ association ನವರು ಬಂದು ನನ್ನ ಹತ್ತಿರ ಹೇಳಿದರು. ಈ ರೀತಿ ಏಕೆ ಮಾಡುತ್ತಿದ್ದೀರೆಂದು ಆಗ ಡಿ.ಸಿ. ಆಗಿದ್ದ ಶಂಕರ್‌ರವರನ್ನು ನಾನು ಕೇಳಿದೆ ಹಾಗೆಯೇ ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಲಾಯರ್ ಅವರನ್ನು ಬದಲಾವಣೆ ಮಾಡಿ ಎಂದು ಹೇಳಿದೆ. ಆಗ ಅವರು ಏನು ಹೇಳಿದರೆಂದರೆ, ಇದು ರವಿ ಎಂಬುವವರ in charge ಗೆ ಬರುತ್ತದೆ ಎಂದು ಹೇಳಿದರು. ಆಗ ನಾನು immediate ಆಗಿ ರವಿರವರಿಗೆ ಫೋನ್ ಮಾಡಿದೆ. ಆಗ ರಾತ್ರಿ ಆಗಿತ್ತು. ಬೆಳಿಗ್ಗೆ ಅವರು ಖುದ್ದಾಗಿ ಹೋಗಿ ಅವರು ಏನು ಮಾಡಿದರೆಂದರೆ, Additional Advocate General ಅವರನ್ನು ಆ ಕೇಸ್‌ಗೆ ಹಾಕಿ ಇದರ ಬಗ್ಗೆ ವಾದ ಮಾಡುವಂಥ ಕೆಲಸ ಮಾಡಿದರು. ಅಂಥ ಒಬ್ಬ ದಕ್ಷ ಅಧಿಕಾರಿಯಾಗಿದ್ದರು. ಇವತ್ತಿನದಿವಸ ಅವರ ಸಾವಿನಿಂದ ನಿಮ್ಮೆಲ್ಲರಿಗೂ ಎಷ್ಟು ದುಖಃವಾಗಿದೆಯೋ ಅಷ್ಟೇ ದುಖಃ ನಮ್ಮೆಲ್ಲರಿಗೂ ಸಹ ಆಗಿದೆ. ಇವತ್ತಿನದಿವಸ ಎಲ್ಲಾ ಅಧಿಕಾರಿಗಳು ಅದೇ ರೀತಿಯಲ್ಲಿ ಕೆಲಸ ಮಾಡಬೇಕು. ನಾನು ಮತ್ತು ಮಾನ್ಯ ರಾಮಲಿಂಗರೆಡ್ಡಿಯವರು, ಮಾನ್ಯ ಡಿ.ಕೆ. ಶಿವಕುಮಾರ್‌ರವರು ಅಲ್ಲಿಗೆ ಹೋಗಿದ್ದೆವು. ಮಾನ್ಯ ಕುಮಾರಸ್ವಾಮಿಯವರು ಸಹ ಅಲ್ಲಿಗೆ ಬಂದಿದ್ದರು. ಅವರ ಸಾವಿನ ಪ್ರಕರಣದ ಸತ್ಯ ಹೊರಕ್ಕೆ ಬರಬೇಕು. ಇವತ್ತಿನ ದಿವಸ ನಮ್ಮ ಕಮೀಷನರ್‌ರವರು ಏನಾದರು ಹೇಳಿಕೆ ಕೊಡಬೇಕಾದರೆ ಅವರು ಯಾವುದೇ ದಾಖಲೆ ಇಲ್ಲದೆ ಅಥವಾ ಯಾವುದೇ ಒಂದು ಸುಳಿವು ಇಲ್ಲದೆ ಹೇಳಿಕೆ ಕೊಡುವುದಕ್ಕೆ ಆಗುವುದಿಲ್ಲ. ಆದರೆ, ಅವತ್ತು ಹೇಳಿಕೆಯನ್ನು ಏತಕ್ಕಾಗಿ ತಕ್ಷಣ ಕೊಟ್ಟರೆಂದರೆ, ಜನರಿಗೆ ಈ ಬಗ್ಗೆ ಅನುಮಾನ ಬರುವಂಥ ರೀತಿಯಲ್ಲಿ ಬೇರೆ ಬೇರೆ ಮಾಧ್ಯಮಗಳಲ್ಲಿ ಸಾಕಷ್ಟು ಪ್ರಚಾರ

ನಡೆಯುತ್ತಿತ್ತು. ಆಗ ನಮ್ಮ ಹತ್ತಿರ ಇರುವ ಮಾಹಿತಿಯನ್ನು ಜನರಿಗೆ ಕೊಡತಕ್ಕಂಥದ್ದು ಅವರ ಕರ್ತವ್ಯವಾಗಿತ್ತು. ಆ ಪ್ರಕಾರ ಕೊಟ್ಟಿದ್ದಾರೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದ ಹಾಗೆ ಧಂಗೆ ಆಗಿಲ್ಲ, ಗಲಭೆ ಆಗಿದೆಯಷ್ಟೆ. ಆ ಗಲಭೆಯನ್ನು ತಡೆಯತಕ್ಕಂಥದ್ದು ನಮ್ಮ ಕರ್ತವ್ಯವಾಗಿದೆ. ಈಗಾಗಲೇ ನಮ್ಮ ಪೊಲೀಸ್ ಅಧಿಕಾರಿಗಳು ಅದರ ವಿಚಾರದ ತನಿಖೆಯಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ. ಅವರ ಮಾವನವರಾದ ಶ್ರೀ ಹನುಮಂತರಾಯಪ್ಪನವರು ರಾತ್ರಿ 7.45ಕ್ಕೆ ದೂರು ಕೊಡುತ್ತಾರೆ. ಅವರು ಏನು ದೂರು ಕೊಡುತ್ತಾರೆಂದರೆ ನನ್ನ ಅಳಿಯ ಐ.ಎ.ಎಸ್. ಅಧಿಕಾರಿ, ಇವರು ಸಂಶಯಾಸ್ಪದ ರೀತಿಯಲ್ಲಿ ಸಾವನ್ನಪ್ಪಿದ್ದಾರೆಂದು ದೂರು ಕೊಟ್ಟಿದ್ದಾರೆ. ತಕ್ಷಣ ಪೊಲೀಸ್ ಅಧಿಕಾರಿ ಅಲ್ಲಿಗೆ ಹೋಗುತ್ತಾರೆ. ಅವರು ದೂರಿನಲ್ಲಿ ಏನು ಹೇಳುತ್ತಾರೆಂದರೆ, ಬೆಳಿಗ್ಗೆ 10.30 ಗಂಟೆಗೆ ಕಛೇರಿಗೆ ಹೋಗಿ 11.15 ಗಂಟೆಗೆ ಫ್ಲಾಟ್‌ಗೆ ಬರುತ್ತಾರೆ.

ಅಧ್ಯಕ್ಷರು:– ಈ ಬಗ್ಗೆ ಇರುವ statement ಅನ್ನು ಓದುತ್ತೀರಾ?

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಓದಬೇಕೆಂದರೆ ಓದುತ್ತೇನೆ.

ಅಧ್ಯಕ್ಷರು:– ನೀವು ಓದ ಬೇಕಾದರೆ ಹೇಳಿಕೆಯ ಪ್ರತಿಯನ್ನು ಎಲ್ಲರಿಗೂ ಕೊಡಬೇಕಾಗುತ್ತದೆ.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, Statement ಅನ್ನು ಓದಿದರೆ ಅದರಲ್ಲಿ ಎಲ್ಲಾ ವಿಚಾರ complete ಆಗಿ ಬರುತ್ತದೆ. Statement ನ ಪ್ರತಿ ಇದೆ ಅದನ್ನು ಎಲ್ಲರಿಗೂ ಸಹ ಕೊಡುತ್ತೇವೆ.

ಅಧ್ಯಕ್ಷರು:– ಹಾಗಾದರೆ ಎಲ್ಲರಿಗೂ ಕೊಡಿ.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಹೇಳಿಕೆಯನ್ನು ಓದುತ್ತೇನೆ. ಮಾನ್ಯ ಅಧ್ಯಕ್ಷರೆ,

ದಿನಾಂಕ:16–03–15 ರಂದು ರಾತ್ರಿ 7.45 ಪಿ.ಎಂ ಗಂಟೆಯ ಸಮಯದಲ್ಲಿ ಪಿರ್ಯಾದುದಾರರಾದ ಶ್ರೀ ಹನುಮಂತರಾಯಪ್ಪರವರ ದೂರನ್ನು ಪಡೆದಿದ್ದು, ದೂರಿನ ಸಾರಾಂಶವೇನೆಂದರೆ, ತನ್ನ ಹಿರಿಯ ಮಗಳಾದ ಕುಸುಮಾಳನ್ನು ಡಿ.ಕೆ. ರವಿ, ಐ.ಎ.ಎಸ್ ಎಂಬುವವರಿಗೆ ಕೊಟ್ಟು ಮದುವೆ ಮಾಡಿದ್ದು, ತನ್ನ ಅಳಿಯ ಐ.ಎ.ಎಸ್. ಅಧಿಕಾರಿಯಾಗಿ ಹಾಲಿ ಅಡಿಷನಲ್ ಕಮೀಷನರ್, ಕಮರ್ಷಿಯಲ್ ಟ್ಯಾಕ್ಸ್, ಎನ್‌ಪೋರ್ಸ್‌ಮೆಂಟ್ ವಿಭಾಗದಲ್ಲಿ 03–04 ತಿಂಗಳಿನಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ–16.03.2015 ರಂದು ತನ್ನ ಮಗಳು ಮನೆಯಲ್ಲಿ ತನ್ನ ಬಳಿ ಬಂದು ರವಿ ಯಾರ ಫೋನ್ ಸ್ವೀಕರಿಸುತ್ತಿಲ್ಲಾ ಕಾರು ಚಾಲಕನನ್ನು ವಿಚಾರಿಸಲಾಗಿ ಬೆಳಿಗ್ಗೆ ಬಂದವರು ಇಲ್ಲಿಯವರೆವಿಗೂ ಹೊರಗೆ ಬಂದಿರುವುದಿಲ್ಲ ಎಂದು ತಿಳಿಸಿದ್ದು, ಫಿರ್ಯಾಧಿ ಅಪಾರ್ಟ್‌ಮೆಂಟ್ ಬಳಿ ಬಂದಿದ್ದು, ಅಷ್ಟರಲ್ಲಿ ತನ್ನ ಮಗಳು ಸಹ ಅಲ್ಲಿಗೆ ಬಂದಿದ್ದರು. ಎಲ್ಲರೂ ಜೊತೆಯಲ್ಲಿ ಮನೆಗೆ ಹೋಗಿ ನೋಡಲಾಗಿ ಮನೆಗೆ ಬೀಗ ಹಾಕಿದ್ದು, ಮಗಳ ಬಳಿಯಿದ್ದ ಇನ್ನೊಂದು ಕೀಯಿಂದ ಬೀಗ ತೆಗೆದು ಒಳಗಡೆ ಹೋಗಿ ನೋಡಲಾಗಿ ರವಿರವರು ರೂಂನಲ್ಲಿರುವ ಪ್ಯಾನ್‌ಗೆ ನೇಣು ಬಿಗಿದ ಸ್ಥಿತಿಯಲ್ಲಿ ಕಂಡುಬಂದಿದ್ದು, ಆಗ ಸಮಯ ಸುಮಾರು ಸಂಜೆ 06:45 ಗಂಟೆಯಾಗಿದ್ದು, ಕೂಡಲೇ ದೂರವಾಣಿ ಸಂ–100 ಕ್ಕೆ ಕರೆ ಮಾಡಿದ್ದು, ಈ ಹಿನ್ನೆಲೆಯಲ್ಲಿ ಮಡಿವಾಳ ಪೊಲೀಸ್ ಠಾಣೆಯಲ್ಲಿ ಯು.ಡಿ.ಆರ್.ನಂ–047/15 ಕಲಂ:174 ಸಿಆರ್.ಪಿ.ಸಿ. ಪ್ರಕಾರ ಪ್ರಕರಣ ದಾಖಲಾಗಿರುತ್ತದೆ.

ತಕ್ಷಣ ಎಫ್.ಎಸ್.ಎಲ್ ಮತ್ತು ಫಿಂಗರ್ ಪ್ರಿಂಟ್ ತಂಡಗಳು ಸ್ಥಳಕ್ಕೆ ಬಂದು ಪರಿಶೀಲನೆ ಕೈಗೊಂಡಿರುತ್ತಾರೆ. ನಂತರ ಸ್ಥಳ ಪಂಚನಾಮೆಯನ್ನು ಜರುಗಿಸಿ, ಪಂಚರ ಸಮಕ್ಷಮ ಸ್ಥಳದಲ್ಲಿ ದೊರೆತ ಒಂದು ಸ್ಯಾಮ್‌ಸಂಗ್ ಗೆಲಾಕ್ಸಿ ನೋಟ್ ಮೊಬೈಲ್ ಪೋನ್, ಒಂದು ಸ್ಯಾಮ್‌ಸಂಗ್ ಗ್ಯಾಲಾಕ್ಸಿ ಎ–5 ಡ್ಯೂಸ್ ಮೊಬೈಲ್ ಪೋನ್, ಒಂದು ಆಪಲ್ ಐ ಪೋನ್ ಮತ್ತು ಒಂದು ಆಪಲ್ ಐ ಪಾಡ್ ಇರುತ್ತವೆ. ನಂತರ ಮೃತನ ಪ್ಯಾಂಟ್‌ನ ಹಿಂಭಾಗದ ಪ್ಯಾಕೇಟ್‌ನಲ್ಲಿ ಒಂದು ಹಳದಿ ಬಣ್ಣದ ಪರ್ಸ್ ಇದ್ದು, ಅದನ್ನು ಅಜಮಾಯಿಸಲಾಗಿ ಇಲಾಖಾ ಗುರುತಿನ ಚೀಟಿ ಮತ್ತು ಇತರೆ ಕಾರ್ಡ್‌ಗಳು

ಇರುತ್ತವೆ. ಈ ಮೇಲ್ಕಂಡ ಮೊಬೈಲ್ ಫೋನ್‌ಗಳು, ಐ ಫೋನ್, ಐ ಪಾಡ್ ಮತ್ತು ಪರ್ಸ್ ಹಾಗೂ ಅದರಲ್ಲಿದ್ದ ಎಲ್ಲಾ ವಸ್ತುಗಳನ್ನು ಮುಂದಿನ ತನಿಖೆಗಾಗಿ ವಶಪಡಿಸಿಕೊಳ್ಳಲಾಯಿತು. ಎಲ್ಲಾ ತನಿಖಾ ನಡವಳಿಗಳನ್ನು ವಿಡಿಯೋ ಚಿತ್ರೀಕರಣ ಮಾಡಲಾಗಿರುತ್ತದೆ. ನಂತರ ಮೃತದೇಹವನ್ನು ಶವಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆ ಶವಾಗಾರದಲ್ಲಿ ಇಟ್ಟುಕೊಳ್ಳಲು ಶವಾಗಾರಕ್ಕೆ ರವಾನಿಸಿರುತ್ತದೆ.

ಉಪ ವಿಭಾಗಾಧಿಕಾರಿಗಳು ದಿನಾಂಕ:17.03.2015 ರಂದು ಬೆಳಿಗ್ಗೆ ಶವತನಿಖೆಯನ್ನು ಪ್ರಾರಂಭಿಸಿರುತ್ತಾರೆ. ಮೃತರ ಶವಪರೀಕ್ಷೆಯನ್ನು ಆಸ್ಪತ್ರೆಯ ನ್ಯಾಯ ವೈದ್ಯ ಶಾಸ್ತ್ರ ವಿಭಾಗದ ವೈದ್ಯರ ತಂಡದಿಂದ ನಿರ್ವಹಿಸಲಾಗುತ್ತಿದೆ.

ಘಟನೆ ನಡೆದ ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳು ತಕ್ಷಣವೇ ಭೇಟಿ ನೀಡಿರುತ್ತಾರೆ. ಜೊತೆಗೆ ಎಫ್.ಎಸ್.ಎಲ್ ಮತ್ತು ಇತರ ವೈಜ್ಞಾನಿಕ ತಂಡಗಳು ಸಹಾ ಸ್ಥಳ ಪರಿಶೀಲನೆ ಮತ್ತು ತನಿಖೆಯನ್ನು ಕೈಗೊಂಡಿರುತ್ತಾರೆ.

ಈ ತನಿಖೆಗಾಗಿ ಒಂದು ವಿಶೇಷ ತಂಡವನ್ನು ರಚಿಸಲಾಗಿದ್ದು, ಈ ತಂಡದ ನೇತೃತ್ವವನ್ನು ಸ್ಥಳೀಯ ಆಗ್ನೇಯ ವಿಭಾಗದ ಉಪ ಪೊಲೀಸ್ ಆಯುಕ್ತರು ಡಾ॥ ರೋಹಿಣಿ ಕಟೋಚ್ ಸೆಪಟ್‌ರವರಿಗೆ ವಹಿಸಲಾಗಿದೆ.

ಈ ತಂಡವು ತನಿಖೆಯನ್ನು ಕೂಲಂಕುಷವಾಗಿ ನಡೆಸುತ್ತಿರುತ್ತಾರೆ. ಇಲ್ಲಿಯವರೆವಿಗೂ ಲಭ್ಯವಿರುವ ಮಾಹಿತಿ ಮತ್ತು ಸುಳಿವುಗಳ ಆಧಾರದ ಮೇಲೆ ಈ ಸಾವು ಆತ್ಮಹತ್ಯೆ ಎಂದು ಮೇಲ್ನೋಟಕ್ಕೆ ಗೊತ್ತಾಗಿರುತ್ತದೆಂದು ತಂಡವು ವರದಿ ಮಾಡಿರುತ್ತದೆ.

ಈ ಆತ್ಮಹತ್ಯೆಯು ವೈಯಕ್ತಿಕ ಕಾರಣಗಳಿಂದ ಆಗಿರುವುದಕ್ಕೆ ಸುಳಿವುಗಳು ಸಿಕ್ಕಿರುತ್ತದೆಂದು ತಂಡವು ತಿಳಿಸಿರುತ್ತದೆ. ಈ ವಿಷಯವು ಕಾನೂನಿನ ಪ್ರಕಾರ ನಡೆಸಬೇಕಾದ ತನಿಖೆಗೆ ಸಂಬಂಧಪಟ್ಟ ವಿಷಯವಾದ್ದರಿಂದ ತನಿಖೆಯು ಪ್ರಗತಿಯಲ್ಲಿದ್ದು, ಹೆಚ್ಚಿನ ವಿವರಗಳನ್ನು ಈ ಹಂತದಲ್ಲಿ ನೀಡಲು ಸಾಧ್ಯವಿರುವುದಿಲ್ಲ.

ಅಧ್ಯಕ್ಷರು:- ಮಾನ್ಯ ಸಚಿವರೇ, ತಮ್ಮ ಹೇಳಿಕೆಯಲ್ಲಿ ಒಂದು ವಿಷಯ ಹೇಳಿದ್ದೀರಿ. ಅದೇನೆಂದರೆ, ದಿನಾಂಕ:14.03.2015 ರಂದು ತನ್ನ ಮಗಳು ಮನೆಯಲ್ಲಿ ತನ್ನ ಬಳಿ ಬಂದು ರವಿ ಯಾರ ಫೋನ್ ಸ್ವೀಕರಿಸುತ್ತಿಲ್ಲ ಕಾರು ಚಾಲಕನನ್ನು ವಿಚಾರಿಸಲಾಗಿ ಬೆಳಿಗ್ಗೆ ಬಂದವರು ಇಲ್ಲಿಯವರೆವಿಗೂ ಹೊರಗೆ ಬಂದಿರುವುದಿಲ್ಲವೆಂದು ತಿಳಿಸಿದ್ದು ಎಂದು ಹೇಳಿದ್ದಾರೆ. ಇದರ ಅರ್ಥವೇನು?

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೆ, ಅದು 14.03.2015 ಎಂದು ಟೈಪಿಂಗ್ ಮಿಸ್ಟೇಕ್ ಆಗಿದೆ. ಅದು 16.03.2015 ಎಂದು ಆಗಬೇಕು.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೇ, ವಿಚಾರ ಗಂಭೀರತೆ ಎಷ್ಟಿದೆ ಎಂದು ಇದರಿಂದ ಗೊತ್ತಾಗುತ್ತದೆ. Date ಅನ್ನು ತಪ್ಪಾಗಿ ಹಾಕಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ. ರವಿ:- ಮಾನ್ಯ ಅಧ್ಯಕ್ಷರೆ, ಇವರ statement ಈ ರೀತಿ ಇರುವಾಗ ಇವರ ತನಿಖೆ ಇನ್ನು ಯಾವ ರೀತಿಯಾಗಿ ಇರುತ್ತದೆ ಹೇಳಿ? ಇದು ಬೇಜವಾಬ್ದಾರಿ ಹೇಳಿಕೆ ಆಗಿದೆ.

(ಗೊಂದಲ)

ಶ್ರೀ ವಿ. ಸುನೀಲ್ ಕುಮಾರ್:- ಮಾನ್ಯ ಅಧ್ಯಕ್ಷರೆ, ಬರವಣಿಗೆಯಲ್ಲಿ ಕೊಟ್ಟಿರುವ ಹೇಳಿಕೆ ಯಾವರೀತಿಯಾಗಿದೆ ಎಂದು ನೋಡಿ.

(ಗೊಂದಲ)

ಶ್ರೀ ಆರ್. ಅಶೋಕ್:- ಇದನ್ನು ನೋಡಿದರೆ ಯಾವರೀತಿಯಾಗಿ ತನಿಖೆಯನ್ನು ಮಾಡಿಸುತ್ತಾರೆಂಬುದು ಗೊತ್ತಾಗುತ್ತದೆ.

(ಗೊಂದಲ)

ಅಧ್ಯಕ್ಷರು:– ಸದನದ ಗಾಂಭೀರತೆಯನ್ನು ಹಾಳು ಮಾಡಬೇಡಿ. ಹೇಳಿಕೆಯನ್ನು ದಯವಿಟ್ಟು ಹರಿದು ಹಾಕಬೇಡಿ.

(ಗೊಂದಲ)

ಶ್ರೀ ಆರ್. ಅಶೋಕ್:– ಈ ರೀತಿಯಾಗಿ ಬರೆದು ಕೊಟ್ಟ ಅಧಿಕಾರಿಯನ್ನು ಮೊದಲು ಸಸ್ಪೆಂಡ್ ಮಾಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಈ ರೀತಿಯಾಗಿ ತಪ್ಪು date ಹಾಕಿಸಿ ತಪ್ಪು ಉತ್ತರ ಕೊಡತಕ್ಕಂಥದ್ದು ಅಧಿಕಾರಿಗಳ ಬೇಜವಾಬ್ದಾರಿತನ ತೋರಿಸುತ್ತದೆ. ಇದನ್ನು ಮಾನ್ಯ ಗೃಹ ಮಂತ್ರಿಗಳು ಸಹ ನೋಡುವುದಿಲ್ಲವೆಂದರೆ ಹೇಗೆ?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ದಿನಾಂಕ 14.03.2015 ಎಂಬುದರ ಬದಲು 16.03.2015 ರಂದು ಬದಲಿಸಿಕೊಳ್ಳಬೇಕಾಗಿದೆ.

(ಗೊಂದಲ)

ಅಧ್ಯಕ್ಷರು:– ಅಶೋಕರವರೆ, ಒಂದು ನಿಮಿಷ ತಾಳಿ. ತನ್ನ ಮಗಳು ತನ್ನ ಮನೆಯಲ್ಲಿ ಬಂದು ರವಿ ಯಾರ ಫೋನ್ ಸ್ವೀಕರಿಸುತ್ತಿಲ್ಲ, ಕಾರು ಚಾಲಕನನ್ನು ವಿಚಾರಿಸಲಾಗಿ, ಆಗ ಕಾರು ಚಾಲಕ ಎಲ್ಲಿ ಇದ್ದಾ? ಈ ಮಗಳು ಎಲ್ಲಿದ್ದಳು.

ಶ್ರೀ ಕೆ.ಜೆ. ಜಾರ್ಜ್:– ಕಾರು ಚಾಲಕ ಕೆಳಗಡೆ ಇದ್ದರು. ಮಗಳು ಅಲ್ಲಿಗೆ ಬಂದಿದ್ದಾಳೆ. ತಂದೆಯ ಮನೆಯಲ್ಲಿದ್ದರು. ತಂದೆಯ ಬಳಿ ಬಂದು ಯಾರ ಫೋನ್ ಸ್ವೀಕರಿಸುತ್ತಿಲ್ಲ. ಮನೆಯಲ್ಲಿ ರವಿ ಒಬ್ಬರೆ ಇದ್ದರು. ಅವರು ಬೆಳಗ್ಗೆ ಮಾವನ ಮನೆಯಲ್ಲಿದ್ದರು. ಮಾವನ ಮನೆಯಿಂದ ಆಫೀಸಿಗೆ ಬಂದಿದ್ದಾರೆ. ಅವರ ಸಹಧರ್ಮಿಣಿಯವರು ಅವರ ತಂದೆಯ ಮನೆಯಲ್ಲಿಯೇ ಇದ್ದರು. ಅವರು ತಮ್ಮ ಮನೆಯಲ್ಲಿರಲಿಲ್ಲ.

ಅಧ್ಯಕ್ಷರು:– ನೀವು ಅದನ್ನು ಹೇಳಲೇ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಇವರು ಪತ್ರಿಕೆಯಲ್ಲಿ ಬಂದಿರುವಂಥ ಸ್ಟೋರಿ ಇರಬಹುದು. ಅಲ್ಲಿರುವಂಥ ಮಾಹಿತಿ ಇರಬಹುದು. ಇಲ್ಲಿ ಉತ್ತರ ಕೊಟ್ಟಿರುವುದು, ಆ ಘಟನೆಯ ಹಿನ್ನೆಲೆ, date ಇವೆಲ್ಲಾ ನೋಡಿದರೆ ಸರ್ಕಾರ ಇಂತಹ ಪ್ರಕರಣಗಳನ್ನು ಯಾವ ರೀತಿಯಾಗಿ ಗಂಭೀರತೆಯಿಂದ ತೆಗೆದುಕೊಳ್ಳಬೇಕು.

ಶ್ರೀ ಕೆ.ಜೆ. ಜಾರ್ಜ್:– ವಿರೋಧ ಪಕ್ಷದ ನಾಯಕರೆ, ನಿನ್ನೆ ಘಟನೆ ಆಗಿದೆ. ನಾನು statement ಕೊಟ್ಟಿದ್ದೇನೆ. ಅದನ್ನು ತನಿಖೆ ಮಾಡುವುದಕ್ಕೆ ಸ್ವಲ್ಪ ಸಮಯವನ್ನು ಕೊಟ್ಟರೆ ಸದನ ಮುಗಿಯುವುದರೊಳಗಡೆ ಸಂಪೂರ್ಣವಾದ ವಿವರವನ್ನು ನಾವು ಕೊಡುವುದಕ್ಕಾಗುತ್ತದೆ.

ಶ್ರೀ ಕೆ. ಸುನೀಲ್ ಕುಮಾರ್:– ಇದನ್ನು ಮುಚ್ಚಿಹಾಕುವಂಥದ್ದು ನಡೆಯುತ್ತಿದೆ. ನಿಮ್ಮ statement ದಿಂದ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಇವರಿಂದ statement ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇಲ್ಲಿ ಏನು ಹೇಳುತ್ತಾರೆ, ಈ ಆತ್ಮಹತ್ಯೆಯು ವೈಯಕ್ತಿಕ ಕಾರಣಗಳಿಂದ ಆಗಿರುವುದಕ್ಕೆ ಸುಳಿವುಗಳು ಸಿಕ್ಕಿರುತ್ತದೆಂದು ತಂಡವು ತಿಳಿಸಿರುತ್ತದೆ. ಅಂದರೆ, ನಿನ್ನೆ ಪೊಲೀಸ್ ಕಮಿಷನರ್‌ರವರು ಏನು ಹೇಳಿದರು. Prima facie ಆತ್ಮಹತ್ಯೆ. ಇವತ್ತು ಬೆಳಗ್ಗೆ ಹೇಳುತ್ತಾರೆ ಈ ರೀತಿ ಹೇಳಿಕೆ ಕೊಡುವುದಕ್ಕೆ ನನಗೆ ಹಕ್ಕಿದೆ ಎಂದು ಅವರು depend ಮಾಡಿಕೊಳ್ಳುತ್ತಾರೆ. ಅಂದರೆ, postmortem report ಬಂದಿಲ್ಲ. ಯಾವುದು ಬಂದಿಲ್ಲ. ಇವರು ಇವತ್ತು postmortem report ಮೇಲೆ ಹೇಳಬೇಕು. ಇವರು ಉತ್ತರ ಕೊಡುತ್ತಾರಲ್ಲಾ ಸಾವಿನ ಬಗ್ಗೆ ನಿಗೂಢತೆ ಇದೆ. ನಾವು ಇದರ ಬಗ್ಗೆ ಸಂಶಯ ಮಾಡುತ್ತೇವೆ. ತನಿಖೆ ಮಾಡುತ್ತೇವೆಂದು ಹೇಳಬೇಕು.

ಶ್ರೀ ಕೆ.ಜೆ. ಜಾರ್ಜ್:- ಇದು ಈಗ ವಿವರ ಸಿಕ್ಕಿದೆ, ನಮಗೆ ಸಂಪೂರ್ಣ ಮಾಹಿತಿ ಬರುತ್ತದೆ.

ಅಧ್ಯಕ್ಷರು:- ಹಾಗೆ ಅಲ್ಲ. ಮಾನ್ಯ ಮುಖ್ಯಮಂತ್ರಿಗಳೇ, ಇನ್ನು postmortem report ಬಂದಿಲ್ಲ. ಎಲ್ಲಾ ಗುರುತು ವಗೈರೆಗಳು ಸಿಗುತ್ತವೆ. ಆತ್ಮಹತ್ಯೆ ಎಂದರೆ ನೇಣು ಹಾಕಿಕೊಂಡಿರಬೇಕು ಹೌದೇನ್ರಿ, ನೇಣು ಹಾಕಿಕೊಂಡರೆ ಕುತ್ತಿಗೆಗೆ ಆಗಿರಬೇಕು.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೆ, ಮೇಲ್ನೋಟಕ್ಕೆ ಆತ್ಮಹತ್ಯೆ ಆಗಿರುತ್ತದೆ ಹೇಳುತ್ತೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇಂದು ಜವಾಬ್ದಾರಿಯಿಂದ ಉತ್ತರ ಕೊಡುವುದು ಅಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ವೈಯಕ್ತಿಕ ಕಾರಣಗಳಿಂದ ಆಗಿರುವುದು ಎಂದು ಸುಳಿವು ಸಿಕ್ಕಿರುತ್ತದೆ.

ಶ್ರೀ ಆರ್. ಅಶೋಕ್:- ಮೇಲ್ನೋಟಕ್ಕೆ ಎಂದು ಬರೆದಿರುವುದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಅವರೊಂದು ತೀರ್ಮಾನಕ್ಕೆ ಬಂದು ಬಿಟ್ಟಿದ್ದಾರೆ.

ಶ್ರೀ ಆರ್. ಅಶೋಕ್:- ಆತ್ಮಹತ್ಯೆ ವೈಯಕ್ತಿಕ ಕಾರಣದಿಂದ ಆಗಿರುವುದಕ್ಕೆ ಸುಳಿವು ಸಿಕ್ಕಿದೆ. ಅಲ್ಲಿ ಮೇಲ್ನೋಟಕ್ಕೆಂದು ಬರೆದಿರುವುದಿಲ್ಲ. ಮೇಲ್ನೋಟ ಅಲ್ಲ, ಒಳನೋಟ ಬೇಕು.

ಶ್ರೀ ಜಗದೀಶ್ ಶೆಟ್ಟರ್:- ಈಗಾಗಲೇ ಇವರು ತೀರ್ಮಾನ ತೆಗೆದುಕೊಂಡು ಬಿಟ್ಟಿದ್ದಾರೆ.

ಶ್ರೀ ಕೆ.ಜೆ. ಜಾರ್ಜ್:- ನಮಗೆ ಮಾಹಿತಿಯಿಂದ ಆತ್ಮಹತ್ಯೆ ಎಂದು ಸುಳಿವು ಸಿಕ್ಕಿದೆ. ಸಂಪೂರ್ಣವಾದ ತನಿಖೆ ಆದ ಮೇಲೆ ಎಲ್ಲಾ ಮಾಹಿತಿಯನ್ನು ಸದನದ ಮುಂದೆ ಇಡುವುದಕ್ಕಾಗುತ್ತದೆ. ದಯವಿಟ್ಟು ನಾವು ಉಹಾಪೋಹದ ಮೇಲೆ ಹೇಳುತ್ತಿಲ್ಲ. ನಾವು ಸರಿಯಾದ ಸುಳಿವು ಸಿಕ್ಕಮೇಲೆ ಹೇಳಿರುತ್ತೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- Postmortem report ಇಲ್ಲದೆ ಈ conclusion ಗೆ ಹೇಗೆ ಬಂದಿರಿ? ಮೇಲ್ನೋಟಕ್ಕೆ ಆತ್ಮಹತ್ಯೆ ಎಂದು ಹೇಗೆ conclusion ಗೆ ಬಂದಿರಿ?

ಶ್ರೀ ಕೆ.ಜೆ. ಜಾರ್ಜ್:- ನನಗೆ ಉತ್ತರ ಹೇಳುವುದಕ್ಕೆ ಅವಕಾಶ ಕೊಟ್ಟರೆ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- Postmortem report ಬಂದರೆ ಅಡ್ಡಿಯಿಲ್ಲ. ಅದು ಏನು ಮಾಡದೆ..

ಶ್ರೀ ಕೆ.ಜೆ. ಜಾರ್ಜ್:- ನನಗೆ ಉತ್ತರ ಹೇಳುವುದಕ್ಕೆ ಅವಕಾಶ ಕೊಡಿ. ನೀವು ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಕೊಡಬೇಕಲ್ಲವೇ?

ಅಧ್ಯಕ್ಷರು:- ಅವರು ಹೇಳಲಿ.

ಶ್ರೀ ಎಸ್. ಸುರೇಶ್ ಕುಮಾರ್:- ಸರ್, ಒಂದು ನಿಮಿಷ. ಈ statement ಕೇಳಿದ ಮೇಲೆ ಈ ಪ್ರಕರಣವನ್ನು ಮುಚ್ಚಿಹಾಕಲು ಪ್ರಯತ್ನ ನಡೆಯುತ್ತಿದೆ ಎಂದು ಮೇಲ್ನೋಟಕ್ಕೆ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ಸನ್ಮಾನ್ಯ ಸಭಾಧ್ಯಕ್ಷರೆ, ಇದರಲ್ಲಿ ಆತ್ಮಹತ್ಯೆ ಎಂದು ಮೇಲ್ನೋಟಕ್ಕೆ ಗೊತ್ತಾಗುತ್ತದೆಂದು ನಾನು statement ಕೊಟ್ಟಿದ್ದೇನೆ. ಈಗಾಗಲೇ ಅಲ್ಲಿ F.S.L. ತಂಡ ಹೋಗಿದೆ. ನಮ್ಮ ಪೊಲೀಸ್ ತಂಡ

ಹೋಗಿದೆ. ಅವರಿಗೆ ಸುಳಿವು ಮತ್ತು ಸಾಕಷ್ಟು ಮಾಹಿತಿ ಸಿಕ್ಕಿದೆ. ಎಲ್ಲಾ ಸಂಪೂರ್ಣವಾದ ವಿವರ ನಾವು ಯಾವುದಾದರೊಂದು statement ಅನ್ನು ಸದನದಲ್ಲಿ ಮಾಡಬೇಕಾದರೆ responsibility ಯಿಂದ ಮಾಡುತ್ತಿದ್ದೇನೆ. ಅದನ್ನು ಬಿಟ್ಟು ಮಾಡುತ್ತಿಲ್ಲ.

ಶ್ರೀ ಆರ್. ಅಶೋಕ್:- ಯಾವ date ಬರೆದಿದ್ದಾರೆಂದು ನೋಡಿ.

ಶ್ರೀ ಕೆ.ಜೆ. ಜಾರ್ಜ್:- ಅದು ಇರಬಹುದು, ಟೈಪಿಂಗ್‌ನಲ್ಲಿ ಆಗಿರಬಹುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಅವರ ಮೇಲೆ ನೀವು ಆಕ್ಷನ್ ತೆಗೆದುಕೊಳ್ಳಿ, ಒಂದು ದಿವಸ ಮುಂಚೆನೆ.

ಶ್ರೀ ಆರ್. ಅಶೋಕ್:- ಇದು ಸದನಕ್ಕೆ ಕೊಡುವ statement.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನಾನು ಟೈಪಿಂಗ್‌ನಲ್ಲಿ ಆಗಿರುವ ಮಿಸ್ಟೇಕ್‌ಗೆ, ಆ ದಿನಾಂಕ ತಿದ್ದಿಕೊಂಡು ನಾನು statement ಮಾಡಿದ್ದೇನೆ. ನಾವು ಯಾವುದೇ ಆತ್ಮಹತ್ಯೆಯನ್ನು ಕೊಲೆ ಎಂದು ಮಾಡುವುದಕ್ಕಾಗುವುದಿಲ್ಲ ಮತ್ತು ಯಾವುದೇ ಕೊಲೆಯನ್ನು ಆತ್ಮಹತ್ಯೆ ಮಾಡುವುದಕ್ಕಾಗುವುದಿಲ್ಲ. ನಾವು ಒಂದು ನಿಷ್ಪಕ್ಷಪಾತವಾದ ತನಿಖೆಯನ್ನು ಮಾಡುತ್ತೇವೆ. ಇವತ್ತು ತಮಗೆ ಗೊತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸೌಜನ್ಯ ಪ್ರಕರಣವನ್ನು ಈಗಾಗಲೇ CBI ಗೆ ಕೊಟ್ಟಿದ್ದೇವೆ. ನಮಗೆ ಯಾವುದೇ ಪ್ರತಿಷ್ಠೆ ಇಲ್ಲ. ನಮಗೆ, ನಮ್ಮ ಪೊಲೀಸ್ ಅಧಿಕಾರಿಗಳಿಗೆ ಇನ್ನೊಂದು 15 ದಿವಸ ಸಮಯ ಕೊಡಿ ನಾವು ಸಂಪೂರ್ಣವಾದ ದಾಖಲೆಯನ್ನು ಈ ಸದನದ ಮುಂದೆ ಇಡುತ್ತೇವೆ. ನಂತರ ತಾವು ಬೇಕಾದರೆ ...

ಶ್ರೀ ಜಗದೀಶ್ ಶೆಟ್ಟರ್:– ಇವರು Prima facie ಆತ್ಮಹತ್ಯೆ ಎಂದು ಇವರು statement ನಲ್ಲಿ. ನಿನ್ನೆ ಪೊಲೀಸ್ ಕಮಿಷನರು ಅದೇ ರೀತಿಯ ಹೇಳಿಕೆ ಅದೇ ಉತ್ತರದಲ್ಲಿ ಬಂದಿದೆ. ಮತ್ತೆ enquiry ಇಲ್ಲ, postmortem report ಏನಿಲ್ಲ. ಪೊಲೀಸ್ ಕಮಿಷನರ್ ಆ ರೀತಿ ಹೇಳಿಕೆ. Home Minister ದ್ದು ಆ ರೀತಿ ಹೇಳಿಕೆ. ಇವತ್ತು D.C.P. ನೇತೃತ್ವದಲ್ಲಿ ಒಂದು ತಂಡ ರಚನೆ ಮಾಡಿದ್ದಾರೆ. ಅವರು ಪೊಲೀಸ್ ಆಯುಕ್ತರು ಕೆಳಗಡೆ ಬರುವಂಥವರು. ಈ ರೀತಿಯ ಒಂದು mind set ಇವರಿಗೆ ಇದ್ದಾಗ ಇದು ನಿಷ್ಪಕ್ಷಪಾತವಾದ ತನಿಖೆ ಹೇಗಾಗುತ್ತದೆ.

ಶ್ರೀ ಕೆ.ಜೆ. ಜಾರ್ಜ್:– DCP ಯವರು ಕೊಟ್ಟ ಮಾಹಿತಿಯ ಮೇಲೆಯೇ ಪೊಲೀಸ್ ಆಯುಕ್ತರು ಹೇಳಿದ್ದಾರೆ. ಅದು ಪೊಲೀಸ್ ಆಯುಕ್ತರವರ ವೈಯಕ್ತಿಕ ವಿಚಾರ ಅಲ್ಲ ಅದು.

ಅಧ್ಯಕ್ಷರು:– ಮಾನ್ಯ ಸಚಿವರು ತನಿಖೆ ನಡೆಯುತ್ತಿದೆ ನಾನು ಮತ್ತೊಂದು ಹೇಳಿಕೆಯನ್ನು ಕೊಡುತ್ತೇನೆಂದು ಹೇಳುತ್ತಿದ್ದಾರೆ. ಅವರು 15 ದಿವಸ ಟೈಮ್ ಕೇಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:– ಅದು ಮುಚ್ಚಿಹಾಕುವಂಥ ಕೆಲಸ.

ಶ್ರೀ ಕೆ.ಜೆ. ಜಾರ್ಜ್:– ನೀವು ಹೇಳಿದಂತೆ ಮಾಡುವುದಕ್ಕಾಗುತ್ತದೆಯೇ?

ಶ್ರೀ ಜಗದೀಶ್ ಶೆಟ್ಟರ್:– DCP ಅವರು Commissioner ರವರ under ದಲ್ಲಿರುವವರು, ಅಲ್ಲಿ ಕೆಲಸ ಮಾಡುವಂಥವರು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– CBI ತನಿಖೆ ಎಂದು ಅವರು ಹೇಳಲಿ.

ಅಧ್ಯಕ್ಷರು:– ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

ಶ್ರೀ ಸಿದ್ದರಾಮಯ್ಯ:– ಅಶೋಕರವರೆ, ನೀವು ಮಾತನಾಡುತ್ತೀರಾ? ಮಾತನಾಡುವಂತೆ ಇದ್ದರೆ ಮಾತನಾಡಿ.

ಶ್ರೀ ಆರ್. ಅಶೋಕ್:- ನೀವು statement ಕೊಡಿ ಎಂದು ಏಕೆ ಹೇಳಿದ್ದು ಎಂದರೆ, ಇವರು ತಪ್ಪು ಮಾಡುತ್ತಾರೆಂದು ಗೃಹ ಇಲಾಖೆಯವರು ತಪ್ಪು ಮಾಡುತ್ತಾರೆ. ಅದಕ್ಕಾಗಿ C.M. ಇಲಾಖೆಯವರಾದರು ಸರಿಯಾಗಿ ಕೆಲಸ ಮಾಡಲಿ ಎಂದು ಹೇಳಿದೆ.

ಶ್ರೀ ಕೆ.ಜೆ. ಜಾರ್ಜ್:- ಟೈಪ್ ಮಾಡಿದ್ದು ತಪ್ಪು ಎಂದು ಹೇಳಿರುತ್ತೇನೆ. ಮತ್ತೆ ಮತ್ತೆ ತಪ್ಪು ಮಾಡಿದ್ದಾರೆಂದು ಹೇಳುತ್ತಾರೆ, ಏನು ತಪ್ಪು ಮಾಡಿದ್ದೇವೆ.

ಶ್ರೀ ಆರ್. ಅಶೋಕ್:- ಸರ್, Flat ಎಂದ ಮೇಲೆ ಸಿಸಿಟಿವಿ ಕ್ಯಾಮರಾ ಇರುತ್ತದೆ. ಇದೆಲ್ಲಾ ಅವರ ಪ್ರಸ್ತಾವನೆಯಲ್ಲಿ ಬರಬೇಕು.

ಶ್ರೀ ಗೋವಿಂದ ಎಂ. ಕಾರಜೋಳ:- ಸರ್ ಒಂದು ನಿಮಿಷ ನನಗೆ ಮಾತನಾಡುವುದಕ್ಕೆ ಕೊಡಿ. ಅವರ ಈ statement ಓದುವುದಕ್ಕೆ ಮುಂಚೆ oral ಆಗಿ ಏನು ಹೇಳಿದರೆಂದರೆ, ರವಿ ಅವರ ಹೆಂಡತಿ flat ಹತ್ತಿರ ಬಂದು ಅವರು ಯಾರದು ಫೋನ್ receive ಮಾಡುತ್ತಿಲ್ಲ. ಡ್ರೈವರ್ ಹೊರಗಡೆ ಕಾಯುತ್ತಿದ್ದಾನೆಂದು ಅವರ ತಂದೆಗೆ ಫೋನ್ ಮಾಡಿದರು ಅವರ ತಂದೆಯವರು flat ಹತ್ತಿರ ಬಂದರು, ಆಮೇಲೆ ಬಾಗಿಲು ಓಪನ್ ಮಾಡಿದರು ಎನ್ನುವ ಒಂದು statement ಮಾಡಿದರು.

ಅಧ್ಯಕ್ಷರು:- ಮಗಳ ಕೈಯಲ್ಲಿ ಇನ್ನೊಂದು ಕೀ ಇತ್ತು.

ಶ್ರೀ ಗೋವಿಂದ ಎಂ. ಕಾರಜೋಳ:- ನೀವು ಕಡತ ತರಿಸಿ ನೋಡಿ. ಈಗ ಈ statement ನಲ್ಲಿ ಹೇಳುತ್ತಿದ್ದಾರೆ. ರವಿ ಅವರ ಮನೆಯಲ್ಲಿ ಇದ್ದರು ಎಂದು. ನೀವು ಎರಡನ್ನು ತರಿಸಿ ನೋಡಿ. ಅವರ ಹೇಳಿಕೆಯಲ್ಲಿ ಇಲ್ಲಿಯೇ ದ್ವಂದ್ವ ನೀತಿ ಇದೆ. ಅವರ ಫೋನ್ ಎತ್ತುತ್ತಿಲ್ಲ flat ಹತ್ತಿರ ಎಂದು ಅವರ ತಂದೆಗೆ ಫೋನ್ ಮಾಡಿದರು ಎಂದು ಮೊದಲು ಹೇಳಿದ್ದಾರೆ. ಅವರ ತಂದೆ flat ಹತ್ತಿರ ಬಂದರು, ಬಂದ ನಂತರ ಓಪನ್ ಮಾಡಿ ನಾವು ಒಳಗಡೆ

ಹೋದರು ಎಂದು ಹೇಳುತ್ತಾರೆ. ಕಡತ ತರಿಸಿ ನೋಡಿ. ನಾನು observe ಮಾಡಿದ್ದೇನೆ. ಕಡತ ತರಿಸಿ ತೀರ್ಮಾನ ಮಾಡಿ, ಅದಕ್ಕೂ ಇದಕ್ಕೂ ಏನು ಸಂಬಂಧವಿಲ್ಲ. ಈ statement ಗೂ ಅವರು oral ಆಗಿ ಹೇಳಿರುವುದಕ್ಕೂ ಏನು ಸಂಬಂಧವಿಲ್ಲ. ಎರಡು ದ್ವಂದ್ವ ಇದೆ. ಕಾನೂನಿನೊಳಗಡೆ ಸಂಶಯಕ್ಕೆ ವ್ಯಕ್ತವಾದಂಥ ..

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ಇದರಲ್ಲಿ ಯಾವುದೆ ಸಂಶಯಕ್ಕೆ ಅವಕಾಶವಿಲ್ಲ. Written statement ಮಾಡಿದ್ದೇನೆ. ಆ Statement ಪ್ರಕಾರ.

ಅಧ್ಯಕ್ಷರು:– ನನಗೂ ಕೂಡ ಇದು ಸಂಶಯ ಹೇಗೆ ಬರುತ್ತದೆಂದರೆ, ಮಾನ್ಯ ಮುಖ್ಯಮಂತ್ರಿಗಳೆ, ಇಲ್ಲಿ ಒಂದು ನಿಮಿಷ ತಾಳಿ. "ದಿನಾಂಕ: 16.3.2015 ರಂದು ತನ್ನ ಮಗಳು ಮನೆಯಲ್ಲಿ ತನ್ನ ಬಳಿ ಬಂದು ರವಿ ಯಾರ ಫೋನ್ ಸ್ವೀಕರಿಸುತ್ತಿಲ್ಲ". ಅವಳು ಮನೆಗೆ ಹೋಗುವುದು ಬಿಟ್ಟು ಅಪ್ಪನ ಮನೆಗೆ ಏಕೆ ಹೋದಳು.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ನಮಗೆ ಇರುವ ಮಾಹಿತಿಯ ಪ್ರಕಾರ ಇವರು ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದಾರೆ. ಈಗ ಎಲ್ಲಿ ಅವರ ಸಾವಾಗಿದೆಯಲ್ಲಾ ಅಲ್ಲಿ ಇದ್ದಾರೆ. ಹನುಮಂತರಾಯಪ್ಪ ಎನ್ನುವವರು ನಮ್ಮ ಪಾರ್ಟಿಯಲ್ಲಿಯೇ ಇದ್ದರು. ಅವರ ಮಗಳು ಕುಸುಮ. ಅವರ ಅಳಿಯ ರವಿ. ಹನುಮಂತರಾಯಪ್ಪರವರು ಜೆಡಿಎಸ್‌ನಲ್ಲಿದ್ದರು. ಕಳೆದ ಚುನಾವಣೆಯಲ್ಲಿ election ಗೆ ನಿಂತಿದ್ದರು. Parliament election ನಲ್ಲಿ ನಮ್ಮ ಜೊತೆ ಬಂದಿದ್ದರು. ಜೆಡಿಎಸ್‌ನಿಂದ ಟಿಕೆಟ್ ಕೊಟ್ಟಿದ್ದರು election ಗೆ ನಿಂತಿದ್ದರು. ಅವರ ಅಳಿಯ ರವಿ. ಅಳಿಯ ರವಿ, ಮಗಳು ಸುಸುಮ ಅವರಿಬ್ಬರು ಶನಿವಾರ, ಭಾನುವಾರ ಹನುಮಂತರಾಯಪ್ಪರವರ ಮನೆಗೆ ಹೋಗುತ್ತಿದ್ದರು. ಶನಿವಾರ, ಭಾನುವಾರ ಅಲ್ಲಿಯೇ ಇದ್ದರು. ರವಿ ಬೆಳಿಗ್ಗೆ 10.45 ಗಂಟೆಗೆ ಹನುಮಂತರಾಯಪ್ಪರವರ ಮನೆಯಿಂದ ಆಫೀಸ್‌ಗೆ ಹೋಗಿದ್ದಾರೆ.

ಅಧ್ಯಕ್ಷರು:- ಹನುಮಂತರಾಯಪ್ಪರವರ ಮನೆಯಿಂದಲೇ ಹೋಗಿದ್ದಾರಾ?

ಶ್ರೀ ಸಿದ್ದರಾಮಯ್ಯ:- ಹೌದು. ಅಲ್ಲಿಂದ ನಿನ್ನೆ ಸೋಮವಾರ ಬೆಳಿಗ್ಗೆ ಆಫೀಸ್‌ಗೆ ಹೋಗಿರುವುದು. ಆಫೀಸ್‌ನಲ್ಲಿ ಸ್ವಲ್ಪ ಹೊತ್ತು ಇದ್ದು ಮನೆಗೆ ಬಂದಿದ್ದಾರೆ. ಮನೆಗೆ ಅಂದರೆ ಆ ಫ್ಲಾಟ್‌ಗೆ. ಹನುಮಂತರಾಯಪ್ಪರವರ ಮನೆಗೆ ಅಲ್ಲ. ಅವರು ವಾಸವಿದ್ದಂತಹ ಫ್ಲಾಟ್‌ಗೆ ಬಂದಿದ್ದಾರೆ. ಅಲ್ಲಿಗೆ ಬೆಳಿಗ್ಗೆ 11.45 ಗಂಟೆಗೆ ಬಂದಿದ್ದಾರೆ. ಹನುಮಂತರಾಯಪ್ಪರವರು 7.45 ಗಂಟೆಗೆ ಒಂದು compliant ಕೊಟ್ಟಿದ್ದಾರೆ. ಆ complaint ನಲ್ಲಿ ನೀವು ಏನು ವ್ಯಕ್ತಪಡಿಸಿದ್ದೀರಲ್ಲಾ ಅದನ್ನು ಅವರು ಹೇಳಿರುವುದು. ನನ್ನ ಮಗಳು ಮನೆಗೆ ಬಂದು ನಾನು ಫೋನ್ ಮಾಡಿದ್ದೆ ರವಿ ಫೋನ್ ಎತ್ತುತ್ತಿಲ್ಲ ಎಂದು ಹೇಳಿದಳು. ಡ್ರೈವರ್ ಅಪಾರ್ಟ್‌ಮೆಂಟ್ ಇದೆಯಲ್ಲಾ ಅಲ್ಲಿಯೇ ಇದ್ದಾನೆ. ಆ ಡ್ರೈವರ್‌ಗೆ ಕುಸುಮಾರವರು ಫೋನ್ ಮಾಡಿದ್ದಾರೆ. ಆ ಡ್ರೈವರ್ ಏನು ಹೇಳಿದ್ದಾರೆ ಎಂದರೆ, ಬೆಳಿಗ್ಗೆ 11.45 ಗಂಟೆಗೆ ರೂಮ್‌ಗೆ ಹೋದವರು ಅಲ್ಲಿಂದ ನಮಗೆ ಏನೂ ಮಾಹಿತಿ ಸಿಗುತ್ತಿಲ್ಲ ಎಂದು ಹೇಳಿದ್ದಾನೆ. ಅದನ್ನು ಕುಸುಮಾರವರು ತಮ್ಮ ತಂದೆಗೆ ಹೇಳಿದ್ದಾರೆ. ಆಗ ಹನುಮಂತರಾಯಪ್ಪರವರು ಹಾಗೂ ಅವರ ಮಗಳು ಇಬ್ಬರೂ 6.45 ಗಂಟೆಗೆ ಅಪಾರ್ಟ್‌ಮೆಂಟ್‌ಗೆ ಬರುತ್ತಾರೆ. ಕುಸುಮಾರವರ ಹತ್ತಿರ ಇನ್ನೊಂದು ಕೀ ಇರುತ್ತದೆ ಅದರಿಂದ ಬಾಗಿಲು ತೆಗೆದು ಇಬ್ಬರೂ ಒಟ್ಟಿಗೆ ಒಳಗೆ ಹೋದಾಗ ರವಿಯವರು ನೇಣು ಹಾಕಿಕೊಂಡಿರುವ ದೃಶ್ಯ ಕಾಣಿಸುತ್ತದೆ. ಇದು ಹನುಮಂತರಾಯಪ್ಪರವರು ಪೊಲೀಸ್‌ನವರಿಗೆ ಕೊಟ್ಟಿರುವ complaint ನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಒಕ್ಕಣೆಯನ್ನು ಅವರು ಹೇಳಿದರು. ನಿಮಗೆ ಸಂಶಯ ಎಂದು ಹೇಳಿದರಲ್ಲಾ ಇದು. ಕುಸುಮಾ, ಮಗಳು ಅಪ್ಪನಿಗೆ ಈ ರೀತಿ ರವಿಗೆ ಫೋನ್ ಮಾಡಿದ್ದೆ. ಅವರು ಫೋನ್ ಎತ್ತುತ್ತಿಲ್ಲ. ಡ್ರೈವರ್‌ಗೆ ಫೋನ್ ಮಾಡಿದ್ದೆ ಅವರು ಈ ರೀತಿ ಉತ್ತರ ಕೊಟ್ಟರು ಎಂದು ಹೇಳಿರುವುದು.

ಅಧ್ಯಕ್ಷರು:- ಫೋನ್ ಎತ್ತಲಿಲ್ಲವೆಂದರೆ ಕುಸುಮಾರವರು ಅಲ್ಲಿ ಹತ್ತಿರವಿದ್ದ ಮನೆಗೆ ಏಕೆ ಹೋಗಲಿಲ್ಲ?

ಶ್ರೀ ಸಿದ್ಧರಾಮಯ್ಯ:- ಬೇರೆ ಬೇರೆ ಕಡೆ ಇರುವುದು. ಹನುಮಂತರಾಯಪ್ಪರವರು ನಾಗರಬಾವಿಯಲ್ಲಿರುವುದು. ರವಿಯವರು ಕೋರಮಂಗಲದ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು ಹತ್ತಿರ ಇರುವುದು. ಅಲ್ಲಿಗೂ ಇಲ್ಲಿಗೂ ಬಹಳ ದೂರ ಇದೆ. ಮಾನ್ಯ ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದಂತೆ ರವಿಯವರು ಒಬ್ಬ ಒಳ್ಳೆಯ ಅಧಿಕಾರಿ ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ದಕ್ಷ ಅಧಿಕಾರಿ, ಪ್ರಾಮಾಣಿಕ ಅಧಿಕಾರಿ. ಆ ಕಾರಣಕ್ಕೋಸ್ಕರ ನಾನು, ಅವರು ಕೋಲಾರದಲ್ಲಿ ಡಿ.ಸಿ ಯಾಗಿದ್ದರು. ಅವರ ಮಾವ ಹನುಮಂತರಾಯಪ್ಪರವರು ಬಂದು ನನ್ನನ್ನು ಭೇಟಿ ಮಾಡಿದರು. ನನ್ನ ಅಳಿಯನಿಗೆ ಬೆಂಗಳೂರಿನಲ್ಲಿರುವುದಕ್ಕೆ ಜಾಗ ಕೊಡಿ ಎಂದು ಕೇಳಿದರು. ನಮ್ಮಲ್ಲಿ enforcement ಖಾಲಿ ಇದ್ದವು. Commercial Tax ನಲ್ಲಿ enforcement is a very very important post. ರವಿಯವರು ದಕ್ಷ ಅಧಿಕಾರಿ, ಪ್ರಾಮಾಣಿಕ ಅಧಿಕಾರಿಗಳಾಗಿದ್ದಾರೆ, ಇಲ್ಲಿ ಕೆಲಸ ಮಾಡಲಿ ಎಂದು Commercial Tax ನಲ್ಲಿ enforcement ಗೆ Additional Commissioner ಆಗಿ post ಮಾಡಿದೆ. ಕಳೆದ ನಾಲ್ಕು ತಿಂಗಳಿನಿಂದ ಇಲ್ಲಿ ಕೆಲಸ ಮಾಡುತ್ತಿದ್ದರು. ಒಳ್ಳೆಯ ಕೆಲಸ ಮಾಡುತ್ತಿದ್ದರು. ನಾನೂ ಒಂದೆರಡು ಬಾರಿ review ಮಾಡಿದಾಗ ಅವರು ಏನೇನು ಮಾಡಿದ್ದೇನೆ ಎನ್ನುವ ಮಾಹಿತಿಯನ್ನೂ ಕೊಟ್ಟಿದ್ದರು. ಒಳ್ಳೆಯ ಕೆಲಸ ಮಾಡುತ್ತಿದ್ದರು. Suppression of tax ಯಾವ್ಯಾವು ಇದ್ದವು, tax ಅನ್ನು ಕಟ್ಟದೇ ಇರುವವರನ್ನು ಪತ್ತೆಹಚ್ಚುವಂತಹ ಪ್ರಯತ್ನ ಮಾಡುತ್ತಿದ್ದರು. As Kolar D.C ಅಲ್ಲಿಯೂ ಕೂಡ ಒಳ್ಳೆಯ ಕೆಲಸವನ್ನು ಮಾಡಿದ್ದರು, ಹಾಗಾಗಿ ಇವತ್ತು ಕೋಲಾರದಲ್ಲಿ ಅವರಿಗೆ ಇಷ್ಟು ಜನಪ್ರಿಯತೆ ಬಂದಿದ್ದರೆ ಅವರು ಒಳ್ಳೆಯ ಕೆಲಸವನ್ನು ಮಾಡಿದ್ದರು ಎನ್ನುವ ಕಾರಣಕ್ಕೋಸ್ಕರವೇ ಜನಪ್ರಿಯತೆ ಬಂದಿರುವುದು. Commercial Tax ನಲ್ಲಿಯೂ ಬಹಳ ಉತ್ತಮವಾಗಿ ಕೆಲಸವನ್ನು ನಿರ್ವಹಿಸುತ್ತಿದ್ದರು. ಈ ಸಾವು ಇದೆಯಲ್ಲಾ, ಈ ರೀತಿ ಹೇಗೆ ಆಯಿತು ಎಂದು ನಮಗೂ ಕೂಡ ದಿಗ್ಭ್ರಾಂತಿಯನ್ನುಂಟು ಮಾಡಿದೆ. ಒಬ್ಬ ದಕ್ಷ, ಪ್ರಾಮಾಣಿಕ ಅಧಿಕಾರಿ ಈ ರೀತಿ ಸಾವನ್ನಪ್ಪಿದ್ದಾರಲ್ಲಾ ಎನ್ನುವ ನೋವು ನಮಗೂ ಇದೆ. ನಿಮಗೆ ಎಷ್ಟು

ನೋವಿದೆ, ಅಷ್ಟೇ ಪ್ರಮಾಣದಲ್ಲಿ ನಮಗೂ ಕೂಡ ನೋವಿದೆ. ಒಬ್ಬ ಒಳ್ಳೆಯ ಅಧಿಕಾರಿಯ ಸಾವಿನಿಂದ ಇವತ್ತು ರಾಜ್ಯ ಸರ್ಕಾರಕ್ಕೆ ಅನ್ಯಾಯ ಆಯಿತು, ತೊಂದರೆಯಾಯಿತು ಎನ್ನುವುದು ಇದೆ. ಪೊಲೀಸ್‌ನವರು ಕೊಟ್ಟಂತಹ ಕೆಲವು information ಆಧಾರದ ಮೇಲೆ, Forensic Science ನವರೂ (FSL) ಕೂಡ ಅಲ್ಲಿ ಹೋಗಿದ್ದಾರೆ. Finger Print ನವರು ಹೋಗಿದ್ದಾರೆ. ಅವರೆಲ್ಲರೂ ಕೂಡ ಕೆಲವು information ಅನ್ನು ಶೇಖರಣೆ ಮಾಡಿ ಆ information ಅನ್ನು ಪೊಲೀಸ್‌ರವರು ಹಾಗೂ FSL ತಂಡದವರು ಕೊಟ್ಟ ಮೇಲೆ ಪೊಲೀಸ್ ಕಮೀಷನರ್‌ರವರು ಮೇಲ್ನೋಟಕ್ಕೆ ಇದು ಆತ್ಮಹತ್ಯೆ ಎಂದು ಹೇಳಿದರು. ಅವರು ಕೊಟ್ಟಿರುವಂತಹ ಮಾಹಿತಿಗಳ ಆಧಾರದ ಮೇಲೆ ಹೇಳಿರುವಂಥದ್ದು. ಇದು ಇನ್ನೂ ಕೂಲಂಕಷವಾಗಿ ತನಿಖೆ ಆಗಬೇಕು. ನಿಷ್ಪಕ್ಷಪಾತವಾಗಿ ತನಿಖೆ ಮಾಡಬೇಕು.

ಅಧ್ಯಕ್ಷರು:– ತಮ್ಮ ಮಾತಿನಿಂದ, ಎಲ್ಲರ ಮಾತಿನಿಂದ ಒಬ್ಬ ನಿಷ್ಪಕ್ಷಪಾತ ಅಧಿಕಾರಿ ಎನ್ನುವುದು ಗೊತ್ತಾಗಿದೆ.

ಶ್ರೀ ಸಿದ್ದರಾಮಯ್ಯ:– ನಾನೂ ಕೂಡ ಒಪ್ಪಿಕೊಳ್ಳುತ್ತಿದ್ದೇನಲ್ಲಾ.

ಅಧ್ಯಕ್ಷರು:– ಮಾವನ ಬೇಡಿಕೆ ಪ್ರಕಾರ ಅವರನ್ನು ಬೆಂಗಳೂರಿಗೆ ವರ್ಗ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ:– ಬೆಂಗಳೂರಿಗೆ ಬೇಕು ಎಂದು ಹೇಳಿದರು ಅದಕ್ಕೆ ಅಲ್ಲಿಗೆ ಹಾಕಿದೆ.

ಅಧ್ಯಕ್ಷರು:– ಅವರು ಆತ್ಮಹತ್ಯೆ ಮಾಡಿಕೊಳ್ಳಬೇಕಾದರೆ ಹಿಂದೆ ಏನಾದರೂ ಕಾರಣ ಇರಬೇಕಲ್ಲಾ?

ಶ್ರೀ ಸಿದ್ದರಾಮಯ್ಯ:– ಅದಕ್ಕೆ ತನಿಖೆ ಆಗಬೇಕಲ್ಲವೇ ಮಾನ್ಯ ಅಧ್ಯಕ್ಷರೆ?

ಅಧ್ಯಕ್ಷರು:– ಮಾನ್ಯ ರಾಜೀವ್‌ರವರೂ ಕೂಡ ಹೇಳಿದರು.

ಶ್ರೀ ಸಿದ್ದರಾಮಯ್ಯ:- ಮಾನ್ಯ ರಾಜೀವ್‌ರವರು ಒಬ್ಬರು ಪೊಲೀಸ್ ಆಫೀಸರ್ ಆಗಿದ್ದರಿಂದ ಪೊಲೀಸ್, investigation ಇವುಗಳ ಬಗ್ಗೆ ಜ್ಞಾನ ಇರುವುದರಿಂದ ಆ ಮಾತುಗಳನ್ನು ಹೇಳಿದ್ದಾರೆ. Correct. ನೀವು ಹೇಳುವುದೆಲ್ಲಾ correct ಆಗಿತ್ತು. ನೀವು ಹೇಳಿದ್ದನ್ನೆಲ್ಲಾ ನಾನು ಕೇಳಿದೆ. ಅದಕ್ಕೆ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಯೇ ಅಥವಾ ಏನಾದರೂ ಬೇರೆ ಕಾರಣದಿಂದ ಸತ್ತಿದ್ದಾರಾ, ಕೊಲೆಯಾಗಿದೆಯಾ ಎನ್ನುವುದು ಗೊತ್ತಾಗಬೇಕಲ್ಲಾ. ಅದಕ್ಕೋಸ್ಕರವಾಗಿ ನಿಷ್ಪಕ್ಷಪಾತವಾಗಿ ತನಿಖೆಯಾಗಬೇಕು. ಸರ್ಕಾರಕ್ಕೂ ಕೂಡ ಕಾಳಜಿ ಇದೆ. ಈ ರಾಜ್ಯದ ಜನತೆಗೆ ಸತ್ಯ ಗೊತ್ತಾಗಬೇಕು. ಈ ಸದನಕ್ಕೆ ಗೊತ್ತಾಗಬೇಕು. ನಮ್ಮ ಪೊಲೀಸ್ ಆಫೀಸರ್‌ಗಳೂ ಸಹ ದಕ್ಷತೆಯಿಂದ ಕೆಲಸ ಮಾಡುತ್ತಾರೆ. ಮಾಡುವುದಿಲ್ಲ ಎಂದು ಹೇಳುವುದಿಲ್ಲ. ಅವರೂ ಒಪ್ಪಿಕೊಳ್ಳುತ್ತಾರೆ. ಮಾನ್ಯ ಅಶೋಕರವರು ಗೃಹ ಸಚಿವರಾಗಿದ್ದವರು ಅವರೂ ಕೂಡ ಅವರ ಮಾತಿನಲ್ಲಿ ಒಪ್ಪಿಕೊಂಡಿದ್ದಾರೆ. ಮಾನ್ಯ ಅಶೋಕರವರೆ ತಾವು ಒಪ್ಪಿಕೊಂಡಿಲ್ಲವೇ? ಹಾಗಾದರೆ ಹೇಗೆ ನೀವು ಅಷ್ಟು ದಿವಸಗಳ ಕಾಲ ಗೃಹ ಸಚಿವರಾಗಿದ್ದೀರಿ? ಯಾವತ್ತೂ ಒಪ್ಪಲಿಲ್ಲವೇ? ಈಗ ಅಲ್ಲ. ಇವರು ಗೃಹ ಇಲಾಖೆಯ ಸಚಿವರಾಗಿದ್ದವರು ಒಪ್ಪುವುದಿಲ್ಲವೆಂದರೆ ಹೇಗೆ? ಆ ಕಡೆ ಹೋದಮೇಲೆ ಒಪ್ಪಿಕೊಳ್ಳುತ್ತಿಲ್ಲವೋ, ಮೊದಲು ಒಪ್ಪಿಕೊಳ್ಳುತ್ತಿದ್ದರೋ?

ಶ್ರೀ ಆರ್. ಅಶೋಕ್:- ಆನಂತರ ಹೇಳುತ್ತೇನೆ.

ಅಧ್ಯಕ್ಷರು:- ಮೇಲ್ನೋಟಕ್ಕೆ ಹೇಳಿದ್ದೀರಿ. Subject to the further investigation ಎನ್ನುವ ಒಂದು ಶಬ್ದ ನೀವು ಹಾಕಿದ್ದರೆ . . .

ಶ್ರೀ ಆರ್. ಅಶೋಕ್:- ಆ ಶಬ್ದ ಹಾಕಿದ್ದರೆ ಈ ಪ್ರಶ್ನೆಯೇ ಬರುತ್ತಿರಲಿಲ್ಲ. ಸಾರ್ ಮೇಲ್ನೋಟಕ್ಕೆ ಕಾಣಿಸುತ್ತದೆ. Post Mortem report ಬರುವುದು ಇನ್ನೂ ಮೂರು ದಿನಗಳು ಆಗುತ್ತದೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಶೋಕ್‌ರವರೆ ಬಹಳಷ್ಟು information ಗಳನ್ನು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಪೊಲೀಸರು ಬಹಳಷ್ಟು information ಈಗ ಏನೇನು collect ಮಾಡಿದ್ದಾರೆ, ನಮಗೇನು

information ಹೇಳಿದ್ದಾರೆ ಅವುಗಳನ್ನೆಲ್ಲಾ ಇಲ್ಲಿ ಹೇಳುವುದಕ್ಕಾಗುವುದಿಲ್ಲ. Investigation ಪ್ರಾರಂಭ ಆಗಿರುವುದರಿಂದ ಕೆಲವು information ಗಳನ್ನು ಹಾಗೆಯೇ ಇಡಬೇಕಾಗುತ್ತದೆ. ಅದಕ್ಕೆ ಅವರು ಹೇಳಿದ್ದು, ಕೆಲವು ದಿನಗಳು ಕಳೆಯಲಿ, ಅವೆಲ್ಲಾ ಗೊತ್ತಾದ ಮೇಲೆ ಇವರ ಸಾವಿಗೆ ಯಾವ ಕಾರಣ ಇರಬಹುದು ಎನ್ನುವುದು ಗೊತ್ತಾಗುತ್ತದೆ. ಅದನ್ನು ಸದನಕ್ಕೆ ತಿಳಿಸುವಂತಹ ಕೆಲಸ ಮಾಡುತ್ತೇವೆ. ಅದಕ್ಕೋಸ್ಕರವಾಗಿ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ, ಈ ಸಾವಿನ ತನಿಖೆಯನ್ನು CID ಮೂಲಕ ಮಾಡಿಸುತ್ತೇವೆ. ದಕ್ಷ ಅಧಿಕಾರಿಗಳ ಮೂಲಕ ಮಾಡಿಸುತ್ತೇವೆ. ಸತ್ಯವನ್ನು ಹೊರಗಡೆ ತರುವಂತಹ ಕೆಲಸ ಮಾಡುತ್ತೇವೆ.

(ಗೊಂದಲ)

ಶ್ರೀ ಸಿ.ಟಿ. ರವಿ:– ಯಾರೋ ಕಿತ್ತುಹೋಗಿರುವವರನ್ನು ತೆಗೆದುಕೊಂಡು ಬಂದು COD ಗೆ ಹಾಕುತ್ತೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನಿಷ್ಪಕ್ಷಪಾತವಾಗಿ ಮಾಡುತ್ತೇವೆ. ನಮ್ಮ ಮೇಲೆ ವಿಶ್ವಾಸ ಇಡಬೇಕು. ಪೊಲೀಸರ ಮೇಲೆ ವಿಶ್ವಾಸ ಇಡಬೇಕು... (ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಈ ಬಗ್ಗೆ ನಾನು ಏನು ಹೇಳುತ್ತೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಇದೇ ತರಹ ಉತ್ತರ ಕೊಡುತ್ತಾರೆಂದು ನಮಗೆ ಗೊತ್ತಿತ್ತು. ಅಂದರೆ ಈ ಪ್ರಕರಣವನ್ನು ಎಷ್ಟು ಗಂಭೀರತೆಯಿಂದ ತೆಗೆದುಕೊಂಡಿದ್ದಾರೆಂದು ನಮಗೆ ಅರ್ಥವಾಗುತ್ತದೆ. ಸದನದಲ್ಲಿ ಮಾನ್ಯ ಗೃಹಮಂತ್ರಿಗಳು ಯಾವ ರೀತಿಯಾಗಿ ಉತ್ತರ ಕೊಟ್ಟರು. ನಿನ್ನೆ ದಿನ ಪೊಲೀಸ್ ಆಯುಕ್ತರವರು conclusion ಗೆ ಬಂದು ಬಿಟ್ಟಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರೆ ಅದು ಏನೆಂದರೆ Forensic Science ಮತ್ತೊಂದು ......

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಜಗದೀಶ್ ಶೆಟ್ಟರ್‌ರವರೆ ತಾವು ಒಂದು ನಿಮಿಷ ತಾಳಿ ನಾನು point ನ ಬಗ್ಗೆ ಅವರಲ್ಲಿ ಕೇಳುತ್ತೇನೆ.

ಮೇಲ್ನೋಟಕ್ಕೆ ಆತ್ಮಹತ್ಯೆ ಎನ್ನುವಂತಹದ್ದು ಕಾಣುತ್ತದೆ ಎಂದು ಪೋಲೀಸ್ ಕಮೀಷನರ್‌ರವರು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಇದನ್ನು ನಾವು ಹೇಳುತ್ತಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಇದನ್ನು ನೀವು ಹೇಳುತ್ತಿಲ್ಲ. ನಿನ್ನೆಯ ದಿನ ಪೋಲೀಸ್ ಕಮೀಷನರ್‌ರವರು ಹೇಳಿದ್ದಾರೆ. ಅದನ್ನೇ ನೀವು ಹೇಳಿದ್ದೀರಿ. ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕೆಲವು ವೈಯುಕ್ತಿಕವಾದ ಕಾರಣಗಳು ಏನು ಎಂಬುದರ ಬಗ್ಗೆ ಸುಳಿವು ಸಿಕ್ಕಿದೆ ಎಂದು ಹೇಳಿದ್ದೀರಿ. ಈ ಬಗ್ಗೆ ಆಮೇಲೆ ಹೇಳೋಣ. ನಾನು ಸರ್ಕಾರಕ್ಕೆ ಒಂದು ಪಾಯಿಂಟ್ ಕೇಳುತ್ತೇನೆ. ನಾನು ನಿನ್ನೆಯ ದಿನ ಆ spot ಗೆ ಅಂದರೆ flat ಗೆ ರಾತ್ರಿ 12.00 ಗಂಟೆಗೆ ಆತ್ಮಹತ್ಯೆ ಮಾಡಿಕೊಂಡಿರುವ ರೂಮು ಏನಿದೆ ಆ ರೂಮಿನ ಒಳಗೆ ಹೋಗಿದ್ದೆ. ಅವರು ಫ್ಯಾನ್‌ಗೆ ಬಟ್ಟೆಯಲ್ಲಿ ನೇಣುಹಾಕಿಕೊಂಡಿದ್ದರು ಎನ್ನುವುದು ಈಗ ಇರುವಂತಹ ಮಾಹಿತಿಯಾಗಿದೆ. ಅಲ್ಲಿಗೆ ಹೋದಾಗ ಮಾನ್ಯ ಅಧ್ಯಕ್ಷರೆ, ನಾನು ಆ ಫ್ಯಾನನ್ನೆ observe ಮಾಡಿದೆ. ಅವರು ಆ ಫ್ಯಾನ್‌ಗೆ ಬಟ್ಟೆ ಹಾಕಿಕೊಂಡು ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರೆ ಆ ಫ್ಯಾನ್ damage ಆಗಿರಬೇಕಲ್ಲವೇ? ಆ ಫ್ಯಾನ್ ಕುಸಿದು ಹೋಗಬೇಕಾಗಿಲ್ಲ. ಅದು ಸ್ವಲ್ಪ ಬೆಂಡಾಗಿರಬೇಕಲ್ಲಾ? ನಾನು ನಿನ್ನೆಯ ದಿನ ಆ ಫ್ಯಾನ್ ಅನ್ನು observe ಮಾಡಿದಾಗ ಆ ಫ್ಯಾನ್‌ನಲ್ಲಿ ಒಂದು ಸಣ್ಣ damage ಆಗಿರುವುದಿಲ್ಲ, ಅದು ಬೆಂಡಾಗಿರುವುದಿಲ್ಲ. ಹೊರಗಡೆ ಇರುವ ಫ್ಯಾನ್ ಯಾವ ತರಹ ಇದೆ, ಅದೇ condition ನಲ್ಲಿ ಆ ಫ್ಯಾನ್ ಇದೆ. ಇದನ್ನು ನಾನು ಕಣ್ಣಾರೆ ನೋಡಿಕೊಂಡು ಬಂದಿದ್ದೇನೆ. ಅವರು ಆ ಫ್ಯಾನ್‌ಗೆ ನೇಣುಹಾಕಿಕೊಂಡಿದ್ದರೆ ಈ ಬಗ್ಗೆ ದಯವಿಟ್ಟು ನಮ್ಮ ಅಧಿಕಾರಿಗಳು ಅದನ್ನು ಗಮನಿಸಿದ್ದಾರೆಯೇ? ಆ ಬಗ್ಗೆ ಸರ್ಕಾರಕ್ಕೆ ಮಾಹಿತಿ ಕೊಟ್ಟಿದ್ದಾರೆಯೇ. ಅಲ್ಲಿ ಒಂದುಚೂರು damage ಆಗಿರುವುದಿಲ್ಲ. ಆ ವ್ಯಕ್ತಿ ಫ್ಯಾನ್‌ಗೆ ನೇಣುಹಾಕಿಕೊಂಡಿದ್ದರೆ ಫ್ಯಾನ್ ಆ weight ಗೆ ಸ್ವಲ್ಪವಾದರೂ ಬೆಂಡಾಗಬೇಕು. ಅಲ್ಲಿ ಏನೇನು ಆಗಿರುವುದಿಲ್ಲ. ಅದು ಹೊಸ ಫ್ಯಾನ್ ಇದ್ದಹಾಗೆ ಇದೆ. ಆಮೇಲೆ ಅವರು ಅಲ್ಲಿಗೆ ಹೊಸದಾಗಿ shift ಮಾಡುತ್ತಿದ್ದರು

ಅಲ್ಲಿಗೆ ಇನ್ನು ವಾಸಕ್ಕೆ ಹೋಗಿರಲಿಲ್ಲ. ಕಳೆದ ಮೂರು ದಿವಸಗಳ ಹಿಂದೆ ಅಲ್ಲಿಗೆ ಹೊಸದಾಗಿ shift ಮಾಡುತ್ತಿದ್ದಾರೆ. ಅವರು ಅಲ್ಲಿ ಇನ್ನು ವಾಸಕ್ಕೆ ಹೋಗಿರಲಿಲ್ಲ. ಅವರು ಮಾವನ ಮನೆಯಲ್ಲಿಯೇ ವಾಸವಿದ್ದರು. ಅಲ್ಲಿ ಪ್ರಶ್ನೆ ಏನಾಯಿತೆಂದರೆ, ಅವರ ತಂದೆತಾಯಿಗಳನ್ನು ಇಲ್ಲಿಗೆ ಕರೆದುಕೊಂಡು ಬರಬೇಕು ಅವರ ಮಾವನ ಮನೆಗೆ ಕರೆದುಕೊಂಡು ಬರುವುದಕ್ಕಾಗುವುದಿಲ್ಲವೆಂದು ಹೇಳಿ ಈ ಅಧಿಕಾರಿಯೂ ಹೊಸ flat ಗೆ ಹೋಗುವುದಕ್ಕೆ ಈಗ ಅಲ್ಲಿಗೆ ಸಾಮಾನುಗಳನ್ನು shift ಮಾಡುತ್ತಿದ್ದಾರೆ. ಅಲ್ಲಿ ಇನ್ನು ಏನು arrangement ಆಗಿರುವುದಿಲ್ಲ. ಇಲ್ಲಿರುವಂತಹ ಸಂಶಯಗಳು ಬೆಳಿಗ್ಗೆ 11.00 ಗಂಟೆಗೆ ಕಛೇರಿಗೆ ಹೋಗಿ 10 ನಿಮಿಷಕ್ಕೆ ಅಲ್ಲಿಂದ ಇಲ್ಲಿಗೆ ಬಂದು ಏಕೆಂದರೆ ಆ ಅಧಿಕಾರಿಯೂ ದಿನಕ್ಕೆ 10 ರಿಂದ 15 ಗಂಟೆಗಳ ಕಾಲ ಕೆಲಸ ಮಾಡುವುದಕ್ಕೆ ಸಮಯ ಸಾಕಾಗುವುದಿಲ್ಲ ಎನ್ನುವಂತಹ ಅಧಿಕಾರಿಯಾಗಿದ್ದಾರೆ. 10 ನಿಮಿಷಕ್ಕೆ ಕಛೇರಿಯಿಂದ ಇಲ್ಲಿಗೆ ಏತಕ್ಕಾಗಿ ಬಂದರು ಎನ್ನುವಂತಹ ಸಂಶಯ ಇದೆ. ಅವರ ಅಧಿಕಾರಿಗಳು ಅಂದರೆ ಅವರ colleagues ಹೇಳುವ ಪ್ರಕಾರ ಇವತ್ತು ದೊಡ್ಡದೊಡ್ಡ ಮಟ್ಟದಲ್ಲಿ ಒಂದು ತನಿಖೆ ಮಾಡುವುದಕ್ಕೆ ದಾಳಿ ಮಾಡುವುದಕ್ಕೆ plan ಹಾಕಿದ್ದರು. ಇವತ್ತು ಎಲ್ಲಾ plan ಹಾಕಿಕೊಂಡಿದ್ದಂತಹ ಅಧಿಕಾರಿ ನಿನ್ನೆಯ ದಿನ ಇದ್ದಕಿದ್ದಹಾಗೆ ನೇಣುಹಾಕಿಕೊಳ್ಳುತ್ತಾರೆಂದರೆ ಇಲ್ಲಿ ಹಲವಾರು ಸಂಶಯಗಳು ಇದೆ. ಈ ಬಗ್ಗೆ COD ಯಿಂದ ಯಾವ ಕಾರಣಕ್ಕೂ ನೀವು ಸತ್ಯಾಂಶವನ್ನು ಹೊರಗೆ ತರುವುದಿಲ್ಲ ಇದನ್ನು ಸಹ ತಾವು ಮುಚ್ಚಿಹಾಕುತ್ತೀರಿ. ಅದಕ್ಕಾಗಿಯೇ ನಾವು ಈ ಬಗ್ಗೆ CBI ಗೆ ಕೊಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹಸಚಿವರು):- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಕುಮಾರಸ್ವಾಮಿಯವರು ಫ್ಯಾನ್ ಬೆಂಡಾಗಿಲ್ಲ ಎಂದು ಹೇಳುತ್ತಿದ್ದಾರೆ. ಅವರ ಮಗಳು ಮತ್ತು ಮಾವ ಇಬ್ಬರು ಹೋಗುವಾಗಲೂ ಬಾಡಿಯೂ ಫ್ಯಾನ್‌ನಲ್ಲಿಯೇ ಇತ್ತು. ನಮ್ಮ ಅಧಿಕಾರಿಗಳು ಸಹ ಅಲ್ಲಿಗೆ ಹೋದಾಗಲೂ ಆ ಬಾಡಿಯೂ ಫ್ಯಾನ್‌ನಲ್ಲಿಯೇ ಇತ್ತು. ಅವರು ಕೇಳಿರುವಂತಹ ಎಲ್ಲಾ ಸಂಶಯಕ್ಕೂ ಸಮೇತ ಅದನ್ನು ನಿವಾರಣೆ ಮಾಡುತ್ತೇವೆ. ತನಿಖೆ

ನಡೆಯುವುದಕ್ಕೆ ತಾವು ಸಹಕಾರ ಮಾಡಬೇಕು. ಈ ಬಗ್ಗೆ ನಾನು ಆಗಲೇ ಹೇಳಿದ್ದೇನೆ. ಸೌಜನ್ಯ ಪ್ರಕರಣವನ್ನು ನಾವು CBI ಗೆ ಕೊಟ್ಟು ಒಂದು ವರ್ಷವಾಗಿದೆ. ಸಿಬಿಐ ಕೈಯಿಂದ ಏನು ಆಗಲಿಲ್ಲ. ನಮಗೆ ಯಾವುದೇ ಪ್ರತಿಷ್ಠೇ ಇಲ್ಲ. ನಮಗೆ ನಮ್ಮ ಪೋಲೀಸ್‌ನವರು CID ಯವರು 15–20 ದಿವಸ ಅಂದರೆ ಈ ಸದನ ಮುಗಿಯುವುದರೊಳಗಾಗಿ ಒಂದು preliminary report ಅನ್ನು ಸಂಪೂರ್ಣವಾದ ಮಾಹಿತಿಯೊಟ್ಟಿಗೆ ಕೊಡುತ್ತೇವೆ ನಂತರ ಬೇಕಾದರೆ ನಾವು ಚರ್ಚೆ ಮಾಡೋಣ. ಅವರಿಗೆ ಏನಾದರೂ ಸಂಶಯವಿದ್ದರೆ ಆ ಸಮಯದಲ್ಲಿ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳೋಣ.

ಅಧ್ಯಕ್ಷರು:– ಮೊದಲು ಈ ಬಗ್ಗೆ report ಬರಲಿ.

ಶ್ರೀ ಜಗದೀಶ್ ಶೆಟ್ಟರ್:– ಈಗ ಅವರು ಕೊಟ್ಟಿರುವಂತಹ ಉತ್ತರವನ್ನು ಸಹ ನೋಡಿದ್ದೇವೆ. ಮೇಲ್ನೋಟಕ್ಕೆ ಆತ್ಮಹತ್ಯೆ ಎಂದು ಹೇಳಿ ಈ ಉತ್ತರದಲ್ಲಿಯೂ ಹೇಳಿದರು ಈ ಬಗ್ಗೆ ನಿನ್ನೆಯ ದಿನ ಪೋಲೀಸ್ ಆಯುಕ್ತರವರು ಸಹ ಹೇಳಿದರು. ನಾನು ಅದನ್ನೇ ಪ್ರಶ್ನೆ ಮಾಡುತ್ತಿದ್ದೇನೆ. ನಿನ್ನೆಯ ದಿನ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. Forensic Science ಅವರೆಲ್ಲ ಅಧಿಕಾರಿಗಳು ಎಲ್ಲವನ್ನೂ ಈ ಬಗ್ಗೆ ಇದುವರೆಗೂ ಸಹ report ಹೊರಗಡೆ ಬಂದಿರುವುದಿಲ್ಲ. ಈಗಾಗಲೇ ಈ ಬಗ್ಗೆ ನಿನ್ನೆ ರಾತ್ರಿಯೇ ತನಿಖೆಯನ್ನು ಮಾಡಿ ಇಷ್ಟರೊಳಗೆ report submit ಮಾಡಿದ್ದಾರೆಂದು ಸಹ ಗೊತ್ತಿಲ್ಲ. ಇಷ್ಟರವರೆಗೂ submit ಮಾಡಿಲ್ಲವೆಂದರೆ ಅದು ನನಗೆ ಅರ್ಥವಾಗುತ್ತಿಲ್ಲ. ನಿನ್ನೆಯ ದಿನ ಯಾರ್‍ಯಾರು ಅಧಿಕಾರಿಗಳು ತನಿಖೆಯನ್ನು ಮಾಡಿದ್ದಾರೆ, ಅವರು ಪೋಲೀಸ್ ಆಯುಕ್ತರವರಿಗೆ ಮಾಹಿತಿಯನ್ನು ಕೊಟ್ಟುಬಿಟ್ಟು ಅದರ ಆಧಾರದ ಮೇಲೆ ಮೇಲ್ನೋಟಕ್ಕೆ ಇದು ಆತ್ಮಹತ್ಯೆ ಎಂದು ಅನಿಸಿತು ಅದಕ್ಕೆ ಪೋಲೀಸ್ ಕಮೀಷನರ್‌ರವರು ಆ ರೀತಿಯಾಗಿ statement ಕೊಟ್ಟಿದ್ದಾರೆ. ನಿನ್ನೆ ಸುಮಾರು 7.30 ಘಟನೆಯಾದ ಮೇಲೆ ಅಲ್ಲಿ ಚರ್ಚೆ ನಡೆದಂತಹ ಸಂದರ್ಭದಲ್ಲಿ ಇವತ್ತು ಪೋಲೀಸ್ ಆಯುಕ್ತರವರು 8.30 ಗಂಟೆಗೆ statement ಕೊಡುತ್ತಾರೆ. ಅಷ್ಟರೊಳಗಡೆಯೇ preliminary ತನಿಖೆಯು ಮುಗಿದುಹೊಯಿತೇ? ಇಲ್ಲಿ ಮಾನ್ಯ ಮುಖ್ಯಮಂತ್ರಿಗಳ

ಹೇಳಿಕೆಯಲ್ಲಿ ಏನಾದರೂ ಗಂಭೀರತೆ ಇದೆಯೇ? ಅಷ್ಟರೊಳಗೆ ಅಂದರೆ ಒಂದು ತಾಸಿನಲ್ಲಿ ತನಿಖೆಯು ಮುಗಿದು prima facie ಪೊಲೀಸ್ ಆಯುಕ್ತರು ಈ ರೀತಿಯಾಗಿ ಇದು ಆತ್ಮಹತ್ಯೆ ಎಂದು conclusion ಬರುತ್ತಾರೆಂದರೆ ಇದರ ಹಿನ್ನೆಲೆ ಏನು ಎಂದು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಿನ್ನೆಯ ದಿನ ಏನು ಹೇಳಿದ್ದಾರೆಂದರೆ ಇವತ್ತು ಬೆಳಿಗ್ಗೆಯೇ ಹೇಳಿದರು ಆ ರೀತಿಯಾಗಿ ಹೇಳುವುದಕ್ಕೆ ನನಗೆ ಹಕ್ಕಿದೆ ಎಂದು ಹೇಳಿದ್ದಾರೆ. ಈ ರೀತಿಯಾಗಿ ನಿಗೂಢವಾಗಿ ಇವತ್ತು ಸತ್ತುಹೋದಂತಹ ವ್ಯಕ್ತಿಯ ಬಗ್ಗೆ... ಒಬ್ಬ ಐಎಎಸ್ ಅಧಿಕಾರಿ ನಿಗೂಢವಾಗಿ ಸಂಶಯಾಸ್ಪದವಾಗಿ ಸತ್ತುಹೋದಂತಹ ಸಂದರ್ಭದಲ್ಲಿ ಈ ರೀತಿಯಾಗಿ conclusion ಬಂದುಬಿಟ್ಟರೆ ಹೇಗೇ? ಇನ್ನು ಈ ಬಗ್ಗೆ postmortem ಆಗಿರುವುದಿಲ್ಲ.

ಅಧ್ಯಕ್ಷರು:– ಮಾನ್ಯ ವಿರೋಧಪಕ್ಷದ ನಾಯಕರೆ, ಈ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಪಿ. ರಾಜೀವ್ ರವರು ಹೇಳಿದ್ದಾರಲ್ಲಾ ಇಂತಹ ಒಬ್ಬ ಅಧಿಕಾರಿ ಆತ್ಮಹತ್ಯೆ ಮಾಡಿಕೊಳ್ಳುವಂತಹ ಸನ್ನಿವೇಶಕ್ಕೆ ಬಂದಿದ್ದರೆ ಏನಾದರೂ ಒಂದು ಪ್ರಬಲವಾದಂತಹ ಕಾರಣ ಇರಬೇಕು.

ಶ್ರೀ ಜಗದೀಶ್ ಶೆಟ್ಟರ್:– Definitely..

ಅಧ್ಯಕ್ಷರು:– ಆ ಕಾರಣ ತನಿಖೆಯಿಂದ ಆಗಬೇಕಲ್ಲವೇ ರಾಜೀವ್‌ರವರೆ,

ಶ್ರೀ ಪಿ. ರಾಜೀವ್:– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನಾನು ಸಹ ಮಾತನಾಡುತ್ತೇನೆ.

ಶ್ರೀ ಮಧುಬಂಗಾರಪ್ಪ:– ರಾಜೀವ್‌ರವರನ್ನೇ ಅದರ ಅಧಿಕಾರಿಯನ್ನಾಗಿ ಮಾಡಿಬಿಡಿ. ಇದು ಅವರ ಅಧ್ಯಕ್ಷತೆಯಲ್ಲಿಯೇ ಆಗಲಿ.

ಶ್ರೀ ಪಿ. ರಾಜೀವ್:– ಸನ್ಮಾನ್ಯ ಸಭಾಧ್ಯಕ್ಷರೆ, ...

ಶ್ರೀ ಜಗದೀಶ್ ಶೆಟ್ಟರ್:– ಅವರು ಕಳೆದ ಹಲವಾರು ದಿವಸಗಳಿಂದ ಈ Commercial Tax office ಗೆ ಅಧಿಕಾರಿಯಾಗಿ ಬಂದ ಮೇಲೆ ಕಳೆದ 15 ದಿವಸ, 1 ಮತ್ತು 2 ತಿಂಗಳುಗಳಿಂದ ಅವರು ಕೆಲವೊಂದು important

builders, developers, real estate ಗಳ ಮೇಲೆ ದಾಳಿ ಮಾಡಿದ್ದಾರೆ ಮತ್ತು ಈ ಬಗ್ಗೆ tax ಅನ್ನು collect ಸಹ ಮಾಡಿಕೊಂಡಿದ್ದಾರೆ. ಸರ್ಕಾರದ ಬೊಕ್ಕಸಕ್ಕೆ ನೂರಾರು ಕೋಟಿ ರೂಪಾಯಿಗಳನ್ನು ಜಮಾ ಮಾಡಿಸಿದ್ದಾರೆ. ಕೇವಲ ಕೆಲವೇ ದಿವಸಗಳ ಅವಧಿಯಲ್ಲಿ ಇವೆಲ್ಲವನ್ನು ನೋಡಿಕೊಂಡು ಈಗ ಇರುವಂತಹ ಮಾಹಿತಿಯ ಪ್ರಕಾರ ಇವತ್ತು ಯಾವುದೋ ಒಂದು ದೊಡ್ಡ ಕಂಪನಿಯ ಮೇಲೆ ದಾಳಿ ಮಾಡುವಂತಹ ಸಿದ್ಧತೆಯನ್ನು ಮಾಡಿಕೊಂಡಿರುವಂತಹ ಸುದ್ದಿಗಳು ಸಹ ಇವತ್ತು ಬರುತ್ತಿವೆ. ಈ ಎಲ್ಲಾ ಹಿನ್ನೆಲೆಯನ್ನು ನೋಡಿದಾಗ ಇದು suspicious ಅಂದರೆ ಸಂಶಯಾಸ್ಪದ ಸಾವು ಎಂದು ನಮಗೆ ನಿಶ್ಚಿತವಾಗಿ ಬರುತ್ತದೆ. ನಾನು ಈ ಬಗ್ಗೆ conclude ಮಾಡುತ್ತೇನೆ. ಪೊಲೀಸ್ ಆಯುಕ್ತರು prima facie suicide ಎಂದು ಒಂದು ಹಂತಕ್ಕೆ ಬಂದು ಬಿಟ್ಟಿದ್ದಾರೆ. ಮಾನ್ಯ ಗೃಹಮಂತ್ರಿಗಳು ಒಂದು statement ಕೊಟ್ಟರು. ಮಾನ್ಯ ಮುಖ್ಯಮಂತ್ರಿಗಳು ಆ ರೀತಿಯಾಗಿ ಒಂದು statement ಕೊಟ್ಟರು. ಈ ಬಗ್ಗೆ ತನಿಖೆಯನ್ನು ನಮ್ಮ ಪೊಲೀಸ್ ಅಧಿಕಾರಿಗಳಿಂದ ಮಾಡಿಸುತ್ತೇವೆ. ಇದನ್ನು ಯಾರ ಕೈಯಿಂದ ಮಾಡಿಸುತ್ತಾರೆ. ಅಲ್ಲಿ DCP ಗಳು ನಿನ್ನೆಯಿಂದ ತನಿಖೆಯನ್ನು ಪ್ರಾರಂಭ ಮಾಡಿದ್ದಾರೆ. ಸಿಓಡಿಯಿಂದ ತನಿಖೆಯನ್ನು ಮಾಡಿಸುತ್ತೇವೆಂದು ಹೇಳುತ್ತಿದ್ದಾರೆ. ಇದರಿಂದ ಏನಾದರೂ ಸತ್ಯಾಂಶ ಬರುವುದಕ್ಕೆ ಸಾಧ್ಯವಿದೆಯಾ, ಇದರಿಂದ ನ್ಯಾಯ ಬರುವುದಕ್ಕೆ ಸಾಧ್ಯವಿದೆಯೇ? ಇದರಿಂದ prestige ತೆಗೆದುಕೊಳ್ಳುವುದಂಥದ್ದೇನೂ ಇಲ್ಲ. ಇವತ್ತು ನಾನು ಈ ಬಗ್ಗೆ ಹೇಳುತ್ತೇನೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಾಗಲಿ, ಮಾನ್ಯ ಗೃಹ ಮಂತ್ರಿಗಳಾಗಲಿ ಇವರು prestige ತೆಗೆದುಕೊಳ್ಳುವುದು ಬೇಕಾಗಿಲ್ಲ. ಇಡೀ ರಾಜ್ಯದ ಜನರಿಗೆ ಸಂದೇಶ ಕಳುಹಿಸಬೇಕಾದರೆ,

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹಸಚಿವರು):- ನಾವು ಏನಾದರೂ statement ಕೊಡಬೇಕಾದರೆ, ನಮಗೆ ಮಾಹಿತಿ, ಸುಳಿವು ಇರುತ್ತದೆ. ಅದರ ಆಧಾರದ ಮೇಲೆ ಹೇಳುತ್ತೇವೆಯೇ ಹೊರತು ಊಹಾಪೋಹದ ಮೇಲೆ

ನಾವು ಹೇಳಲಿಕ್ಕೆ ಆಗುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಊಹಾಪೋಹದ ಮೇಲೆ ಮಾತನಾಡುತ್ತಿದ್ದಾರೆಯೇ ಹೊರತು ಯಾವುದೇ...

ಶ್ರೀ ಜಗದೀಶ್ ಶೆಟ್ಟರ್:- ನಾವು ನಿಷ್ಪಕ್ಷಪಾತವಾಗಿ ನಾವು ತನಿಖೆಯನ್ನು ಮಾಡುತ್ತೇವೆ ಈ ಬಗ್ಗೆ ನಾವು ಏನು ಹಿಂದೇಟು ಹಾಕುವುದಿಲ್ಲ. ಈ ಬಗ್ಗೆ ಸಿಬಿಐ ತನಿಖೆಯು ಆಗಲೇ ಬೇಕು ಎಂದು ಅವರು ಹೇಳಬೇಕಾಗಿತ್ತು.

(ಗೊಂದಲ)

ನಾವು ಈ ರೀತಿಯಾಗಿ ವಾದ ಮಾಡುವಂತಹ ಅವಶ್ಯಕತೆ ಇಲ್ಲ. ಇಷ್ಟು ಹೇಳಬೇಕಾದಂತಹ ಅವಶ್ಯಕತೆಯೇ ಇಲ್ಲ. ಈ ಬಗ್ಗೆ ಸಿಬಿಐ ತನಿಖೆಯು ಆಗಲೇಬೇಕು. ಇವರಿಗೆ ಹೆದರಿಕೆ ಇದೆ. ಈ ಪ್ರಕರಣವನ್ನು ಮುಚ್ಚಿಹಾಕುವಂತಹ ಪ್ರಯತ್ನ ನಡೆಯುತ್ತಿದೆ.

(ಗೊಂದಲ)

(ಈ ಹಂತದಲ್ಲಿ ಬಿಜೆಪಿ ಸದಸ್ಯರು ಸದನ ಬಾವಿಗೆ ಬಂದು ಧರಣಿ ನಿರತರಾದರು)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):- ಇದು ರಾಜಕೀಯ ಅಲ್ಲದೆ ಇನ್ನೇನು? ನಿಮಗೆ ಪೊಲೀಸ್‌ನವರ ಮೇಲೆ ನಂಬಿಕೆಯಿಲ್ಲ. ನೀವು ಎಲ್ಲಾ ವಿಷಯಕ್ಕೆ CBI, CBI ತನಿಖೆ ಎಂದರೆ ಹೇಗೆ? ಈ ಬಗ್ಗೆ ನಾವು ನಿಷ್ಪಕ್ಷಪಾತವಾಗಿ ತನಿಖೆಯನ್ನು ಮಾಡಿಸುತ್ತೇವೆ. ಅವರು ಒಬ್ಬ ದಕ್ಷ ಅಧಿಕಾರಿ, ಪ್ರಾಮಾಣಿಕ ಅಧಿಕಾರಿಯಾಗಿದ್ದರು. ಅವರ ಸಾವಿನ ಕಾರಣ ಗೊತ್ತಾಗಬೇಕು. ಈ ಬಗ್ಗೆ ಜನರಿಗೆ ಸತ್ಯ ಗೊತ್ತಾಗಬೇಕು. ಅದನ್ನೇ ನಾವು ಪ್ರಾಮಾಣಿಕವಾಗಿ ಮಾಡಿಸುತ್ತೇವೆ.

(ಸದನದ ಬಾವಿಯಲ್ಲಿ ಬಿಜೆಪಿ ಸದಸ್ಯರು ಘೋಷಣೆ ಕೂಗುತ್ತಿದ್ದರು)

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಒಬ್ಬ ಪ್ರಾಮಾಣಿಕ ಅಧಿಕಾರಿಯ ಬಗ್ಗೆ ರಕ್ಷಣೆ ಮಾಡುವುದಿಲ್ಲ. ಮಲ್ಲಿಕಾರ್ಜುನ ಬಂಡೆಯವರೂ ಕೂಡ ...

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಈ ತರಹ ರಾಜಕಾರಣವನ್ನು ಮಾಡುವುದಕ್ಕೆ ಹೋದರೆ ಅರ್ಥವಿರುವುದಿಲ್ಲ. ನೀವು ಎಲ್ಲದಕ್ಕೂ ರಾಜಕಾರಣ ಮಾಡುತ್ತಿದ್ದೀರಿ. ಇಲ್ಲಿ ಪ್ರತಿಯೊಂದಕ್ಕೂ ರಾಜಕಾರಣ. It is purely politics. ಈ issue ವನ್ನು politicize ಮಾಡುತ್ತಿದ್ದಾರೆ.

(ಬಿಜೆಪಿ ಸದಸ್ಯರು ಸದನದ ಬಾವಿಯಲ್ಲಿದ್ದುಕೊಂಡು ಘೋಷಣೆ ಕೂಗುತ್ತಿದ್ದರು)

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಪ್ರಕರಣವನ್ನು ಮುಚ್ಚಿಹಾಕುವಂತಹ ಕೆಲಸವನ್ನು ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ವಿರೋಧಪಕ್ಷದ ನಾಯಕರೆ, ಒಂದು ನಿಮಿಷ ಎಲ್ಲರೂ ತಾಳಿ. ರವಿಯವರೆ ಒಂದು ನಿಮಿಷ ತಾಳಿ. ಈಗ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹಸಚಿವರು ಒಂದು ಮಾತನ್ನು ಹೇಳಿದ್ದಾರೆ. ಆ ಅಧಿಕಾರಿಯ ವಿಚಾರದಲ್ಲಿ ಅವರಿಗೂ ಅಷ್ಟೇ ವಿಶ್ವಾಸ ಮತ್ತು ನಂಬಿಕೆ ಇದೆ.

(ಗೊಂದಲ)

ಜೊತೆಗೆ ಅವರ ಮಾವನವರು ಕೂಡ ಅವರಿಗೆ ತೀರಾ ಪರಿಚಯಸ್ಥರು ಇದ್ದಾರೆ. ನೀವು ಹೇಳುವುದರ ಜೊತೆಗೆ ವಿಶೇಷವಾಗಿ... ಈ ಸದನ ಮುಕ್ತಾಯವಾಗುವುದರೊಳಗೆ ಒಂದು ಮಧ್ಯಂತರ ವರದಿಯನ್ನು ತರಿಸಿಕೊಂಡು ಹೇಳುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವನ್ನು ಮಧ್ಯಾಹ್ನ 2.01 ಗಂಟೆಗೆ ಭೋಜನ ವಿರಾಮಕ್ಕೆಂದು ಮುಂದೂಡಿ ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ನಿರ್ಣಯಿಸಿತು)

ಸದನವು ಮಧ್ಯಾಹ್ನ 03 ಗಂಟೆ 22 ನಿಮಿಷಕ್ಕೆ ಸಮಾವೇಶಗೊಂಡಿತು.

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಐ.ಎ.ಎಸ್ ಅಧಿಕಾರಿಯಾಗಿದ್ದ ದಿವಂಗತ ಡಿ.ಕೆ. ರವಿ ರವರ ಸಾವಿನ ಹಿನ್ನೆಲೆಯಲ್ಲಿ ಸದರಿ ಪ್ರಕರಣವನ್ನು ಸಿ.ಬಿ.ಐ ತನಿಖೆಗೆ ಒಪ್ಪಿಸುವಂತೆ ಒತ್ತಾಯಿಸಿ ಸದನದ ಬಾವಿಯಲ್ಲಿ ಧರಣಿ ನಡೆಸುತ್ತಿದ್ದರು.)

ಅಧ್ಯಕ್ಷರು:– ಹೇಳಿ ಈಗ ಏನು ಸಮಾಚಾರ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಸರ್ಕಾರ ಎಷ್ಟು ಬೇಜವಾಬ್ದಾರಿ ಇದೆ ಎಂದು ನೋಡಿ. ಸದನದಲ್ಲಿ ಯಾರೂ ಮಂತ್ರಿಗಳಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮುಂದಿನ ಬೆಂಚ್ ಎಲ್ಲವೂ ಖಾಲಿಯಿವೆ. ಮತ್ತೆ ಏನೇನು ಕತೆ ready ಮಾಡುತ್ತಿದ್ದಾರೋ ಗೊತ್ತಿಲ್ಲ. ಮುಂದಿನ ಬೆಂಚಿನವರೆಲ್ಲಾ ಕುಳಿತು ಇನ್ನಾವ ಕತೆ ಎಣೆಯುತ್ತಿದ್ದಾರೋ ಗೊತ್ತಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಸರ್ಕಾರಕ್ಕೆ ಯಾವುದೇ ವಿಷಯದಲ್ಲಿಯೂ ಗಂಭೀರತೆ ಇಲ್ಲ. ಇದು ಬೇಜವಾಬ್ದಾರಿ ಸರ್ಕಾರ. ಮಂತ್ರಿಗಳಿಲ್ಲ, ಯಾರಿಗೂ ಜವಾಬ್ದಾರಿ ಇಲ್ಲ. ಬಹಳ ಬೇಜವಾಬ್ದಾರಿಯುತ ಸರ್ಕಾರ ಇದು.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಎಷ್ಟು ಜವಾಬ್ದಾರಿ ಇದೆ ಎಂದು ನೋಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಸದನ ನಡೆಯಬೇಕಾದರೆ ಕೋರಂ ಅನ್ನು ಸಹ ನಾವು ವಿರೋಧ ಪಕ್ಷದವರೇ ಮಾಡಬೇಕು. ಆ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಸ್ಮಶಾನ ಮೌನ.

(ಗೊಂದಲ)

ಅಧ್ಯಕ್ಷರು:– ಈಗ ಒಳಗಡೆ ಸ್ವಲ್ಪ ಮಾತನಾಡೋಣವೆ?

ಶ್ರೀ ಜಗದೀಶ್ ಶೆಟ್ಟರ್:– ಸರಿ ಅಧ್ಯಕ್ಷರೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಸದನ ಇರಲಿ, ಸರ್ಕಾರವೇ order ನಲ್ಲಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಈ ಸರ್ಕಾರಕ್ಕೇನಾದರೂ ಗಂಭೀರತೆ ಇದ್ದಿದ್ದರೆ ಆ ಮುಂದಿನ ಬೆಂಚಿನಲ್ಲಿರುವ ಒಬ್ಬರಾದರೂ ಪ್ರಮುಖರು ಇಲ್ಲದೆ ಹೋದರೆ ಯಾರನ್ನು ಉದ್ದೇಶಿಸಿ ಮಾತನಾಡುವುದು? ಅವರಿಗೆ ಜವಾಬ್ದಾರಿ ಇದೆಯೆ?

ಅಧ್ಯಕ್ಷರು:– ಒಂದು, ಎರಡು, ಮೂರು, ನಾಲ್ಕು ಜನ ಮಂತ್ರಿಗಳಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಇನ್ಯಾವುದಾದರೂ ಕತೆ ಹುಟ್ಟು ಹಾಕುವುದಕ್ಕೆ ಕುಳಿತಿದ್ದಾರ ಹೊರಗಡೆ? ಹೊಸ ಹೊಸ ಕತೆಗಳನ್ನು ಪ್ರಾರಂಭ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಈಗ ಸದನವನ್ನು 15 ನಿಮಿಷ ಮುಂದೂಡಲಾಗಿದೆ.

(ಮಧ್ಯಾಹ್ನ 03 ಗಂಟೆ 26 ನಿಮಿಷಕ್ಕೆ ಸದನವನ್ನು 15 ನಿಮಿಷಗಳ ಕಾಲ ಮುಂದೂಡಲಾಯಿತು.)

ಸದನದ ಕಲಾಪವು 4 ಗಂಟೆ 11 ನಿಮಿಷಕ್ಕೆ ಪ್ರಾರಂಭವಾಯಿತು

ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು

(ಈ ಹಂತದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರುಗಳು ಬಾವಿಯಲ್ಲಿ ನಿಂತು ಧರಣಿಯನ್ನು ಮುಂದುವರೆಸಿದ್ದರು ಹಾಗೂ ಸಿಬಿಐ ತನಿಖೆ ಆಗಲೇಬೇಕೆಂದು ಘೋಷಣೆಯನ್ನು ಕೂಗುತ್ತಿದ್ದರು)

ಅಧ್ಯಕ್ಷರು:- ಈಗ ತಾವು ಪ್ರತಿಭಟನೆಯನ್ನು ಮಾಡಿದ್ದೀರಿ. ಸರ್ಕಾರಕ್ಕೆ ನಿಮ್ಮ ಪ್ರತಿಭಟನೆ ಅರಿವಾಗಿದೆ ಎಂದು ನಮ್ಮೆಲ್ಲರಿಗೂ ಮನವರಿಕೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆ. ಅವರು ತಮ್ಮ ಇನ್ನೊಂದು ಆಲೋಚನೆಯನ್ನು ತಿಳಿಸಿ ಹೇಳಿದರೆ ನಿಮಗೂ ಕೂಡ convince ಆಗಬಹುದು ಎಂದು ನನಗೆ ಆಶಯ ಇದೆ. ಆದರೆ ಸಾಕು, symbolic ಇರಬೇಕು, continuous ಅಲ್ಲ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ವಿಚಾರ ಹೇಳಿದ್ದೇನೆ. ಇದು ಬಹಳ ಗಂಭೀರವಾದಂತಹ ವಿಚಾರ ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ಅವರು ಒಳ್ಳೆಯ ಅಧಿಕಾರಿ ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ಅವರಿಗೆ ಈ ರೀತಿಯಲ್ಲಿ ಸಾವು ಬಂದಿರುವುದು ಕೂಡ ದುರದೃಷ್ಟಕರ. ಈ ರೀತಿಯ ಸಾವು ಬರಬಾರದಾಗಿತ್ತು. ಒಬ್ಬ ಒಳ್ಳೆಯ ಅಧಿಕಾರಿಗೆ ಈ ರೀತಿ ಆಯಿತಲ್ಲ ಎಂದು ನಮಗೂ ನೋವಿದೆ.

ನಾನು ಈಗಾಗಲೇ ಪ್ರಸ್ತಾಪ ಮಾಡಿದಂತೆ ನಾವು ಇಲ್ಲಿ ಯಾರನ್ನೂ ರಕ್ಷಣೆ ಮಾಡಬೇಕಾದಂತಹ ಅಗತ್ಯವಿಲ್ಲ. ಸಿಐಡಿ ಮೂಲಕ ತನಿಖೆ ನಿಷ್ಪಕ್ಷಪಾತವಾಗಿ ಮಾಡಿಸುತ್ತೇವೆ, ತನಿಖೆಯನ್ನು ಎಷ್ಟು ತ್ವರಿತವಾಗಿ ಮಾಡಿಸುವುದಕ್ಕೆ ಸಾಧ್ಯವಾಗುತ್ತದೆ, ಅಷ್ಟು ತ್ವರಿತವಾಗಿ ಮಾಡಿಸಿ ಸತ್ಯವನ್ನು ಹೊರಗಡೆ ತರುವಂತಹ ಪ್ರಯತ್ನವನ್ನು ಮಾಡುತ್ತೇವೆ. ಆಮೇಲೆ in the meanwhile postmortem report, FSL report, finger print, interim report ಬಂದಮೇಲೆ, ಅಗತ್ಯ ಬಿದ್ದರೆ ತಿಳಿಸುವಂತಹ ಪ್ರಯತ್ನವನ್ನು ಮಾಡುತ್ತೇವೆ.

ಅಧ್ಯಕ್ಷರು:– 30ನೇ ತಾರೀಖಿನೊಳಗೆ ಏನು investigation ಆಗಿದೆ ಎಂದು ಅದರ ಬಗ್ಗೆ ವಸ್ತುಸ್ಥಿತಿ ಸ್ವಲ್ಪ ತಿಳಿದರೆ ಸಾಕು.

ಶ್ರೀ ಸಿದ್ದರಾಮಯ್ಯ:– ನಾವು ಏನು ಪ್ರೋಗ್ರೆಸ್ ಆಗಿದೆ ಎನ್ನುವುದನ್ನು ತಿಳಿಸುತ್ತೇವೆ.

ಅಧ್ಯಕ್ಷರು:– ಆದ್ದರಿಂದ ದಯವಿಟ್ಟು...

ಶ್ರೀ ಆರ್. ಅಶೋಕ್:– ಮಾನ್ಯ ಅಧ್ಯಕ್ಷರೆ, ಇದನ್ನು ಸಿಬಿಐ ತನಿಖೆಗೆ ಕೊಡಬೇಕು. ಇಲ್ಲಿ ನಾವು ಮತ್ತು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರೆಲ್ಲ ಮಾತನಾಡಿದ್ದೇವೆ. ಸಿಬಿಐ ಗೆ ಕೊಟ್ಟರೆ ಮಾತ್ರ ಇದಕ್ಕೆ ನ್ಯಾಯ ಸಿಗುವುದು.

ಶ್ರೀ ಸಿದ್ದರಾಮಯ್ಯ:– ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳುವುದು ಒಳ್ಳೆಯದು. ಸರ್ಕಾರದ ಗಮನವನ್ನು ಸೆಳೆದಿದ್ದೀರಿ, ಸಮಸ್ಯೆಯ ಗಂಭೀರತೆಯನ್ನು ತಿಳಿಸಿದ್ದೀರಿ.

ಶ್ರೀ ಆರ್. ಅಶೋಕ್:– ಕೋಲಾರ ಮತ್ತು ರಾಜ್ಯದಲ್ಲಿ ಜನ ಹೋರಾಟ ಮಾಡುತ್ತಿದ್ದಾರೆ. ಅವರಿಗೆ ಯಾರು ಉತ್ತರ ಕೊಡುತ್ತಾರೆ?

ಶ್ರೀ ಸಿದ್ದರಾಮಯ್ಯ:– ನಮಗೂ ಕೂಡ ಮನವರಿಕೆಯಾಗಿದೆ. ನಾವೂ ಕೂಡ ಅಷ್ಟೆ ಗಂಭೀರತೆಯಿಂದ ತನಿಖೆ ಮಾಡಿಸುತ್ತೇವೆ.

ಶ್ರೀ ಆರ್. ಅಶೋಕ್:- ನಾವು ವಿಧಾನ ಸಭೆಗೆ ಬಂದು ಸಿಬಿಐ ತನಿಖೆಗೆ ಕೊಡಿ ಎಂದು ಹೇಳುವುದಕ್ಕಿಂತ ಮೊದಲೇ ನಿನ್ನೆ ರಾತ್ರಿ ಜನರೆಲ್ಲಾ ಮಾಧ್ಯಮದಲ್ಲಿ ಸಿಬಿಐ ತನಿಖೆಗೆ ಕೊಡಿ ಎಂದು ಹೇಳಿ ರೊಚ್ಚಿಗೆದ್ದಿದ್ದಾರೆ. ಅದರಿಂದ ಸರ್ಕಾರ ಏನು ತಪ್ಪು ಮಾಡಿಲ್ಲವೆನ್ನುವುದಾದರೆ ಸಿಬಿಐಗೆ ಕೊಡಲಿ, ತನಿಖೆಯಾಗಲಿ, ಏನಂತೆ? ಏನು ತೊಂದರೆ ಇದೆ?

ಅಧ್ಯಕ್ಷರು:- ಅಶೋಕ್ ರವರೆ, ತಾವು ಸರ್ಕಾರ ನಡೆಸಿದವರು ಮತ್ತು ಉಪ ಮುಖ್ಯಮಂತ್ರಿಯಾಗಿ ಕೆಲಸವನ್ನು ಮಾಡಿದ್ದೀರಿ. ಸರ್ಕಾರಗಳು ತೀರ್ಮಾನ ಮಾಡುವಾಗ ಅನೇಕ ವಿಚಾರಗಳನ್ನು ಆಲೋಚನೆ ಮಾಡಿ ಮಾಡಬೇಕಾಗುತ್ತದೆ.

ಶ್ರೀ ಆರ್. ಅಶೋಕ್:- ಮಾನ್ಯ ಅಧ್ಯಕ್ಷರೆ, ಹತ್ತು ನಿಮಿಷ ಮುಂದೆ ಹಾಕಿ.

ಅಧ್ಯಕ್ಷರು:- ಜನ ಕೂಗುತ್ತಾರೆಂದು ನಾವು ಇಲ್ಲಿ ಕೂಗುವುದಕ್ಕೆ ಆಗುವುದಿಲ್ಲ. ಈಗ ಈ ಸದನ 30ನೇ ತಾರೀಖಿನವರೆಗೂ ನಡೆಯುತ್ತದೆ ಅಲ್ಲ, ಅಷ್ಟರೊಳಗೆ ಒಂದು interim ಏನು investigation ನಡೆಯುತ್ತದೆ, ಅದನ್ನು ಸದನಕ್ಕೆ ತಿಳಿಸುವಂತಹ ಕೆಲಸವನ್ನು ಮಾಡುತ್ತೇನೆ. ಆಗ ವಸ್ತುಸ್ಥಿತಿ ಏನು ಎಂದು ತಿಳಿದುಕೊಳ್ಳೋಣ. ಆಗ investigation ವೇಗದಲ್ಲಿ ಆಗಿರುವಂತಹ ಬಗ್ಗೆ ನಿಮಗೆ ನಂಬಿಕೆ, ವಿಶ್ವಾಸ ಬಂದರೆ ಆಗ ತಾನೇ ತಾನಾಗಿ ಗೊತ್ತಾಗುತ್ತದೆ. ಇದು ಬಜೆಟ್ ಸೆಷನ್, ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಆಕಸ್ಮಾತಾಗಿ ಇಂತಹ ಒಂದು ಸನ್ನಿವೇಶ ಬಂದಿದೆ. ಇನ್ನು ಬಹಳ ಜನ ಮಾತನಾಡುವವರಿದ್ದು, 31ನೇ ತಾರೀಖಿನವರೆಗೆ ಬಜೆಟ್ ಸೆಷನ್‌ಗೆ ಸಮಯವನ್ನು ಬಳಸಿಕೊಳ್ಳಬೇಕಾದಂತಹ ಅಗತ್ಯ ಇದೆ. ದಯವಿಟ್ಟು ನಮಗೆ ಸಹಕಾರ ಮಾಡಿ. ಸಾಕು, ನೀವು ಸಾಕಷ್ಟು ಪ್ರೊಟೆಸ್ಟ್ ಮಾಡಿದ್ದೀರಿ, ನಿಮ್ಮ ಅಭಿಪ್ರಾಯವನ್ನು ತಿಳಿಸಿದ್ದೀರಿ, ಸರ್ಕಾರಕ್ಕೂ ಮನವರಿಕೆಯಾಗಿದೆ.

ಶ್ರೀ ಆರ್. ಅಶೋಕ್:– ಈಗ ಕಮಿಷನರ್‌ರವರಿಂದ ಹಿಡಿದು ಗೃಹ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳಿಂದ ಹಿಡಿದು ಎಲ್ಲರೂ ಆತ್ಮಹತ್ಯೆ ಎಂದು ಒಂದು ಮಧ್ಯಂತರ ವರದಿ ಕೊಟ್ಟುಬಿಟ್ಟಿದ್ದಾರೆ. ಇದು ಅಸಹಜ ಸಾವು ಎಂದು ಇಡೀ ರಾಜ್ಯದ ಜನ ಹೇಳುತ್ತಿದ್ದಾರೆ.

ಅಧ್ಯಕ್ಷರು:– ಈಗ ಒಂದು ಕೆಲಸ ಮಾಡೋಣ.

ಶ್ರೀ ಸಿದ್ದರಾಮಯ್ಯ:– ನೀವು ಪೊಲೀಸ್ ಇಲಾಖೆಯಲ್ಲಿ...

ಶ್ರೀ ಆರ್. ಅಶೋಕ್:– ನಾವು ಇದ್ದಾಗ ಚೆನ್ನಾಗಿದ್ದರು, ಈಗ ಕೆಟ್ಟುಹೋಗಿದೆ.

ಶ್ರೀ ಸಿದ್ದರಾಮಯ್ಯ:– ಮೂರು ವರ್ಷ ಇದ್ದರು, ಅದಕ್ಕೆ ಪೊಲೀಸ್‌ನವರ ಮೇಲೆ ನಂಬಿಕೆ ಇಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಆರ್. ಅಶೋಕ್:– ಪೊಲೀಸ್‌ನವರ ಮೇಲೆ ನಂಬಿಕೆ ಇದೆ. ಒತ್ತಡ ಜಾಸ್ತಿಯಾಗಿದೆ. ನಾವಿದ್ದಾಗ ಒತ್ತಡವಿಲ್ಲದೆ ಕೆಲಸ ಮಾಡುತ್ತಿದ್ದರು.

ಶ್ರೀ ಸಿದ್ದರಾಮಯ್ಯ:– ಮೂರು ವರ್ಷ Home Minister ಆಗಿ ನಮ್ಮ ಕರ್ನಾಟಕದ ಪೊಲೀಸ್‌ನವರ ಬಗ್ಗೆ ನಂಬಿಕೆ ಇಲ್ಲವೆಂದು ಹೇಳುತ್ತಾರಲ್ಲ.

ಶ್ರೀ ಆರ್. ಅಶೋಕ್:– ಅವರು ಒಳ್ಳೆಯವರು, ನಿಮ್ಮ ಒತ್ತಡ ಜಾಸ್ತಿಯಾಗಿದೆ.

ಮಾನ್ಯ ಸದಸ್ಯರು:– ನೀವು ಅವರ ಮೇಲೆ ಒತ್ತಡ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ:– No, ಯಾವ ಒತ್ತಡ?

ಶ್ರೀ ಆರ್. ಅಶೋಕ್:– ಪೊಲೀಸ್‌ನವರ ಮೇಲೆ ಒತ್ತಡ ಜಾಸ್ತಿಯಾಗಿದೆ, ಅದಕ್ಕೆ ಅವರು ಕೈಚೆಲ್ಲಿ ಕುಳಿತು ಬಿಟ್ಟಿದ್ದಾರೆ, ಅವರು ಏನೂ ಕೆಲಸ ಮಾಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ:- ನಾನು ಕಳೆದ ಮೂವತ್ತು ವರ್ಷಗಳಿಂದ, ನಾನು district in charge minister ಇರಬಹುದು, ಅಥವಾ ಮುಖ್ಯಮಂತ್ರಿಯಾಗಿರಬಹುದು, ಬೇರೆ ಯಾವುದೇ ಮಂತ್ರಿಯಾಗಿರಬಹುದು, ಪೊಲೀಸ್‌ನವರ ಜೊತೆ ನಾನು interfere ಆಗಿದ್ದೇನೆಂದು ಯಾರಾದರೂ ಹೇಳಿಬಿಟ್ಟರೆ ನೀವು ಹೇಳಿದ ಹಾಗೆ ಕೇಳುತ್ತೇನೆ. ನಾವು ಯಾವತ್ತೂ ಕೂಡ ಪೊಲೀಸ್‌ನವರ ವಿಚಾರದಲ್ಲಿ interfere ಆಗುವುದಿಲ್ಲ. ಅವರಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದ್ದೇನೆ. ಏಕೆಂದರೆ ಅವರು ತನಿಖೆ ಮಾಡಬೇಕು, ಸತ್ಯ ಹೊರಗಡೆ ಬರಬೇಕು, ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎನ್ನುವುದು ನಮ್ಮ ಉದ್ದೇಶ. ಅದು ಆಗಬೇಕಾದರೆ political interference ಇರಕೂಡದು. ನಾನು ಅದರಲ್ಲಿ ನಂಬಿಕೆ ಇಟ್ಟುಕೊಂಡಿರುವವನು. ಆ ಕಾರಣದಿಂದ ನೀವು ವಿಶ್ವಾಸ ಇಡಬೇಕು. ಇಲ್ಲ, ಯಾರೂ ಮಾಡುವುದಿಲ್ಲ. We will not allow. We are not going to protect anybody.

(ಈ ಹಂತದಲ್ಲಿ ಬಾವಿಯಲ್ಲಿ ನಿಂತು ಮಾನ್ಯ ಸದಸ್ಯರುಗಳು ಘೋಷಣೆಯನ್ನು ಕೂಗುತ್ತಿದ್ದರು)

ಶ್ರೀ ಸಿದ್ದರಾಮಯ್ಯ:- ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತಾರೆ, ಕೇಳಿ.

ಅಧ್ಯಕ್ಷರು:- ಈಗ ಮಾನ್ಯ ಮುಖ್ಯಮಂತ್ರಿಗಳೇ ಐದು ನಿಮಿಷದ ಮಟ್ಟಿಗೆ ಅಲ್ಲಿಗೆ ಬಂದುಬಿಡಿ, ಅವರಲ್ಲಿ ಎರಡು ಮೂರು ಜನರನ್ನು ಕರೆಸಿಬಿಡುತ್ತೇನೆ.

ಸಿದ್ದರಾಮಯ್ಯ:- ಕರೆಯಿರಿ, ನಾವು ಬರುತ್ತೇವೆ, ನಮಗೆ ಅಭ್ಯಂತರವಿಲ್ಲ.

ಅಧ್ಯಕ್ಷರು:- ಈಗ 15 ನಿಮಿಷದ ಮಟ್ಟಿಗೆ ಸದನವನ್ನು ಮುಂದೂಡಲಾಗಿದೆ.

(ಸದನದ ಕಲಾಪವು 4 ಗಂಟೆ 16 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ 15 ನಿಮಿಷದ ನಂತರ ಸೇರಲು ತೀರ್ಮಾನಿಸಿತು)

(ಸದನವು ಸಂಜೆ 4 ಗಂಟೆ 55 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷಗಳ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು)

(ಗೊಂದಲ)

ಅಧ್ಯಕ್ಷರು:– ಈಗ ನಿಮ್ಮ ನಿಲುವನ್ನು ಹೇಳಿದಿರಿ.

(ಗೊಂದಲ)

ಶ್ರೀ ಆರ್. ಅಶೋಕ್:– ಮಾನ್ಯ ಅಧ್ಯಕ್ಷರೆ, ನಾವು ಇಷ್ಟೊತ್ತು ಹೇಳಿದ್ದು 'ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ' ಎನ್ನುವಂತೆ ಆಗಿದೆ. ಸರಕಾರಕ್ಕೆ ನಾವು ಎಷ್ಟೇ ಹೇಳಿದರೂ ಅವರು ಕೇಳುವ stage ನಲ್ಲಿ ಇಲ್ಲ. ನಾವು CBI ತನಿಖೆಗೆ ಕೊಡಬೇಕೆಂದು ಒತ್ತಾಯಿಸುತ್ತೇವೆ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– ಸಾವಿನ ಮೇಲೆ ರಾಜಕಾರಣ ಬೇಡ. ಅಧಿವೇಶನ ನಡೆಸಲು ಅವಕಾಶ ಮಾಡಿ ಕೊಡಿ.

(ಗೊಂದಲ)

ಅಧ್ಯಕ್ಷರು:– ಈಗ ನಿಮ್ಮ ನಿಲುವನ್ನು ನೀವು ಸ್ಪಷ್ಟ ಪಡಿಸಿರಿ. ಸರಕಾರವೂ ಕೂಡ ತೆರದ ಮನಸ್ಸಿನಲ್ಲಿದೆ, ಬೇಗ ಅದನ್ನು ತನಿಖೆ ಮಾಡಿ ಮಧ್ಯಂತರ ಸುದ್ದಿ ತರುತ್ತೇನೆಂದು ಹೇಳಿದ್ದಾರೆ. ದಯವಿಟ್ಟು ಎಲ್ಲೋ ಒಂದು ಕಡೆ, ಮಾನ್ಯ ಸುರೇಶ್ ಕುಮಾರ್ ರವರೆ, ಯಾವಾಗಲೂ ಎಳೆದು ಹರಿಯಬಾರದು. ಎಳೆಯಬೇಕು ಎಷ್ಟರವರೆಗೆ ಎಳೆಯಬೇಕೋ ಅಷ್ಟೇ ಎಳೆಯಬೇಕು. ಮುರಿಯುವವರೆಗೆ ಎಳೆಯಬಾರದು. ಆದ್ದರಿಂದ, ಸಾಕು ಬಿಡಿ. ಇದು budget session ದಯವಿಟ್ಟು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ.

(ಗೊಂದಲ)

ಶ್ರೀ ಆರ್. ಅಶೋಕ್:– ಅಧ್ಯಕ್ಷರೆ, ನಿಷ್ಠಾವಂತ ಅಧಿಕಾರಿಗಳು ರಾಜ್ಯದಲ್ಲಿ ಕೆಲಸ ಮಾಡುವಂಥ ಸ್ಥಿತಿಯಲ್ಲಿಲ್ಲ. ಆದ್ದರಿಂದ, ದಯವಿಟ್ಟು ಈ ಅಧಿಕಾರಿಯ ಸಾವಿಗೆ ಏನು ಕಾರಣ?

(ಗೊಂದಲ)

ಅಧ್ಯಕ್ಷರು:– ನೋಡೋಣ. ಅವರು ಮೊದಲು ತನಿಖೆ ಮಾಡಲಿ. ವರದಿ ಬರಲಿ. ತನಿಖೆಯಲ್ಲಿ ಏನು ಸನ್ನಿವೇಶ ಬರುತ್ತದೆಂದು ನೋಡೋಣ. ನಿಮ್ಮ ಜೊತೆಗೆ ನಾನು ಇರುತ್ತೇನೆ.

(ಗೊಂದಲ)

ಶ್ರೀ ಆರ್. ಅಶೋಕ್:– ಅವರು already report ಕೊಟ್ಟು ಬಿಟ್ಟಿದ್ದಾರೆ. ಬಂಡೆ ಸಾವು ಆಯಿತು. ಸರ್ಕಾರ ಏನು ಮಾಡಿತು?

(ಗೊಂದಲ)

ಅಧ್ಯಕ್ಷರು:– ಮಾನ್ಯ ಸುರೇಶ್ ಕುಮಾರ್‌ರವರೆ, ನೀವು ಅನುಭವ ಇರುವವರು. ನೀವು ಹೊಸಬರೇನು ಅಲ್ಲ. ನೀವೂ ಮಂತ್ರಿಯಾದಂಥವರು, ಸರ್ಕಾರ ನಡೆಸಿದಂತವರು, ಅವರೂ ಸರ್ಕಾರ ನಡೆಸಿದಂಥವರು, ಇವೆಲ್ಲಾ ಇರುತ್ತೆ. ವಿರೋಧ ಪಕ್ಷದಲ್ಲಿದ್ದಾಗ ತಾವು ಹೇಳುವಂಥ ಉದಾಹರಣೆಗಳು ಇರುತ್ತವೆ.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಸರಕಾರ ಕೂಡ ಒಂದು ಕಡೆ ಒಪ್ಪಿಕೊಂಡಿದೆ.

(ಗೊಂದಲ)

ಅಧ್ಯಕ್ಷರು:– ಈಗ ನಿಮ್ಮ ನಿಲುವನ್ನು ನೀವು ಹೇಳಿದ್ದೀರಿ. ಸರಕಾರ ಕೂಡ ಅಷ್ಟೊಂದು ಕದ close ಮಾಡಿ ಇಟ್ಟುಕೊಂಡಿಲ್ಲ.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಇದಕ್ಕೆ CBI ತನಿಖೆಯೇ ಪರಿಹಾರ.

(ಗೊಂದಲ)

ಅಧ್ಯಕ್ಷರು:- ಸರಕಾರದವರು ತನಿಖೆ ಮಾಡಿಸುತ್ತೇವೆ ಏನಾದರೂ ಸನ್ನಿವೇಶ ಬಂದರೆ ನೋಡೋಣವೆಂದು ಹೇಳಿದ್ದಾರೆ. ಅದಕೋಸ್ಕರ ದಯವಿಟ್ಟು ನಂಬಿಕೆ ಇಡಿ, ಸಹಕಾರ ಮಾಡಿ.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಅಧ್ಯಕ್ಷರೆ, ನಿಷ್ಪಕ್ಷಪಾತವಾಗಿ ತನಿಖೆಯಾಗಲೇಬೇಕು ಎನ್ನುವುದಾದರೆ CBI ಸಂಸ್ಥೆಗೆ ಒಪ್ಪಿಸಿಬಿಡಿ.

(ಗೊಂದಲ)

ಅಧ್ಯಕ್ಷರು:- ಸಾಕು ಬಿಡಿ. ಈಗ ಬಹುಶಃ ಎರಡು ವರ್ಷಗಳ ಅವಧಿಯಲ್ಲಿ ಇಷ್ಟು ದೀರ್ಘಕಾಲ ಪ್ರತಿಭಟನೆ ಮಾಡಿರತಕ್ಕಂಥ ಸಂದರ್ಭಗಳು ಇರಲಿಲ್ಲ. ಇನ್ನು ಬೇಕಾದಷ್ಟು ಜನಪರವಾದಂಥ issues, ಸಮಸ್ಯೆಗಳು ಇವೆ.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಇದು ಕೂಡ ಜನಪರವಾದ issue. ಒಬ್ಬ ದಕ್ಷ ಅಧಿಕಾರಿ ಅದೂ ಒಬ್ಬ IAS ಅಧಿಕಾರಿಗೆ ಈ ರೀತಿಯಾಗಿದೆ ಎಂದರೆ ನಾವು ಆಲೋಚನೆ ಮಾಡಬೇಕಲ್ಲವೇ?

(ಗೊಂದಲ)

ಅಧ್ಯಕ್ಷರು:- ಈಗ ಅರಣ್ಯ ಜಮೀನು ಬಗ್ಗೆ.

(ಗೊಂದಲ)

ಶ್ರೀ ಆರ್. ಅಶೋಕ್:- ಅಧ್ಯಕ್ಷರೆ, ಒಂದು ನಿಮಿಷ. ಬೆಳಿಗ್ಗೆಯಿಂದ ಜೆಡಿಎಸ್ ಇರಬಹುದು, ಬಿಜೆಪಿ ಇರಬಹುದು, ಪಕ್ಷೇತರ ಸದಸ್ಯರು ಇರಬಹುದು, ನಾವು ಎಲ್ಲರೂ ಮಾತನಾಡಿದ್ದೇವೆ. ಜನಗಳ ಭಾವನೆ ಇದೆ. ಅಲ್ಲಿ ಜನಗಳು ರೊಚ್ಚಿಗೆದ್ದು ದಾಂಧಲೆ ಮಾಡುತ್ತಿದ್ದಾರೆ. ಇಷ್ಟೆಲ್ಲಾ ಆದರೂ ಸರಕಾರ ಒಂದು ರೀತಿ ಬಂಡೆ ಸಾವು ಆಯಿತಲ್ಲಾ! ಆ ರೀತಿ ಮಾಡುತ್ತಿದ್ದಾರೆ. ಇವರೇನಾದರೂ CBI ಗೆ ಕೊಡಲಿಲ್ಲವೆಂದರೆ ರಾತ್ರಿ ನಾವು ಇಲ್ಲೇ ಮಲಗುತ್ತೇವೆ.

(ಗೊಂದಲ)

ಅಧ್ಯಕ್ಷರು:– ಆ ರೀತಿ ಮಾಡಬೇಡಿ.

(ಗೊಂದಲ)

ಶ್ರೀ ಆರ್. ಅಶೋಕ್:– ಮಾನ್ಯ ಮುಖ್ಯಮಂತ್ರಿಗಳು ಬಂದು announce ಮಾಡುವವರೆಗೂ, ರಾತ್ರಿಯಾದರೂ ಸರಿ, ನಾವು ಇಲ್ಲಿ ಮಲಗುತ್ತೇವೆ, ಧರಣಿ ಮುಂದುವರಿಸುತ್ತೇವೆ.

(ಗೊಂದಲ)

ಅಧ್ಯಕ್ಷರು:– ಆ level ಗೆ ಹೋಗಬೇಡಿ.

(ಗೊಂದಲ)

ಶ್ರೀ ಆರ್. ಅಶೋಕ್:– ದಯವಿಟ್ಟು CBI ತನಿಖೆ ಆಗಬೇಕು. ಯಾವುದೇ ಕಾರಣಕ್ಕೂ ಮುಚ್ಚಿಹಾಕುವಂಥ ಪ್ರಯತ್ನ ಮಾಡಬಾರದು. ದಯವಿಟ್ಟು CBI ತನಿಖೆಗೆ ಕೊಡಬೇಕು. ಇದು ಜನಗಳ ಹೋರಾಟ, ಶಾಸಕರ ಹೋರಾಟ ಅಲ್ಲ. ಇದನ್ನು ಮುಚ್ಚಿ ಹಾಕುವಂಥ ಪ್ರಯತ್ನ ಸರಕಾರ ಮಾಡುತ್ತಿದೆ. ಇದನ್ನು ಮುಚ್ಚಿ ಹಾಕುವುದಕ್ಕೆ ಅವಕಾಶ ಕೊಡುವುದಿಲ್ಲ. ನಾವು ರಾತ್ರಿಯಾದರೂ ಸಹ ಧರಣಿ ಮಾಡುತ್ತೇವೆ.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಸರಕಾರ CBI ತನಿಖೆಗೆ ಒಪ್ಪದಿದ್ದರೆ ನಾವೂ ಕೂಡ ಸದನದಲ್ಲಿ ಉಳಿಯತಕ್ಕಂಥ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:– ಈಗ ಸದನವನ್ನು ನಾಳೆ ಬೆಳಗ್ಗೆ 11 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಗೊಂದಲ)

(ಸದನವು ಸಂಜೆ 5 ಗಂಟೆಗೆ ಮುಂದೂಡಿ ಪುನಃ ದಿನಾಂಕ :18–03–2015 ರಂದು ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)